No. MAG (3)/NPP/77/2017-18

RNI No. KARKAN-2012/53684/Dtd. 19-12-2013

ವಾಗ್ರಚನೆಯೆಂಬುದು ಕರ್ಣಾಟವಯ್ಯ

# ನೊಳಂಬವಾಣಿ

## NOLAMBAVANI Kannada Quarterly

ಕನ್ನಡ ತ್ರೈಮಾಸಿಕ

ಸಂಪಾದಕರು : ಡಾ. ಬಿ.ಸಿ.ರಾಕೇಶ್

| Volume-15<br>ಸಂಪುಟ–15 | July, AAugust, September 2025<br>ಜುಲೈ, ಆಗಸ್ಟ್, ಸೆಪ್ಟೆಂಬರ್ 2025 | Rs. 25/-<br>ರೂ. 25/- | Page - 56<br>ಪುಟಗಳು – 56 | Issue-3<br>ಸಂಚಿಕೆ–3 |
|---|---|---|---|---|

**ದಿನಾಂಕ 06–09–2025ರಂದು ಬೆಂಗಳೂರಿನ ಬಸವೇಶ್ವರ ನಗರದಲ್ಲಿ ಉದ್ಘಾಟನೆಗೊಂಡ ಸಾಂಸ್ಕೃತಿಕ ನಾಯಕ ಬಸವೇಶ್ವರರ ಪುತ್ಥಳಿ**



॥ ಶ್ರೀ ಗುರು ಸಿದ್ಧರಾಮೇಶ್ವರ ಸ್ವಾಮಿ ಪ್ರಸನ್ನ ॥

# ಶ್ರೀ ಗುರು ಸಿದ್ಧರಾಮೇಶ್ವರರ 853 ನೇ ಜಯಂತಿ ಮಹೋತ್ಸವ ಸಮಿತಿ ಹೊಳಲ್ಕೆರೆ

ಚಿತ್ರದುರ್ಗ ಜಿಲ್ಲೆ.

ನೊಳಂಬ ಲಿಂಗಾಯತ ಸಂಘ (ರಿ), ಬೆಂಗಳೂರು



## ಮನವಿ

ವಾಕ್ಸಿದ್ಧಿಯುಳ್ಳವರು ಕೋಟ್ಯಾನುಕೋಟಿ: ಮನೋಸಿದ್ಧಿಯುಳ್ಳವರು ಕೋಟ್ಯಾನುಕೋಟಿ,
ಭಾವಸಿದ್ಧಿಯುಳ್ಳವರು ಕೋಟ್ಯಾನುಕೋಟಿ, ನಿಮ್ಮ ಸಿದ್ಧಿಯುಳ್ಳವರು ಇಲ್ಲ ಕಂಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಆತ್ಮೀಯ ಬಂಧುಗಳೇ,

ವಿಶ್ವಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ ವಚನಸಾಹಿತ್ಯ ಕರ್ನಾಟಕದಲ್ಲಿ ವಿಜೃಂಭಿಸಿದ್ದು, 12 ನೇ ಶತಮಾನದಲ್ಲಿ ಶಿವಶರಣರ ಸಂಗಮದಿಂದ ಬಸವಾದಿ ಶಿವಶರಣರು ಕನ್ನಡ ಸಾಹಿತ್ಯಕ್ಕೆ ಹೊಸ ಪರಂಪರೆಯನ್ನು ಹಾಕಿಕೊಟ್ಟವರು. ಕಾಯಕ ಮತ್ತು ದಾಸೋಹ ಪ್ರಜ್ಞೆಯಿಂದ ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸಿದವರು. ಅಸ್ಪೃಶ್ಯತೆ, ಅಸಮಾನತೆ, ಮೇಲುಕೀಳುಗಳ ಪಿಡುಗುಗಳ ವಿರುದ್ಧ ಹೋರಾಡಿದವರು ಶ್ರೀ ಗುರು ಸಿದ್ಧರಾಮೇಶ್ವರರು

ಅಂದು ಕಂಡು ಬಂದ ಶರಣ ಸಮೂಹದಲ್ಲಿ ಕರ್ಮಯೋಗಿ ಮತ್ತು ಶಿವಯೋಗಿಗಳಾಗಿ ಸಿದ್ಧರಾಮಶಿವಯೋಗಿ ಕಂಗೊಳಿಸುತ್ತಾರೆ. ಶ್ರೀ ಗುರು ಸಿದ್ಧರಾಮೇಶ್ವರರು ನಮ್ಮೆಲ್ಲರ ಆರಾಧ್ಯ ದೈವ, ಮಹಾತಪಸ್ವಿ, ಕಾಯಕಯೋಗಿ, ಲೋಕಕಲ್ಯಾಣಕ್ಕೆ ದುಡಿದು ಕೆರೆ, ಕಟ್ಟೆ, ಕಾಲುವೆ, ಬಾವಿಗಳನ್ನು ನಿರ್ಮಿಸುವುದರ ಮೂಲಕ ಜನಪರ ಕಾರ್ಯಗಳನ್ನು ಮಾಡಿದರು.

12ನೆಯ ಶತಮಾನದಲ್ಲಿ ಸಿದ್ಧರಾಮೇಶ್ವರರು ಸೊನ್ನಲಗಿ (ಸೊಲ್ಲಾಪುರ) ದಕ್ಷಿಣ ಭಾಗಕ್ಕೆ ಲೋಕ ಸಂಚಾರ ಮಾಡುತ್ತಾ ಹೊಳಲ್ಕೆರೆ ತಾಲ್ಲೂಕಿನ ಚಿನ್ನಸಮುದ್ರ , ಗಂಗಸಮುದ್ರ, ಹೊಳಲ್ಕೆರೆಯಲ್ಲಿಯೂ ತಮ್ಮ ಕಾಯಕ ಕಾರ್ಯಗಳನ್ನು ಮಾಡುತ್ತಾ ಜನರಿಗೆ ಕಾಯಕ ದೀಕ್ಷೆಯನ್ನು ಹಾಗೂ ಲಿಂಗ ದೀಕ್ಷೆಯನ್ನು ನೀಡುತ್ತಾ ಕಾಯಕ ಯೋಗಿಯಾದ ಶ್ರೀ ಸಿದ್ಧರಾಮೇಶ್ವರರು ಜಪ ತಪಗಳನ್ನು ಮಾಡುತ್ತಾ ಜನರನ್ನ ಹರಸಿದರು.

ನಮ್ಮ ದೇಶದಲ್ಲಿ ಧೈರ್ಯ, ಸಾಹಸ, ವೀರತ್ವಕ್ಕೆ ಸಾಕ್ಷಿಭೂತವಾಗಿ ಚಿತ್ರದುರ್ಗದ ಏಳು ಸುತ್ತಿನ ಕಲ್ಲಿನ ಕೋಟೆ ನಿರ್ಮಾಣದಲ್ಲಿ ತನ್ನದೇ ಆದ ಐತಿಹಾಸಿಕ ಗುರುತನ್ನು ಹೊಂದಿರುವ ಚಿತ್ರದುರ್ಗದ ಪಾಳೇಗಾರರ ಮೂಲಪುರುಷ. ಕಾಮಗೇತಿ ತಿಮ್ಮಣ್ಣ ನಾಯಕನನ್ನು ವಿಜಯನಗರದ ಅರಸರು ಕ್ರಿ.ಶ 1508ರಲ್ಲಿ ಹೊಳಲ್ಕೆರೆಗೆ ಅಮರ ನಾಯಕನನ್ನಾಗಿ ನೇಮಿಸಿದರು. ನಂತರ ಹಿರಿಯೂರಿನಲ್ಲಿ ಕೊನೆಗೆ ಚಿತ್ರದುರ್ಗದಲ್ಲಿ ಅದೇ ಅಧಿಕಾರ ಪದವಿಗೆ ಅವರನ್ನು ನೇಮಿಸಲಾಯಿತು. ಚಾರಿತ್ರಿಕವಾಗಿ ಈ ಚಿತ್ರದುರ್ಗದ ಪಾಳೇಪಟ್ಟಿನ ನಿಜವಾದ ಸ್ಥಾಪಕ ಕಾಮಗೇತಿ ತಿಮ್ಮಣ್ಣ ನಾಯಕ. ಪಾಳೇಗಾರರು ರಾಜ್ಯದಲ್ಲಿಯೆ ಪ್ರಸಿದ್ಧಿಯಾದ ಬೃಹತ್ ಗಣೇಶನ ಶಿಲ್ಪವನ್ನು, ಶ್ರೀ ವೀರಭದ್ರೇಶ್ವರ ದೇವಾಲಯವನ್ನು, ಶಾಸನ, ಕೆರೆ-ಕಟ್ಟೆಯನ್ನು ನಿರ್ಮಿಸುವುದರ ಮೂಲಕ ವಿಜಯನಗರ ಸಾಮ್ರಾಜ್ಯದ ವೈಭವಕ್ಕೆ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ.

ಕೋಟೆ ನಾಡಾದ ಚಿತ್ರದುರ್ಗ ಜಿಲ್ಲೆಯ ಅರೆ ಮಲೆನಾಡು ಹೊಳಲ್ಕೆರೆಯು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಈ ಹೊಳಲ್ಕೆರೆಯು ಚಿತ್ರದುರ್ಗದಿಂದ ಪಶ್ಚಿಮಕ್ಕೆ 30 ಕಿ.ಮೀ, ಹೊಸದುರ್ಗ ದಿಂದ ಉತ್ತರಕ್ಕೆ 30 ಕಿ.ಮೀ, ದಾವಣಗೆರೆಯಿಂದ ದಕ್ಷಿಣಕ್ಕೆ 64 ಕಿ.ಮೀ ಹಾಗೂ ಶಿವಮೊಗ್ಗದಿಂದ ಪೂರ್ವಕ್ಕೆ 70 ಕಿ.ಮೀ ದೂರದಲ್ಲಿದೆ.

ಸದ್ಭಕ್ತ ಶರಣ ಬಂಧುಗಳೇ, ತಮಗೆಲ್ಲ ತಿಳಿದಿರುವಂತೆ ಶ್ರೀ ಗುರುಸಿದ್ಧರಾಮೇಶ್ವರರ 853 ನೇ ಜಯಂತಿಯನ್ನು ಹೊಳಲ್ಕೆರೆಯಲ್ಲಿ 2026ರ ಜನವರಿ 14 ಮತ್ತು 15 ರಂದು ಆಚರಿಸಲು ತೀರ್ಮಾನಿಸಲಾಗಿದ್ದು, ತಾವುಗಳು ಈ ಮಹಾನ್ ಕಾರ್ಯಕ್ಕೆ ಭಾವಶುದ್ಧಿಯಿಂದ ತಮ್ಮ ತನು-ಮನ-ಧನ ಸಹಾಯ ಮಾಡುವುದರ ಮೂಲಕ ಶ್ರೀ ಸಿದ್ಧರಾಮೇಶ್ವರರ ಕೃಪೆಗೆ ಪಾತ್ರರಾಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇವೆ.

ಸಂಪರ್ಕಕ್ಕಾಗಿ: ಅಧ್ಯಕ್ಷರು : 9945071163 ಪ್ರಧಾನಕಾರ್ಯದರ್ಶಿ : 9945948034 ಖಜಾಂಚಿ : 9448879117

: ತಮ್ಮ ವಿಶ್ವಾಸಿ :

ಅಧ್ಯಕ್ಷರು/ಉಪಾಧ್ಯಕ್ಷರು/ಕಾರ್ಯದರ್ಶಿ ಮತ್ತು ಉಪಸಮಿತಿಗಳು

853 ನೇ ಶ್ರೀ ಗುರು ಸಿದ್ಧರಾಮೇಶ್ವರ ಮಹೋತ್ಸವ ಸೇವಾ ಸಮಿತಿ, ಹೊಳಲ್ಕೆರೆ.



ತನುವ ಕೊಟ್ಟು ಗುರುವನೊಲಿಸಬೇಕು
ಮನವ ಕೊಟ್ಟು ಲಿಂಗವನೊಲಿಸಬೇಕು
ಧನವ ಕೊಟ್ಟು ಜಂಗಮವನೊಲಿಸಬೇಕು
ಈ ತ್ರಿವಿಧವ ಹೊರಗುಮಾಡಿ, ಹರೆಯ ಹೊಯಿಸಿ ಕುರುಹ
ಪೂಜಿಸುವ ಗೊರವರ ಮೆಚ್ಚ ಕೂಡಲಸಂಗಮದೇವಾ

– ವಿಶ್ವಗುರು ಬಸವಣ್ಣ


## ಸಂಪಾದಕ ಮಂಡಳಿ

**ಸಂಪಾದಕರು :**
ಡಾ. ರಾಕೇಶ್ ಬಿ.ಸಿ., ಎಂ.ಎ.,ಪಿಹೆಚ್.ಡಿ.,

**ಸದಸ್ಯರು**
ಕತ್ತಿಗೆ ಬಿ.ಚನ್ನಪ್ಪ, ಎಂ.ಎ., ಬಿ.ಇಡಿ.,
ಎಂ.ದಯಾನಂದಸ್ವಾಮಿ, ಎಂ.ಎ.,
(ಪತ್ರಿಕೋದ್ಯಮ ಡಿಪ್ಲೊಮಾ)
ಡಾ. ಟಿ.ಬಿ.ಬಸವರಾಜು, ಪಿಹೆಚ್.ಡಿ.,
ಎಸ್.ಎಂ.ಜಯದೇವ್, ಎಂ.ಎ.,
ಎಸ್.ಯೋಗಾನಂದ, ಎಂ.ಎಸ್‌ಸಿ., ಕೆ.ಇ.ಎಸ್.
ಬಿ.ಆರ್.ಭುಜೇಂದ್ರ, ಎಂ.ಎ., ಬಿ.ಇಡಿ., ಎಲ್.ಎಲ್.ಬಿ.,
ಆರ್.ರಂಗನಾಥ್, ಎಂ.ಎ.,
ಎ.ಬಿ.ಬಸವರಾಜು, ಬಿ.ಕಾಂ.,
ಎಂ.ಎಸ್.ಪ್ರಸಾದ್, ಎಂ.ಇ.,
ಸುಶೀಲಾ ಸದಾಶಿವಯ್ಯ, ಎಂ.ಎ.,

**ಅಕ್ಷರ ವಿನ್ಯಾಸ :**
ಸತೀಶ್ ಹೆಬ್ಬಾಕ
ದಿನಕ ಗ್ರಾಫಿಕ್ಸ್, ತುಮಕೂರು.


| | ಚಂದಾದರ | ಸಾಂಸ್ಥಿಕ |
|---|---|---|
| ಬಿಡಿ ಸಂಚಿಕೆ | ರೂ. 25/– | 25 |
| ಆಜೀವ ಸದಸ್ಯರು | ರೂ. 2000/– | 3000 |
| ಪೋಷಕರು | ರೂ. 10,000/– | 15,000 |
| ಮಹಾಪೋಷಕರು | ರೂ. 25,000/– | 30,000 |

('ನೊಳಂಬ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ವಿಚಾರ, ವಿಶ್ಲೇಷಣೆಗಳಿಗೆ ಲೇಖಕರು ಜವಾಬ್ದಾರರು
– ಸಂಪಾದಕರು)


Published From :
**B.K.CHANDRASHEKAR**
NOLAMBA ADHYAYANA KENDRA
NOLAMBA LINGAYATHA SANGHA (R)
# 1/A, 1st Cross, 3rd Stage, 4th Block,
Basaveshwara Nagar,
Bengaluru - 560 079. Karnataka.
Phone : 080-2348 5401
E-mail : nolambavani@gmail.com

Editor :
Dr. Rakesh B.C.
Cell : 9481910181


## ಒಳ ಪುಟಗಳಲ್ಲಿ.......


1. ಸಂಪಾದಕೀಯ : ಡಾ. ಬಿ.ಸಿ.ರಾಕೇಶ್ 05
2. ಅಧ್ಯಕ್ಷರ ಆಶಯ ನುಡಿ : ಬಿ.ಕೆ.ಚಂದ್ರಶೇಖರ್, ಅಧ್ಯಕ್ಷರು. 06
3. ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು : ಕೆ.ಬಿ.ಶಶಿಧರ್ ಹಾಮನಕೆರೆ 07
4. ಬಸವಣ್ಣ ಉತ್ತು, ಬಿತ್ತಿ, ಬೆಳೆದ ಬೀಜಗಳು ನಾವು : ಚಂದ್ರಶೇಖರ ತಿ. ಚಂದಾಳ 08
5. ಜನಗಣತಿ ಮತ್ತು ನೊಳಂಬ ಲಿಂಗಾಯತರು : ಟಿ.ಆರ್.ಚಂದ್ರಶೇಖರ್ 12
6. ಕಂಬಿ ಹಬ್ಬ – 2025 : ಕಿರಣ್ ಎಸ್.ಬಿ. 14
7. ಪಾಶ್ಚಿಮಾತ್ಯ ಶಿಕ್ಷಣ, ಜ್ಞಾನದೀಪ, ಶರಣರ ಸಂಸ್ಕಾರ ನಂದಾದೀಪ : ಮಲ್ಲೇಶಪ್ಪ ಟಿ.ಎಸ್. 15
8. ಬಸವಣ್ಣನಿಂದ ಬದುಕಿತೀ ಲೋಕವೆಲ್ಲ : ಡಾ. ಡಿ.ಎನ್.ಯೋಗೀಶ್ವರಪ್ಪ 17
9. ದಯೆಯೆಂಬುದು ಮನುಷ್ಯನ ಹೃದಯದಲ್ಲಿ ಹುಟ್ಟುವಂತದ್ದು : ಸುಶೀಲಾ ಸೋಮಶೇಖರ್ 20
10. ಇರಿವ ನೊಳಂಬಾದಿರಾಜ ದಿಲೀಪ : ಆದಪ್ಪ ಹಾಸೋಡಿ 23
11. ನೊಳಂಬ ದೇವಾಲಯಗಳು : ಸಂ.ಕಿಂ.ಗೋವರ್ಧನ್ 27
12. ಇತಿಹಾಸ VS ವಾಟ್ಸಪ್ ಯೂನಿವರ್ಸಿಟಿ ಸ್ಟೋರೀಸ್ : ವಿನಯ್ ಆದಿಹಳ್ಳಿ 29
13. ಕನ್ನಡ ಚಿತ್ರರಂಗದ ಅದ್ಭುತ ಪ್ರತಿಭೆ – ಮಂಜುಳ : ಸುಶೀಲಾ ಸದಾಶಿವಯ್ಯ 31
14. ಆರೋಗ್ಯಾಮೃತ–40 : ಶ್ರೀ ಶ್ರೀ ಬಸವಾನಂದಸ್ವಾಮಿಗಳು 34
15. ಆರೋಗ್ಯಕ್ಕಾಗಿ ಆಯುರ್ವೇದ : ಡಾ. ಶ್ರೀಪಾದ ಎಚ್.ಎಸ್. 36
16. ಒಂದು ಊರಿನ ಕಥೆ ವ್ಯಥೆ : ಡಿ.ಬಿ.ಶಂಬುರಪ್ಪ 37
17. ಅನಂತದೆಡೆಗೆ ಸಂತ – ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ : ಆರ್.ರಂಗನಾಥ್ 41
18. ಸೇವೆ : ಆರ್.ರಾಜಯ್ಯ 43
19. ನೊಳಂಬರ ಕೆರೆಕಟ್ಟೆ ಬಾವಿಗಳು : ಶಿವಕುಮಾರ್ ಎಸ್. 45
20. ಪ್ರೊ. ಡಿ.ಹೆಚ್.ಪ್ಯಾಟಿ, ವ್ಯಕ್ತಿ ಪರಿಚಯ : ಡಾ. ರಾಕೇಶ್ ಬಿ.ಸಿ. 47
21. ಶ್ರೀ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆ : ಬಿ.ಪಲ್ಲವಿ ಪ್ರಸಾದ್ 48
22. ಕಪ್ಪು ಬಂಗಾರದ ಔಷಧಿಯ ಗುಣಗಳು : ಡಾ. ಹಾಲಪ್ಪ ಎಚ್.ಕುಂಟೆ 45 49


### ಜಾಹೀರಾತು ವಿವರ

| | |
|---|---|
| 1. ಕಪ್ಪು–ಬಿಳುಪು ಕಾಲು ಪುಟ | ರೂ. 2500/– |
| 2. ಕಪ್ಪು–ಬಿಳುಪು ಒಳ ಅರ್ಧಪುಟ | ರೂ. 4000/– |
| 3. ಒಳಪುಟ ಕಾಲುಪುಟ (ಮಲ್ಟಿ ಕಲರ್) | ರೂ. 4000/– |
| 4. ಕಪ್ಪು–ಬಿಳುಪು ಒಳ ಪೂರ್ಣಪುಟ | ರೂ. 6000/– |
| 5. ಒಳಪುಟ ಅರ್ಧಪುಟ (ಮಲ್ಟಿ ಕಲರ್) | ರೂ. 6000/– |
| 6. ಕಪ್ಪು–ಬಿಳುಪು ಸೆಂಟರ್ ಸ್ಪ್ರೆಡ್ | ರೂ. 10,000/– |
| 7. ಒಳಪುಟ ಪೂರ್ಣ ಪುಟ (ಮಲ್ಟಿ ಕಲರ್) | ರೂ. 12,000/– |
| 8. ರಕ್ಷಾಪುಟದ 2ನೇ/3ನೇ ಒಳಪುಟ (ಮಲ್ಟಿ ಕಲರ್) | ರೂ. 19,000/– |
| 9. ಸೆಂಟರ್ ಸ್ಪ್ರೆಡ್ ಪುಟ (ಮಲ್ಟಿ ಕಲರ್) | ರೂ. 20,000/–. |
| 10. ಹಿಂಬದಿ ರಕ್ಷಾ ಪುಟ (ಮಲ್ಟಿ ಕಲರ್) | ರೂ. 24,000/– |

# ನೊಳಂಬ ಲಿಂಗಾಯತ ಸಂಘದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

















# ಸಂಪಾದಕೀಯ



ಮಠಗಳನ್ನು ಆಂಗ್ಲಭಾಷೆಯಲ್ಲಿ ಮೊನಾಸ್ಟರೀಸ್ ಎಂದು ಕರೆಯುತ್ತಾರೆ. ಇಂಗ್ಲೀಷ್ ಶಬ್ದ ಮೂಲವಾದ ಈ ಗ್ರೀಕ್ ಶಬ್ದದ ಅರ್ಥ ಏಕಾಂತತೆ ಸಾಮಾಜಿಕ ಬಂಧನಗಳಿಂದ ಹೊರಬಂದು ಏಕಾಗ್ರಚಿತ್ತದಿಂದ ಧ್ಯಾನಾಸಕ್ತನಾಗಿರಲು ಏಕಾಂತತೆಯ ಅಗತ್ಯವೆಂದು ಎಲ್ಲ ಧರ್ಮಗಳಲ್ಲಿ ಹೇಳಲಾಗಿದೆ. ಇದೆಲ್ಲದಕ್ಕೂ ಮುಖ್ಯವಾಗಿ ಸನ್ಯಾಸಿಗಳಿಗೆ ಬೇಕಾಗಿರುವ ಗುಣವೆಂದರೆ ಸಹನೆ ಎಂಬುದು. ಮಠ ಪದಕ್ಕೆ ಸನ್ಯಾಸಿಯ ಕೊಠಡಿ, ಸಾಧಕರ ಕುಟೀರ, ವಿಹಾರ, ಶಿಕ್ಷಾಲಯ, ವಿದ್ಯಾಮಂದಿರ, ಮಹಾವಿದ್ಯಾಲಯ ಇತ್ಯಾದಿ ಅರ್ಥಗಳೂ ದೊರೆಯುತ್ತವೆ. ರೆ॥ ಕಿಟಲ್‌ರವರು ಮಠ ಪದಕ್ಕೆ "A hut, a college, a devotees cell, residence of a company of ascetic, a residence of guru, a school" ಅರ್ಥಗಳನ್ನು ಕೊಟ್ಟಿದ್ದಾರೆ. "ತಟದಲ್ಲಿಯಾಗಲಿ, ಮಠದಲ್ಲಿಯಾಗಲಿ ಹಠದ ಜಂಗಮನ ಕಾಟ ತಪ್ಪುವುದಿಲ್ಲ" ಎಂಬ ಗಾದೆ ಮಾತನ್ನು ಉದಾಹರಣೆಯಾಗಿ ನೀಡುವುದರಿಂದ ಮಠಗಳಲ್ಲಿ ಗುರುಗಳು ಆಚಾರ-ವಿಚಾರಗಳನ್ನು ಪಾಲಿಸುತ್ತಿದ್ದರೆಂಬ ಅಂಶ ವ್ಯಕ್ತವಾಗುತ್ತದೆ. ಕಿಟಲ್ ಮತ್ತು ಆಪ್ಟೆ ಅವರ ಮಠದ ಅರ್ಥ ವಿವರಣೆ ಸಮಾನವಾಗಿದೆ.

ಡಾ. ಪಿ.ವಿ.ಕಾಣೆ ಅವರು ತಮ್ಮ ಧರ್ಮಶಾಸ್ತ್ರದ ಇತಿಹಾಸದಲ್ಲಿ ಮಠವೆಂದರೆ ಸಾಧುಗಳು ವಾಸಿಸುವ ಕುಟೀರವೆಂದು ತಿಳಿಸುತ್ತಾರೆ. ಸರ್ ಮೋನಿಯರ್ ವಿಲಿಯಮ್ಸ್ ಅವರು ಮಠ ಎಂದರೆ ಸಾಧು ಸನ್ಯಾಸಿಗಳು ವಾಸಿಸುವ ಸ್ಥಳ, ಕುಟೀರ ಅಥವಾ ಮಹಾವಿದ್ಯಾಲಯ ಎಂದು ತಿಳಿಸುತ್ತಾರೆ. ಯಾವುದೇ ದೃಷ್ಟಿಯಿಂದ ನೋಡಿದರೂ ಮಠವು ಗುರುವೊಬ್ಬನ ಆಧ್ಯಾತ್ಮಿಕ ವಿದ್ಯಾಕೇಂದ್ರವಾಗಿದ್ದು, ವಿದ್ಯಾಭ್ಯಾಸಕ್ಕಾಗಿ ಅವನಲ್ಲಿಗೆ ಬರುವವರಿಗೆ ಆಶ್ರಯ ಕೊಡುವ ತಾಣ. ಒಂದು ಕಾಲಕ್ಕೆ ಆ ಸಂಸ್ಥೆಗಳು ಸಾರ್ವತ್ರಿಕವಾಗಿದ್ದು ಕಾಲಕ್ರಮದಲ್ಲಿ ಧರ್ಮ, ಶಿಕ್ಷಣ, ದಾಸೋಹ ಕೇಂದ್ರಗಳಾಗಿ ಬದಲಾದವು. ಕಾನೂನು ವ್ಯವಹಾರಗಳಲ್ಲಿ ಮಠದ ಅರ್ಥ ಆತ್ಮ ವಿದ್ಯೆಯಲ್ಲಿ ಸಾಧನೆಯನ್ನು ಗಳಿಸಿದ ಒಬ್ಬ ಮಹಾವ್ಯಕ್ತಿಯ ಹಿರಿತನದಲ್ಲಿ ನಡೆಯುವ ಒಂದು ಧಾರ್ಮಿಕ ಸಂಸ್ಥೆ. ಒಂದು ಬಗೆಯ ವಿಶಿಷ್ಟ ಸಂಪ್ರದಾಯದ ಸನ್ಯಾಸಿಗಳ ಉಪಯೋಗ ಹಾಗೂ ಅನುಕೂಲಕ್ಕಾಗಿ ಸ್ಥಾಪಿತವಾದದ್ದು. ಈ ಸನ್ಯಾಸಿಗಳು ಸಾಮಾನ್ಯವಾಗಿ ಅಂತಹ ಮಠದ ಅಧಿಕಾರಿಯು ಶಿಷ್ಯರಾಗಿ ಆಧ್ಯಾತ್ಮಿಕ ಶಿಕ್ಷಣ ಪಡೆಯುವವರಾಗಿರುತ್ತಾರೆ.


ಮಠ ಎಂದರೆ ಇಟ್ಟಿಗೆ ಕಬ್ಬಿಣಗಳಿಂದ ಕಟ್ಟಿದ ದೊಡ್ಡದೊಂದು ಕಟ್ಟಡ ಮಾತ್ರವಲ್ಲ, ಅದೊಂದು ಧಾರ್ಮಿಕ ಕೇಂದ್ರವಾಗಿ ಇಡೀ ಸಮಾಜವೇ ವಿಕಾಸಗೊಳ್ಳುವಂತೆ ಮಾಡುವ ಚೇತನಾ ಕೇಂದ್ರ ಎನ್ನಬಹುದು. ಮಠಗಳು ಮನುಕುಲದ ನಂದನಗಳು. ಮಠಗಳಿಂದಲೇ ಭಾರತದ ಸಂಸ್ಕೃತಿ ಉಳಿದಿರುವುದು, ಬೆಳೆದಿರುವುದು ಎಂಬುದು ಭಾರತದ ಪ್ರಥಮ ರಾಷ್ಟ್ರಪತಿಗಳಾದ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರ ಅಭಿಪ್ರಾಯವಾಗಿದೆ.

## ನಿನಗೆ ಕೇಡಿಲ್ಲದಂತೆ

ಈ ಎಲ್ಲ ಅಭಿಪ್ರಾಯಗಳ ಸಾರ ಮಠಗಳು ದೇವಾಲಯ ಹಾಗೂ ವಿದ್ಯಾಭ್ಯಾಸದ ಕೇಂದ್ರಗಳು ಎಂಬುದೇ ಆಗಿದೆ. ಇಂದಿಗೂ ಎಷ್ಟೋ ಹಳ್ಳಿಗಳಲ್ಲಿ ಶಾಲೆಗಳನ್ನು ಮಠ, ಅಯ್ಯಗಳ ಮಠ ಎಂದು ಕರೆಯುವುದು ವಾಡಿಕೆಯಲ್ಲಿದೆ. ಈಗಲೂ ಕೆಲ ಪೋಷಕರು ಮಕ್ಕಳನ್ನು ಮಠಕ್ಕೆ ಹೋಗುವುದಿಲ್ಲವೆ ? ಎಂದು ಕೇಳುತ್ತಾರೆ. ಮಠಗಳು ಮುಖ್ಯವಾಗಿ ಶೈಕ್ಷಣಿಕ ಕೇಂದ್ರಗಳಾಗಿಯೂ ಇದ್ದುವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಮಠಗಳು ಯಾವುದೇ ಜಾತಿ ಭೇದವಿಲ್ಲದೆ ಎಲ್ಲವೂ ಒಂದೇ ಎನ್ನುವ ಭಾವನೆಯೊಂದಿಗೆ ಎಲ್ಲ ಮತ ಧರ್ಮೀಯರಿಗೂ ಜ್ಞಾನದಾಸೋಹದ ಜೊತೆಗೆ ಅನ್ನ ದಾಸೋಹವನ್ನು ಮಾಡುತ್ತಾ ಜನರನ್ನು ವಿದ್ಯಾವಂತರನ್ನಾಗಿಸುವುದರ ಮೂಲಕ ನಾಡಿನ ಏಳಿಗೆಗಾಗಿ ಶ್ರಮಿಸುತ್ತಿರುವ ಶಕ್ತಿ ಕೇಂದ್ರಗಳಾಗಿವೆ.

ಮಠವು ಆಧ್ಯಾತ್ಮಿಕ ಚಿಂತನೆಯುಳ್ಳ ಸನ್ಯಾಸಿಯೊಬ್ಬನ ವಾಸಸ್ಥಳವಾಗಿದ್ದು, ಇಂತಹ ಸ್ಥಳಗಳಿಗೆ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಊಟ ವಸತಿ ಮುಂತಾದವುಗಳನ್ನು ಕಲ್ಪಿಸಿಕೊಟ್ಟಂತಹ ಸ್ಥಾನಗಳೇ ಮಠಗಳಾಗಿವೆ.

**ಡಾ. ರಾಕೇಶ್ ಬಿ.ಸಿ.**
ಸಂಪಾದಕರು



# ಅಧ್ಯಕ್ಷರ ಆಶಯ ನುಡಿ

**ಹಣತೆ ಹಚ್ಚುತ್ತೇನೆ ನಾನು**
**ಕತ್ತಲೆಯನು ದಾಟುತ್ತೇನೆಂಬ ಭ್ರಮೆಯಿಂದಲ್ಲ,**
**ಇರುವಷ್ಟು ಹೊತ್ತು ನಿನ್ನ ಮುಖ ನಾನು,**
**ನನ್ನ ಮುಖ ನೀನು**
**ನೋಡಬಹುದೆಂಬ ಒಂದೇ ಒಂದು ಆಸೆಯಿಂದ**
**ಹಣತೆ ಆರಿದ ಮೇಲೆ ನೀನು ಯಾರೋ**
**ಮತ್ತೆ ನಾನು ಯಾರೋ...... – ಜಿ.ಎಸ್.ಎಸ್.**

ಆತ್ಮೀಯ ಚಂದಾದಾರರೆ ಮತ್ತು ಸಮಾಜದ ಬಾಂಧವರೆ ತಮ್ಮೆಲ್ಲರಿಗೂ ನಾಡಹಬ್ಬ ವಿಜಯದಶಮಿ ಹಾಗೂ ಮುಂಬರುವ ತಮಸೋಮ ಜೋತಿರ್ಗಮಯ ಎನ್ನುವಂತೆ ಎಲ್ಲರ ಬದುಕಿಗೆ ಕತ್ತಲನು ಕಳೆದು ಬೆಳಕ ಸಂತಸ ತರುವ ದೀಪಾವಳಿ ಹಬ್ಬಗಳಿಗೆ ಶುಭ ಕೋರುತ್ತೇನೆ.

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದ ಜನತೆಯ ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆಯನ್ನು ಹಮ್ಮಿಕೊಂಡಿರುವದು ತಮಗೆಲ್ಲ ತಿಳಿದಿರುವ ಸಂಗತಿಯಾಗಿದೆ. ಪ್ರತಿ ಸಮಾಜದವರು ಅವರವರ ಸಮುದಾಯದ ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿ–ಗತಿಗಳ ಮಾಹಿತಿ ಕೊಡುವ ಬಗ್ಗೆ ಗಮನಹರಿಸದೆ ಧರ್ಮ, ಜಾತಿ ಹಾಗೂ ಉಪಜಾತಿಗಳ ಬಗ್ಗೆ ಹೆಚ್ಚಿಗೆ ಗೊಂದಲವನ್ನುಂಟು ಮಾಡಿಕೊಂಡಿರುವುದು ದುರಾದೃಷ್ಟಕರ. ಸುಮಾರು 10 ವರ್ಷಗಳ ಹಿಂದೆ ಕಾಂತರಾಜುರವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರೂಪಿಸಿದ್ದು, ಅದು ಪೂರ್ಣಗೊಂಡಿದ್ದರೂ ಸಹ ಅದನ್ನು ಕಾರ್ಯರೂಪಕ್ಕೆ ತರದೆ ಜಯಪ್ರಕಾಶ್ ಹೆಗಡೆಯವರ ಅಧ್ಯಕ್ಷತೆಯಲ್ಲಿ ಮತ್ತೊಂದು ಆಯೋಗವನ್ನು ನೇಮಿಸಿ ಆಯೋಗದ ನಿರ್ಧಾರದಲ್ಲಿ ತಪ್ಪು ಸರಿಯನ್ನು ಅವಲೋಕಿಸದೆ ಮತ್ತೊಂದು ಆಯೋಗವನ್ನು ರಚಿಸಿರುವುದು ವಿಷಾದನೀಯ. ಈ ಎರಡು ಆಯೋಗಕ್ಕೆ ಖರ್ಚು ಮಾಡಿರುವ ಸುಮಾರು 350 ಕೋಟಿ ರೂಗಳು, ಹಾಗು ಪ್ರಸ್ತುತ ಸಮೀಕ್ಷೆಗೆ ಖರ್ಚು ಮಾಡುವ ವೆಚ್ಚವು ಸುಮಾರು 450 ಕೋಟಿ ರೂಗಳೆಂದು ಅಂದಾಜಿಸಿದ್ದು, ಈ ಹಣವು ಸರ್ಕಾರಕ್ಕೆ ರಾಜ್ಯದ ಜನತೆಯು ಕೊಟ್ಟಂತಹ ತೆರಿಗೆಯಾಗಿರುತ್ತದೆ. ಹಾಗೂ ಈಗ ರಚಿತವಾದ ಆಯೋಗದ ಸಂಕ್ಷಿಪ್ತ ಕೈಪಿಡಿಯನ್ನು ಅವಲೋಕಿಸಿದಾಗ ಇದೂ ಸಹ ಗೊಂದಲದ ಗೂಡಾಗಿರುವದು ಮೇಲ್ನೋಟಕ್ಕೆ ಕಾಣಿಸುತ್ತದೆ. ಈ ಗೊಂದಲಗಳನ್ನು ಸರ್ಕಾರವು ನಿವಾರಣೆ ಮಾಡದಿದ್ದರೆ ಈ ಆಯೋಗದ ವರದಿಯು ಸಹ ಮೊದಲೆರೆಡು ಆಯೋಗದ ದಾರಿ ಹಿಡಿಯುವ ಸಂಭವವಿರುತ್ತದೆ. ಯಾವುದೇ ರಾಜ್ಯದ ಅಥವಾ ದೇಶದ ಎಲ್ಲ ವರ್ಗದ ಜನತೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಲ್ಲಿಸುತ್ತಿರುವ ತೆರಿಗೆಯನ್ನು ಸರ್ಕಾರವು ರಾಜ್ಯದ ಅಭಿವೃದ್ದಿಗೆ ಬಳಸದಿದ್ದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯು ಅರ್ಥವನ್ನು ಕಳೆದುಕೊಳ್ಳುತ್ತದೆ.

ಕನಾಟಕದ ಇತಿಹಾಸವನ್ನು ಗಮನಿಸಿದಾಗ ಹಳೆಯ ಮೈಸೂರು ಪ್ರಾಂತ್ಯದ ಮಹಾರಾಜರು ರಾಜ್ಯದ ಅಭಿವೃದ್ದಿಗೆ ಹಣಕಾಸು ಕೊರತೆಯಾದ ಸಂದರ್ಭದಲ್ಲಿ ತಮ್ಮಲ್ಲಿದ್ದ ಚಿನ್ನ, ಬೆಳ್ಳಿ, ವಜ್ರ–ವೈಢೂರ್ಯವನ್ನು ಮಾರಿ ಅಥವಾ ಅಡವಿಟ್ಟು ಅದರಿಂದ ಬಂದಂತಹ ಹಣವನ್ನು ರಾಜ್ಯದ ಅಭಿವೃದ್ದಿಗೆ ಉಪಯೋಗ ಮಾಡಿರುವುದು ಚರಿತ್ರೆಯ ಪುಟಗಳಲ್ಲಿ ಅಚ್ಚಳಿಯದೆ ಉಳಿದಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜೆಗಳಿಂದಲೇ ನೇರವಾಗಿ ಆಯ್ಕೆಯಾದ ಪ್ರತಿನಿಧಿಗಳು ತೆರಿಗೆದಾರರು ಕೊಟ್ಟ ಹಣವನ್ನು ರಾಜ–ಮಹಾರಾಜರುಗಳು ಉಪಯೋಗಿಸಿದಂತೆ ರಾಜ್ಯದ ಅಭಿವೃದ್ದಿಗೆ ಉಪಯೋಗಿಸಲ್ಪಟ್ಟರೆ, ಪ್ರಜಾಪ್ರಭುತ್ವದ ವ್ಯವಸ್ಥೆಯು ನಿಜವಾದ ಅರ್ಥವನ್ನು ಪಡೆಯುತ್ತದೆ. ಇಲ್ಲದಿದ್ದರೆ ಅರ್ಥಹೀನವಾಗಿ ಮುಂದೊಂದು ದಿನ ಬೇರೆ ದೇಶಗಳಲ್ಲಿ ಆಗುತ್ತಿರುವ ಕ್ರಾಂತಿಯು ಇಲ್ಲಿಯೂ ನಡೆಯುವುದರಲ್ಲಿ ಸಂಶಯವಿಲ್ಲ,

ನಮ್ಮ ಸಂಘದ ನಿರ್ಣಯದಂತೆ ಎಲ್ಲಾ ನೊಳಂಬ ಸಮಾಜ ಬಾಂಧವರು ಗಣತಿದಾರರು ಬಂದಾಗ ಜಾತಿ ಕಾಲಂನಲ್ಲಿ **"ಕ್ರಮಸಂಖ್ಯೆ 832 ಲಿಂಗಾಯಿತ"** ಮತ್ತು ಉಪಜಾತಿ ಕಾಲಂನಲ್ಲಿ, **"ಕ್ರಮ ಸಂಖ್ಯೆ 1083 ನೊಳಂಬ ಲಿಂಗಾಯಿತ"** ಎಂದು ನಮೂದಿಸಲು ಕೋರಿಕೆ.

ಶರಣು ಶರಣಾರ್ಥಿಗಳು
**ಶ್ರೀ ಬಿ.ಕೆ.ಚಂದ್ರಶೇಖರ್**
ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

# ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

**1.** ದಿನಾಂಕ: 22.06.2025 ರಂದು ಉಪಸಮಿತಿ ಹಾವೇರಿಯಲ್ಲಿ 2024–25ನೇ ಸಾಲಿನಲ್ಲಿ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ. ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಜರುಗಿಸಲಾಯಿತು.

**2.** ದಿನಾಂಕ: 29.06.2025ರಂದು ಉಪಸಮಿತಿ ಅಜ್ಜಂಪುರದಲ್ಲಿ 2024–25ನೇ ಸಾಲಿನಲ್ಲಿ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ. ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಜರುಗಿಸಲಾಯಿತು.

**3.** ದಿನಾಂಕ: 28.06.2025ರಂದು ಬೆಳಿಗ್ಗೆ ಕಂಬಿ ಎಂ. ಸಿದ್ಧರಾಮಣ್ಣ ಮತ್ತು ಶ್ರೀಮತಿ ಸರ್ವಮಂಗಳಮ್ಮ ಸಿ.ಸಿದ್ದಯ್ಯ ವಿದ್ಯಾರ್ಥಿನಿಲಯಗಳಲ್ಲಿ ಅಭ್ಯಾಸ ಮಾಡಿದ ಅಂತಿಮ ತರಗತಿ ವಿದ್ಯಾರ್ಥಿಗಳಿಗೆ ಹಾಸ್ಟಲ್ ವಿದ್ಯಾರ್ಥಿಗಳಿಂದ "ಬಿಳ್ಕೊಡುಗೆ ಸಮಾರಂಭ" ಏರ್ಪಡಿಸಿ, ಅಂದೇ ಸಾಯಂಕಾಲ ನಿರ್ದೇಶಕರು ಮತ್ತು ಅತಿಥಿಗಳ ಸಮ್ಮುಖದಲ್ಲಿ "ಹಾಸ್ಟಲ್ ಡೇ" ಆಚರಿಸಲಾಯಿತು.

**4.** ದಿನಾಂಕ: 28.06.2025ರಂದು ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರು, ಶ್ರೀ ಎಸ್.ಎನ್.ಸಿದ್ಧರಾಮಪ್ಪನವರು ಐ.ಪಿ.ಎಸ್. ಮತ್ತು ಇತರರು ವಿದ್ಯಾರ್ಥಿನಿಲಯಕ್ಕಾಗಿ ಖಾಲಿ ನಿವೇಶನವನ್ನು ಮಂಜೂರು ಮಾಡಲು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

**5.** ದಿನಾಂಕ: 15.08.2025ರಂದು ಶುಕ್ರವಾರದಂದು 79ನೇ ಸ್ವಾತಂತ್ರೋತ್ಸವವನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರು ಹಾಗೂ ಸಂಘದ ಸರ್ವ ನಿರ್ದೇಶಕರು ಭಾಗವಹಿಸಿದ್ದರು. ಶ್ರೀ ಆರ್.ರಾಜಯ್ಯನವರು ಕಾರ್ಯಕ್ರಮದ ನಿರೂಪಣೆಯೊಂದಿಗೆ ಭಾಗವಹಿಸಿ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಸ್ವಾತಂತ್ರ್ಯೋತ್ಸವದ ಪ್ರಾಮುಖ್ಯತೆಯನ್ನು ತಿಳಿಸಿದರು.

**6.** ದಿನಾಂಕ: 27.08.2025ರಂದು ಕಂಬಿ ಎಂ.ಸಿದ್ಧರಾಮಣ್ಣ ಹಾಸ್ಟಲ್‌ನಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಹಯೋಗದೊಂದಿಗೆ ಗಣಪತಿ ಪ್ರತಿಸ್ಥಾಪಿಸಿ ದಿನಾಂಕ: 31.08.2025ರಂದು ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮಾಡಿ ವಿಸರ್ಜಿಸಲಾಯಿತು.

**7.** ದಿನಾಂಕ: 31.08.2025ರಂದು ಉಪಸಮಿತಿ ಅರಸೀಕೆರೆಯಲ್ಲಿ 2024–25ನೇ ಸಾಲಿನಲ್ಲಿ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ. ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಜರುಗಿಸಲಾಯಿತು.

**8.** ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆಯಲ್ಲಿ ಜರುಗಲಿರುವ 853ನೇ ಜಯಂತಿಯ ಪೂರ್ವಭಾವಿ ಸಭೆಯನ್ನು ಸಂಘದ ಅಧ್ಯಕ್ಷರ ಉಪಸ್ಥಿತಿಯಲ್ಲಿ ಜರುಗಿಸಲಾಯಿತು. ಸಮಾಜ ಬಾಂಧವರು ಭಾಗವಹಿಸಿ ಸಲಹೆ–ಸೂಚನೆಗಳನ್ನು ಕೊಟ್ಟರು.

**9.** ದಿನಾಂಕ: 05.09.2025ರಂದು ನೊಳಂಬವಾಣಿ ಸಂಪಾದಕ ಮಂಡಳಿ ಸಭೆಯು ಸಂಪಾದಕರಾದ ಡಾ. ಬಿ.ಸಿ.ರಾಕೇಶ್‌ರವರ ಉಪಸ್ಥಿತಿಯಲ್ಲಿ ಜರುಗಿತು.

**10.** ದಿನಾಂಕ: 14.09.2025ರಂದು ವಿದ್ಯಾರ್ಥಿ/ವಿದ್ಯಾರ್ಥಿನಿಯರ 2025–26ನೇ ಸಾಲಿನ ಪ್ರವೇಶಕ್ಕಾಗಿ ಸಂದರ್ಶನ ಮಡಲಾಯಿತು.

**11.** ದಿನಾಂಕ: 21.09.2025ರಂದು ಭಾನುವಾರ ರಾಜ್ಯ ಸರ್ಕಾರದಿಂದ ಜರುಗಿಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2025 ಜಾತಿ–ಗಣತಿ ಬಗ್ಗೆ ಚರ್ಚಿಸಲು ಸಂಘದ ಕೇಂದ್ರ ಕಛೇರಿಯಲ್ಲಿ ಸಂಘದ ಸಮಾಜ ಮುಖಂಡರ ಸಭೆ ನಡೆಸಲಾಯಿತು. ನಂತರ ದೂರದರ್ಶನಕ್ಕೆ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಮಾಹಿತಿ ನೀಡಿದರು. ಹಾಗೂ ನಮ್ಮ ಸಮಾಜದ ಎಲ್ಲಾ ಮಠಾಧಿಪತಿಗಳಾದ ಪರಮ ಪೂಜ್ಯರಿಗೆ ಹಾಗೂ ನಮ್ಮ ಎಲ್ಲಾ ಉಪಸಮಿತಿಗಳಿಗೆ ಜಾತಿ ಗಣತಿ ವಿಚಾರವಾಗಿ ಪತ್ರ ತಲುಪಿಸಲಾಯಿತು.

**12.** ಕಡೂರಿನಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಸಮುದಾಯ ಭವನದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

**13.** ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಸಮ್ಮುಖದಲ್ಲಿ ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಯಲು ಮಾಸಿಕ, ದ್ವೈಮಾಸಿಕ ಸಭೆ ಹಾಗೂ ಕಾಮಗಾರಿ ಸಭೆಗಳನ್ನು ನಡೆಸಲಾಗುತ್ತಿದೆ.



**ಕೆ.ಬಿ.ಶಶಿಧರ್ ಕಾಮನಕೆರೆ**
ಗೌರವ ಕಾರ್ಯದರ್ಶಿ
ನೊಳಂಬ ಲಿಂಗಾಯತ
ಸಂಘ (ರಿ) ಬೆಂಗಳೂರು.

# ಬಸವಣ್ಣ ಉತ್ತು, ಬಿತ್ತಿ, ಬೆಳೆದ ಬೀಜಗಳು ನಾವು

## (ಬಸವ ಜಯಂತಿ ಪ್ರಯುಕ್ತ ವಿಶೇಷ ಲೇಖನ)

ಹಿಂದಿನ ಸಂಚಿಕೆಯಿಂದ..............

ಮಾಚಯ್ಯ ಮುಂತಾದವರ ಹುಮ್ಮಸ್ಸು ಮತ್ತು ಶ್ರಮದಿಂದಾಗಿ ವರ್ಷ ತುಂಬುವುದರೊಳಗಾಗಿ, ಸದಸ್ಯರ ಸಂಖ್ಯೆ ಸಾವಿರ ದಾಟಿತು, ಹೋರಾಟ ಚುರುಕುಗೊಂಡಿತು. ಹೋರಾಟದ ಬಿಸಿ ಪುರೋಹಿತಶಾಹಿ ವರ್ಗದವರಿಗೆ ತಟ್ಟಲಾರಂಭಿಸಿತು. ನಾಡಿನಾದ್ಯಂತ ಸುಧಾರಣಾ ಸಮಿತಿಯಿಂದ ಸಭೆಗಳು, ಚರ್ಚಾಕೂಟಗಳು, ಬೀದಿ ನಾಟಕಗಳು, ನೊಂದ ಬುದ್ಧಿಜೀವಿಗಳು ರಚಿಸಿದ ಜನಪದ ಹಾಡುಗಳಿಂದ ಶೂದ್ರ ಮತ್ತು ದಲಿತ ಶ್ರಮಜೀವಿಗಳ ಜಡ್ಡುಗಟ್ಟಿದ ಊಳಿಗಮಾನ್ಯ ದಾಸ್ಯ ಮನೋಭಾವವನ್ನು ಬೇರುಸಹಿತ ಕಿತ್ತೊಗೆಯಲು ಇನ್ನಿಲ್ಲದಂತೆ ಶ್ರಮಿಸತೊಡಗಿತು. ಬರಬರುತ್ತ ಸನಾತನ ಧರ್ಮದ ಸಮಾಜೋಧಾರ್ಮಿಕ ಸುಧಾರಣಾ ಹೋರಾಟ ಕನ್ನಡ ನಾಡಿನಾದ್ಯಂತ ವ್ಯಾಪಿಸತೊಡಗಿ ಆಂದೋಲನ ರೂಪ ಪಡೆಯತೊಡಗಿತು.

ಚಾಲುಕ್ಯ ಸಾಮ್ರಾಜ್ಯದ ಸಾರ್ವಭೌಮ, ಸಾಮ್ರಾಟ ಇಮ್ಮಡಿ ತೈಲಪನ ದುರಾಡಳಿತ, ದುರ್ನಡತೆ, ದುರ್ವ್ಯಸನ, ಅಧಕ್ಷತೆಯಿಂದಾಗಿ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ ಹದಗೆಟ್ಟು ಕುಸಿದು ಬೀಳುವ ಸ್ಥಿತಿ ತಲುಪತೊಡಗಿತ್ತು. ಪರಿಸ್ಥಿತಿಯ ಲಾಭ ಪಡೆಯಲು ಶತ್ರು ಸಾಮ್ರಾಜ್ಯಗಳು ಹಾತೊರೆಯುತ್ತಿದ್ದವು. ವಿಷಯದ ತೀವ್ರತೆಯನ್ನು ಅರಿತ ಮಂಗಳವೇಡೆ ಮಹಾಮಂಡಲಾಧೀಶ ಮತ್ತು ಸಾಮ್ರಾಟ ಇಮ್ಮಡಿ ತೈಲಪನ ಹತ್ತಿರದ ಸಂಬಂಧಿ ಬಿಜ್ಜಳ ಭೂಪಾಲನು ಸಾಮ್ರಾಟ ಪದವಿಯಿಂದ ಇಮ್ಮಡಿ ತೈಲಪನನ್ನು ಪದಚ್ಯುತಗೊಳಿಸಿ ತಾನೇ ಸಾಮ್ರಾಟನಾಗಿ ಚಾಲುಕ್ಯ ಸಾಮ್ರಾಜ್ಯದ ಸಿಂಹಾಸನ ವೇರಿದನು. ಮಹತ್ವಾಕಾಂಕ್ಷಿಯೂ, ದಕ್ಷನೂ, ರಾಜಕೀಯ ಮುತ್ಸದ್ಧಿಯು ಆಗಿದ್ದ ಬಿಜ್ಜಳ ಭೂಪಾಲನು ಸಾಮ್ರಾಜ್ಯದ ಹದಗೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ, ಮಂಗಳವೇಡೆ ಮಂಡಲ ಆಡಳಿತ ಕಚೇರಿಯಲ್ಲಿ ಲೆಕ್ಕಪತ್ರ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕರ್ತವ್ಯನಿಷ್ಟ, ಪ್ರಾಮಾಣಿಕ, ದಕ್ಷ ಅಧಿಕಾರಿಯಾಗಿ, ಮಂಡಲಾಧಿಪತಿಯಾಗಿದ್ದ, ಬಿಜ್ಜಳನ ಪ್ರೀತಿಪಾತ್ರ, ಅಂತರಂಗ ಸ್ನೇಹಿತನಾಗಿದ್ದ ಬಸವಣ್ಣನವರನ್ನು ಚಾಲುಕ್ಯ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯ ಅರ್ಥಮಂತ್ರಿಯನ್ನಾಗಿ ನೇಮಿಸಿ, ರಾಜಧಾನಿ ಕಲ್ಯಾಣ ನಗರಕ್ಕೆ ಬರಮಾಡಿಕೊಂಡ ಬಿಜ್ಜಳ ಸಾಮ್ರಾಟ.



**ಚಂದ್ರಶೇಖರ ತಿ. ಚಿಂದಾಳ**
ಅಧ್ಯಕ್ಷರು, ಶ್ರೀಗುರು ಸಿದ್ಧರಾಮೇಶ್ವರ ಜ್ಞಾನಪ್ರಸಾರ ಕೇಂದ್ರ, "ಬಸವ ಚೇತನ", ತೋಟದ ಮನೆ, ಸಿದ್ಧರಾಮನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
ಮೊ : 6366052331, 9449115995

ಇಮ್ಮಡಿ ತೈಲಪ ಚಕ್ರವರ್ತಿಯಾದ್ದ ಕಾಲದಲ್ಲಿ ಅವನ ಅಧಕ್ಷತೆ, ಅವ್ಯವಹಾರ ಕಾರಣದಿಂದಾಗಿ ಬಹುತೇಕ ಅಧಿಕಾರಿಗಳ ನಿಷ್ಕ್ರಿಯತೆಯಿಂದಾಗಿ ದೇಶದ ಆದಾಯ ಕುಂಠಿತಗೊಂಡು ಬರುವ ಅಲ್ಪಸ್ವಲ್ಪ ಆದಾಯ ಭ್ರಷ್ಟ ಅಧಿಕಾರಿಗಳ ಬೊಕ್ಕಣ ಸೇರುತ್ತಿತ್ತು. ಸಾಮ್ರಾಜ್ಯ ದಿವಾಳಿಯ ಅಂಚಿಗೆ ಬಂದು ನಿಂತಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾಮ್ರಾಜ್ಯದ ಅರ್ಥಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಸವಣ್ಣನವರು ಮೊದಲು ಮಾಡಿದ ಕೆಲಸವೆಂದರೆ ಆದಾಯದ ಮೂಲಗಳನ್ನು ಸರಿದಾರಿಗೆ ತಂದು, ಆದಾಯ ಸೋರಿಕೆಯನ್ನು ತಡೆಗಟ್ಟಿ, ಭ್ರಷ್ಟ ಅಧಿಕಾರಿಗಳಿಗೆ ಬರೆ ಎಳೆದು ಖಜಾನೆ ತುಂಬಲು ಶ್ರಮಿಸಿದರು. ತೈಲಪನಿಗಿಂತಲೂ ಮೊದಲು ಚಕ್ರವರ್ತಿಗಳಾಗಿದ್ದವರು ಆಪದ್ಧನವೆಂದು ಹುದುಗಿಸಿಟ್ಟಿದ್ದ ಆಗಾಧ ಸಂಪತ್ತನ್ನು ತನ್ನ ಬುದ್ಧಿಶಕ್ತಿಯಿಂದ ಹೊರತಂದು ಕೆರೆ, ಕಟ್ಟೆ, ಜಲಾಶಯ, ಅಣೆಕಟ್ಟುಗಳನ್ನು ನಿರ್ಮಿಸಿ, ದೇಶ ಸಮೃದ್ಧ, ಸಂಪದ್ಭರಿತ, ಸದೃಢವಾಗಲು ಶ್ರಮಿಸಿದ ಅರ್ಥಸಚಿವ ಬಸವಣ್ಣನ ದಕ್ಷತೆ, ಜಾಣ್ಮೆ, ಕರ್ತೃತ್ವಶಕ್ತಿಯನ್ನು ಮೆಚ್ಚಿಕೊಂಡ ಸಾಮ್ರಾಟ ಬಿಜ್ಜಳ ಬಸವಣ್ಣನನ್ನು ಪ್ರಧಾನಮಂತ್ರಿಯನ್ನಾಗಿ ಸ್ವೀಕರಿಸಿದ.

ಚಾಲುಕ್ಯ ಸಾಮ್ರಾಜ್ಯದ ಪ್ರಧಾನ ಮಂತ್ರಿಯಾದ ಬಸವಣ್ಣ ಸನಾತನ ಧರ್ಮದ ಸಮಾಜೋ ಧಾರ್ಮಿಕ ಸುಧಾರಣಾ ಕಾರ್ಯವನ್ನೇನೂ ಮರೆಯಲಿಲ್ಲ. ಮೇಲಾಗಿ ಇನ್ನೂ ಹೆಚ್ಚಿನ ಮುತುವರ್ಜಿಯಿಂದ, ತನ್ನ ಬಿಡುವಿನ ವೇಳೆಯನ್ನು ಸಮಾಜ ಸುಧಾರಣಾ ಕಾರ್ಯಕ್ಕಾಗಿ ಮುಡುಪಾಗಿಟ್ಟ. ಸುಧಾರಣಾ ಸಮಿತಿಯ ಚಟುವಟಿಕೆಗಳು ಮಂಗಳವೇಡೆಯಿಂದ ರಾಜಧಾನಿ ಕಲ್ಯಾಣ ನಗರಕ್ಕೆ ಸ್ಥಳಾಂತರಗೊಂಡವು. ಸಮಿತಿಯ ಕಾರ್ಯಕರ್ತರಾದ ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ ಮುಂತಾದವರೂ ಸಹ ಕಲ್ಯಾಣ ನಗರಕ್ಕೆ ಬಂದು ಬೀಡುಬಿಟ್ಟರು.

ತಮ್ಮ ತಮ್ಮ ಜೀವನ ನಿರ್ವಹಣೆಗಾಗಿ ಅವರ ಉದ್ಯೋಗವನ್ನು ಕಲ್ಯಾಣ ನಗರದಲ್ಲಿ ಮುಂದುವರಿಸುತ್ತಾ ಬಸವಣ್ಣನವರ ಮಾರ್ಗದರ್ಶನದಂತೆ ಸಮಾಜೋಧಾರ್ಮಿಕ ಸುಧಾರಣಾ ಕಾರ್ಯದಲ್ಲಿ ಇನ್ನೂ ಹೆಚ್ಚು ಹೆಚ್ಚು ಹುಮ್ಮಸ್ಸಿನಿಂದ ಭಾಗಿಯಾಗತೊಡಗಿದರು. ಸಾಮ್ರಾಜ್ಯದ ಪ್ರಧಾನ ಮಂತ್ರಿಯೇ ಸಮಾಜ ಸುಧಾರಣಾ ಕಾರ್ಯದಲ್ಲಿ ಮುಂಚೂಣಿಯಲ್ಲಿರುವುದನ್ನು ಅರಿತ ಶೂದ್ರ ಮತ್ತು ದಲಿತ ಜನಾಂಗ ಸುಧಾರಣಾ ಆಂದೋಲನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಕನ್ನಡ ನಾಡಿನಲ್ಲಿ ಬಿಜ್ಜಳ ಸಾಮ್ರಾಜ್ಯದ ಪ್ರಧಾನ ಮಂತ್ರಿ ಬಸವಣ್ಣನವರ ನೇತೃತ್ವದಲ್ಲಿ ನಡೆಯುತ್ತಿದ್ದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಯ ಸುದ್ದಿ ನಾಡಿನಾದ್ಯಂತವಲ್ಲದೆ ನಾಡಿನ ಹೊರಗೆ ಎಲ್ಲಾ ಕಡೆಯೂ ಹರಡಿ ಶೋಷಿತ ವರ್ಗದ ಪ್ರಗತಿಪರ, ಪುರೋಗಾಮಿ ಬುದ್ಧಿಜೀವಿಗಳು ಕಲ್ಯಾಣ ನಗರದತ್ತ ಬಂದು ತಾವೂ ಚಳುವಳಿಯಲ್ಲಿ ಭಾಗವಹಿಸತೊಡಗಿದರು.

ಯುಗಯುಗಾಂತರಗಳಿಂದ ಸನಾತನ ಧರ್ಮದ ಸ್ಥಗಿತ ಅಮಾನವೀಯ ಸಮಾಜೋ ಧಾರ್ಮಿಕ ನೀತಿಗಳನ್ನು, ಮನು ಧರ್ಮಶಾಸ್ತ್ರ, ಸ್ಮೃತಿಗಳನ್ವಯ ಅನುಸರಿಸುತ್ತಾ, ಪುರೋಹಿತಶಾಹಿಗಳ ಕದಂಬ ಬಾಹು ಹಿಡಿತದಲ್ಲಿ, ಸಂಪ್ರದಾಯಗಳ ಸಂಕೋಲೆಯಲ್ಲಿ ನಲುಗಿಹೋಗಿದ್ದ ಧರ್ಮಾನುಯಾಯಿಗಳು ಸ್ವತಂತ್ರವಾಗಿ ಯೋಚಿಸುವ ಶಕ್ತಿಯನ್ನೇ ಕಳೆದುಕೊಂಡಿದ್ದರು. ಸ್ವಾರ್ಥಪರ, ಪಟ್ಟಭದ್ರ ಹಿತಾಸಕ್ತ ಧರ್ಮ ಪೀಠಾಧಿಪತಿಗಳು, ಆಚಾರ್ಯರು, ಪುರೋಹಿತರು, ಅರ್ಚಕರು, ಬಸವಣ್ಣನವರ ಮುಂದಾಳತ್ವದ ಸಮಾಜೋಧಾರ್ಮಿಕ ಸುಧಾರಣಾ ಕ್ರಮಗಳಿಗೆ ಕಿಂಚಿತ್ತೂ ಬೆಲೆ ಕೊಡದೆ, ಧರ್ಮ ದೇವರ ಹೆಸರನ್ನು ಮುಂದುಮಾಡಿ, ಮುಗ್ಧ ಧರ್ಮಾನುಯಾಯಿಗಳ ಮೂಢನಂಬಿಕೆ, ಮೂಢಭಕ್ತಿ, ಮೂಢಾಚಾರಗಳಿಗೆ ಇಂಬು ಕೊಡುತ್ತಾ ಅವರ ದುಡಿಮೆಯ ಬಹುಭಾಗವನ್ನು ಹೆದರಿಸಿ, ಬೆದರಿಸಿ ಕಿತ್ತು ತಿನ್ನುವಲ್ಲಿ ಯಶಸ್ವಿಯಾಗತೊಡಗಿದ್ದರು. ಇದರಿಂದಾಗಿ ಬಸವಣ್ಣನ ಸುಧಾರಣಾ ಕ್ರಮಗಳಿಗೆ ಹಿನ್ನಡೆಯಾಗತೊಡಗಿತು. ಹಿನ್ನಡೆಯ ಕ್ರಮದಿಂದಾಗಿ ಧೈರ್ಯಗುಂದಿದ ಬಸವಣ್ಣ, ಬೇರೆಯದೇ ಆದ ವ್ಯವಸ್ಥೆಯ ಬಗ್ಗೆ ಚಿಂತೆ ಹರಿಸಿದ ಮತ್ತು ಏಕಪಕ್ಷೀಯವಾಗಿ ಸನಾತನ ಧರ್ಮದ ಸಮಾಜ ಸುಧಾರಣಾ ಚಳುವಳಿಯಿಂದ ಹಿಂದೆ ಸರಿದ.

ಸನಾತನ ಧರ್ಮದ ಸಮಾಜೋ ಧಾರ್ಮಿಕ ಸುಧಾರಣಾ ಕ್ರಮದಿಂದ ಹಿಂದೆಸರಿದ ಬಸವಣ್ಣನ ಯೋಚನಾಲಹರಿ ಬೇರೊಂದು ದಿಕ್ಕಿನ ಕಡೆ ಹೊರಟಿತು. ಜಡ್ಡುಗಟ್ಟಿದ್ದ ಸಂಪ್ರದಾಯಗಳ ದಾಸರಾಗಿ ಪುರೋಹಿತಶಾಹಿಯ ಭ್ರಷ್ಟತೆಗೆ ತುತ್ತಾಗಿರುವ ಸನಾತನ ಧರ್ಮದ ಶೂದ್ರ ವರ್ಗದವರನ್ನು ಸುಧಾರಿಸುವುದು ಅಷ್ಟು ಸುಲಭದ ಕಾರ್ಯವಲ್ಲ ಎಂದರಿತ ಬಸವಣ್ಣ, ತನ್ನ ಇಚ್ಛೆಗೆ ಅನುಗುಣವಾಗಿ ಬೇರೊಂದು ಹೊಸ ಧರ್ಮದ ಸ್ಥಾಪನೆಯ ಕಡೆ ಗಮನಹರಿಸತೊಡಗಿದ. ಕಳೆದ ಐದು ವರ್ಷಗಳ ಹೋರಾಟದ ಕಾರಣ ಸಮಾನತಾ ಸಾಮಾಜಿಕ ಒಗ್ಗಟ್ಟನ್ನು ಮೂಡಿಸುವುದರಲ್ಲಿ ಕೊಂಚ ಯಶಸ್ವಿಯಾಗಿದ್ದ ಬಸವಣ್ಣ ಮತ್ತು ಅವನ ಸಂಗಡಿಗರು ಹೊಸ ಧರ್ಮ ಸ್ಥಾಪನೆಯ ನಿಟ್ಟಿನಲ್ಲಿ ಕಾರ್ಯನಿರತರಾದರು. ನಾಡಿನ ನಾನಾ ಭಾಗಗಳಿಂದ ಬಂದು ಉದಾರವಾದಿ, ಧಾರ್ಮಿಕ ಹಾಗೂ ಅಧ್ಯಾತ್ಮಿಕ ಮಹೋದಯರು ಬಸವಣ್ಣನವರ ಮುಂದಾಳತ್ವ ಮತ್ತು ಮಾರ್ಗದರ್ಶನದಲ್ಲಿ ಸನಾತನ ಧರ್ಮದ ವರ್ಣಭೇದ, ಹೆಣ್ಣು ಗಂಡು, ಉದ್ಯೋಗ ಭೇದ, ಒಬ್ಬನಲ್ಲದೆ ಬಹುದೇವರುಗಳಿರುವರೆಂಬ ನಂಬಿಕೆ ಅಸ್ಪೃಶ್ಯತೆ ಪಿಡುಗು, ಇನ್ನಿತರ ಜನವಿರೋಧಿ, ಅಮಾನವೀಯ ಪುರೋಹಿತ ನೀತಿಗಳ ವಿರುದ್ಧ ಮಾನವನಾಗಿ ಹುಟ್ಟಿದವರೆಲ್ಲಾ ಸರಿಸಮಾನರು, ಸತ್ಯಶುದ್ಧ ನ್ಯಾಯಯುತ ಉದ್ಯೋಗ ಯಾವುದೇ ಆಗಲಿ ಅವರವರ ಇಚ್ಛೆಯಂತೆ ಜೀವನಾವಶ್ಯತೆಗನುಗುಣವಾಗಿ ಯಾವುದೇ ಉದ್ಯೋಗ ಕೈಗೊಳ್ಳಲು ಸ್ವತಂತ್ರರು.

ದೇವರು ಗುಡಿಯೊಳಗಷ್ಟೇ ಇದ್ದಾನೆ, ಅವನ ಕೃಪೆಗಾಗಿ ಪ್ರಾರ್ಥಿಸಲು ಪುರೋಹಿತರ ಮಧ್ಯಸ್ಥಿಕೆಯಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯ ವಿರುದ್ಧ, ದೇವರು ಎಲ್ಲಾ ಕಡೆಯಲ್ಲಿಯೂ ಇದ್ದಾನೆ, ಅವನಿಲ್ಲದ ಸ್ಥಳ ಯಾವುದೂ ಇಲ್ಲ. ಈ ಬೃಹತ್ ಬ್ರಹ್ಮಾಂಡ ಅವನಿಂದ ಸೃಷ್ಟಿಯಾಗಿದೆ. ಗೋಳಾಕಾರದ ಬ್ರಹ್ಮಾಂಡವನ್ನು ಚುಳುಕಾಗಿಸಿ (ಚಿಕ್ಕದಾಗಿಸಿ) ತಮ್ಮ ತಮ್ಮ ಹಸ್ತದ ಮಧ್ಯೆ ಇರಿಸಿ, ತಮ್ಮ ಕೈಯಾರೆ, ಮನಸಾರೆ ಪೂಜಿಸಿ, ಪ್ರಾರ್ಥಿಸಿ, ಅವನ ಕೃಪೆ ಗಳಿಸಬೇಕು ಎಂಬಿತ್ಯಾದಿ ನೀತಿ ನಿಯಮಗಳ ನ್ನೊಳಗೊಂಡ ಹೊಸ ಧರ್ಮ ಸ್ಥಾಪನೆಯಾಯ್ತು. ಹೊಸ ಧರ್ಮದ ಹೆಸರು ಏನಿರಬೇಕೆಂಬ ಜಿಜ್ಞಾಸೆಯಲ್ಲಿ ಹೊಳೆದದ್ದು ಧರ್ಮದ ಅತ್ಯಂತ ಶ್ರೇಷ್ಠ ನೀತಿಯಾದ 'ಒಬ್ಬನೇ ದೇವರು, ಈ ಬ್ರಹ್ಮಾಂಡದ ಸೃಷ್ಟಿಗೆ ಅವನೇ ಕಾರಣ. ಬ್ರಹ್ಮಾಂಡ ಗುಂಡಾಗಿದೆ, ಗುಂಡಾಗಿರುವ ಬ್ರಹ್ಮಾಂಡದ ಚಿಕ್ಕದಾದ ರೂಪವೇ ಲಿಂಗ. ಈ ಲಿಂಗವನ್ನು ಆಯತ ಮಾಡಿಕೊಂಡು (ಬರಮಾಡಿಕೊಂಡು) ತಮ್ಮ ಅಂಗದ ಮೇಲೆ ಧರಿಸಿ (ಗುಡಿಯೊಳಗಿನ ದೇವರನ್ನು ದೂರಮಾಡಿ)

ದವರೆಲ್ಲಾ ಲಿಂಗಾಯತರು'. (ಲಿಂಗ+ಆಯತ=ಲಿಂಗಾಯತ) ಈ ಆಧಾರವನ್ನಿಟ್ಟುಕೊಂಡು ಸ್ಥಾಪಿತವಾದ ಹೊಸಧರ್ಮಕ್ಕೆ 'ಲಿಂಗಾಯತ ಧರ್ಮ' ಎಂದು ಹೆಸರಿಡಲಾಯ್ತು.

ಹೊಸದಾಗಿ ಸ್ಥಾಪಿತವಾದ ಲಿಂಗಾಯತ ಧರ್ಮದ ನೀತಿ, ನಿಯಮ, ತತ್ವ, ಸಿದ್ಧಾಂತ, ಆಚಾರ, ವಿಚಾರ, ನಡೆನುಡಿಗಳ ವಿಧಿ–ವಿಧಾನಗಳನ್ನು ಚರ್ಚಿಸಿ ರೂಪುಗೊಳಿಸಲು 'ಅನುಭವಮಂಟಪ' ಹೆಸರಿನಲ್ಲಿ ಧರ್ಮಸಂಸತ್ ಸಭಾಭವನ ನಿರ್ಮಿಸಲಾಯ್ತು. 'ಶೂನ್ಯಪೀಠ' ಹೆಸರಿನಲ್ಲಿ ಧರ್ಮಸಂಸತ್ ಸಭೆಯ ಅಧ್ಯಕ್ಷ ಪೀಠವನ್ನು ಹುಟ್ಟುಹಾಕಲಾಯ್ತು. ಸನಾತನ ಧರ್ಮದ ಸಮಾಜೋಧಾರ್ಮಿಕ ಸುಧಾರಣಾ ಚಳುವಳಿಯಲ್ಲಿ ಭಾಗಿಗಳಾಗಿದ್ದವರೆಲ್ಲರೂ ಧರ್ಮ ಸಂಸತ್ ಸಭೆಯ ಸದಸ್ಯರಾದರು. ಧರ್ಮ ಸಂಸತ್ ಸಭೆಯ ಮೊದಲ ಅಧ್ಯಕ್ಷರಾಗಿ ಅಲ್ಲಮಪ್ರಭುದೇವರು ಶೂನ್ಯಪೀಠವನ್ನು ಅಲಂಕರಿಸಿದರು. ಹೀಗೆ ಪ್ರಾರಂಭವಾದ ಲಿಂಗಾಯತ ಧರ್ಮ ತನ್ನದೇ ಆದ ಸ್ವತಂತ್ರ ಸಂವಿಧಾನವನ್ನು ರೂಪಿಸಿಕೊಂಡು, ಧರ್ಮವನ್ನು ಅನುಷ್ಠಾನಗೊಳಿಸಲು ಪ್ರಚಾರ ಕಾರ್ಯ ಕೈಗೊಂಡಿತು. ಬಿಜ್ಜಳ ಸಾಮ್ರಾಜ್ಯದ ಪ್ರಧಾನ ಮಂತ್ರಿಯಾಗಿ, ಲಿಂಗಾಯತ ಧರ್ಮ ಸ್ಥಾಪಕನಾಗಿ, ತನ್ನ ತನು ಮನ ಧನವನ್ನು ಸ್ವಾರ್ಥರಹಿತವಾಗಿ, ಜನ ಬದುಕಬೇಕೆಂಬ ಒಂದೇ ಒಂದು ಆಸೆಯಿಂದ ತ್ಯಾಗಮಾಡಿದ ಬಸವಣ್ಣನನ್ನು 'ಯುಗದ ಉತ್ಸಾಹ ಪುರುಷ' ಎಂದು ಕರೆದುದರಲ್ಲಿ ಅತಿಶಯೋಕ್ತಿ ಏನೂ ಇಲ್ಲ. ಸೊನ್ನಲಿಗೆಯ ಶೈವಧರ್ಮದ ಗುರುವಾಗಿದ್ದ ಶ್ರೀ ಶಿವಯೋಗಿ ಸಿದ್ಧರಾಮರ ಕರ್ಮವನ್ನು ಪರಿಹರಿಸಿ, ಲಿಂಗಾಯತ ಧರ್ಮಮಾರ್ಗದಲ್ಲಿ ನಡೆಯುವಂತೆ ಮಾಡಿ, ಜೊತೆಯಲ್ಲೆ ಕರೆತಂದ. ಶೂನ್ಯ ಪೀಠಾಧ್ಯಕ್ಷ ಶ್ರೀಗುರು ಅಲ್ಲಮಪ್ರಭುದೇವರು, ನಾಡಿನ ಜನರ ಮನದ ಮಲಿನವನ್ನು ತೊಳೆದು, ಅವರ ಭವಿತನವನ್ನು ನೀಗಿಸಿ, ಲಿಂಗಾಯತ ಧರ್ಮದ ಸುಜ್ಞಾನವನ್ನು ತುಂಬಲು, ಶ್ರೀ ಶಿವಯೋಗಿ ಸಿದ್ಧರಾಮರೊಡಗೂಡಿ ನಾಡಿನಾದ್ಯಂತ ಪ್ರವಾಸ ಕೈಗೊಂಡರು. ಊರು ಊರುಗಳಲ್ಲಿ ಧರ್ಮ ಸಭೆಗಳನ್ನು ಏರ್ಪಡಿಸಿ, ಧರ್ಮದ ನೀತಿ ತತ್ವ ಸಿದ್ಧಾಂತಗಳನ್ನು ಮೇಧಾವಿ ಭಾಷಣಕಾರರಿಂದ ಜನರ ಮನಸ್ಸಿಗೆ ನಾಟುವಂತೆ ಬಿಂಬಿಸುತ್ತಾ, ಜಾತಿ ನಿವಾರಣಾ ಕ್ರಿಯೆಯ ಅಂಗವಾಗಿ, ಜಾತ್ಯಾತೀತ ಸಾಮೂಹಿಕ ವಿವಾಹ ಮಹೋತ್ಸವಗಳನ್ನು, ಸಾಮೂಹಿಕ ಲಿಂಗದೀಕ್ಷಾ ಸಮಾರಂಭಗಳನ್ನು, ಸಾಮೂಹಿಕ ಸಹಭೋಜನ ಕೂಟಗಳನ್ನು ಏರ್ಪಡಿಸುವ ಮುಖಾಂತರ ಲಿಂಗಾಯತ ಧರ್ಮಾವಲಂಬಿಗಳ ಸಂಖ್ಯೆ ಬೆಳೆಸಲು ಶ್ರಮಿಸಿದರು. ಆಗಮೋಕ್ತ ಶೈವಧರ್ಮದ, ಲಕುಲೀಶ, ಕಾಳಾಮುಖ, ಪಾಶುಪಥ, ಮಹಾವ್ರತಿ, ಶ್ರೋತೃ ಶಾಖೆಗೆ ಸೇರಿದ, ನಾಥಪಂಥಕ್ಕೆ ಸೇರಿದ ಬಹುತೇಕ ಬ್ರಾಹ್ಮಣ ವರ್ಗದವರನ್ನುಳಿದು, ಒಬ್ಬರೂ ಉಳಿಯದಂತೆ ಲಿಂಗಾಯತ ಧರ್ಮವನ್ನು ಸ್ವೀಕರಿಸಿದರು. ಹೀಗಾಗಿ ಕನ್ನಡ ನಾಡಿನಲ್ಲಿ ಬಹುಸಂಖ್ಯಾತರಾಗಿದ್ದ ಆಗಮೋಕ್ತ ಶೈವಧರ್ಮದ ಅನುಯಾಯಿಗಳೆಲ್ಲರೂ ಲಿಂಗಾಯತರಾಗಿ ಹೋದರು. ಆಗಮೋಕ್ತ ಶೈವಧರ್ಮವೇ ಬರಿದಾದ ಮೇಲೆ, ಉಳಿದಿದ್ದ ಬ್ರಾಹ್ಮಣ ಪುರೋಹಿತರು, ಅರ್ಚಕರೂ ಸಹ ಲಿಂಗಾಯತ ಧರ್ಮದೊಳಗೆ ಬಂದು ಲೀನವಾಗಿ ಹೋದರು. (ಅವರೇ ಇಂದಿನ ವೀರಶೈವರು)

ಕನ್ನಡ ನಾಡಿನಲ್ಲಿ ಲಿಂಗಾಯತ ಧರ್ಮ, ಬಸವಣ್ಣನವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಭದ್ರವಾಗಿ ನೆಲೆಯೂರಿದ ನಂತರ, ಸನಾತನ ಧರ್ಮದ ವೇದೋಕ್ತ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ ಧರ್ಮಗಳ ಪುರೋಹಿತಶಾಹಿ ಮುಂದಾಳುಗಳು ಗಾಬರಿಗೊಳಗಾಗಿ ಲಿಂಗಾಯತ ಧರ್ಮವನ್ನು ಮುಂದುವರೆಯಲು ಬಿಟ್ಟಲ್ಲಿ ಕನ್ನಡ ನಾಡಿನಲ್ಲಿ ಸನಾತನ ಧರ್ಮವೆ ಇಲ್ಲವಾಗಿ, ಲಿಂಗಾಯತ ಧರ್ಮ ಒಂದೇ ಉಳಿಯುವುದೆಂದು ಹೆದರಿದ ಸನಾತನೀಯರು, ಲಿಂಗಾಯತ ಧರ್ಮದ ವಿರುದ್ಧ ಸಾರ್ವಭೌಮ, ಸಾಮ್ರಾಟ ಬಿಜ್ಜಳ ಚಕ್ರವರ್ತಿಯಲ್ಲಿ ದೂರು ದಾಖಲಿಸಿ, ತಮ್ಮ ಹುಯಿಲು ತೋಡಿಕೊಂಡರು. ಕನ್ನಡನಾಡಿನ ಸನಾತನ ಧರ್ಮದ ವೈದೀಕ ನಡೆಯ ಎಲ್ಲಾ ಉಪಧರ್ಮಗಳ, ಧರ್ಮಪೀಠಗಳ ಯತಿಗಳು, ಆಚಾರ್ಯರು, ಪುರೋಹಿತರುಗಳ ಸಂಘಟನೆಯ ಮುಖ್ಯರು, ಬಸವಣ್ಣನ ರಾಜಕೀಯ ಏಳಿಗೆಯನ್ನು ಸಹಿಸದ ಸಾಮ್ರಾಜ್ಯದ ಹಿರಿಯ ಮತ್ತು ಕಿರಿಯ ಮಂತ್ರಿಮಂಡಲದ ಸದಸ್ಯರು, ರಾಜಗುರುಗಳು, ರಾಜಪುರೋಹಿತರೆಲ್ಲಾ ಒಟ್ಟಿಗೆ ಸೇರಿ, ಬಸವಣ್ಣನವರ ಮೇಲೆ ಹೊರಿಸಿದ ಅಪಾದನೆಗಳ ಲಿಖಿತ ದೂರನ್ನು ಚಕ್ರವರ್ತಿ ಬಿಜ್ಜಳ ಭೂಪಾಲನನ್ನು ಮುಖತಹ ಕಂಡು ಅರ್ಪಿಸಿ, ಬಸವಣ್ಣನವರನ್ನು ಪ್ರಧಾನ ಮಂತ್ರಿ ಸ್ಥಾನದಿಂದ ಕಿತ್ತೊಗೆದು ಗಡೀಪಾರು ಮಾಡಬೇಕೆಂದು ಬೇಡಿಕೊಂಡರು. ಬಸವಣ್ಣನವರ ಮೇಲೆ ಹೊರಿಸಿದ ಅಪಾದನೆಗಳ ಲಿಖಿತ ದೂರನ್ನು ಓದಿಕೊಂಡ ಬಿಜ್ಜಳ ಭೂಪಾಲ ಆತಂಕಕ್ಕೊಳಗಾದ. ಸಾಮ್ರಾಜ್ಯ ದಿವಾಳಿ ಅಂಚಿಗೆ ಬಂದು ನಿಂತಿದ್ದಾಗ, ತನ್ನ ಪ್ರಾಮಾಣಿಕತೆ, ದಕ್ಷತೆ, ಚಾಣಾಕ್ಷತೆ, ಕಾರ್ಯಕ್ಷಮತೆಯಿಂದ ಸಾಮ್ರಾಜ್ಯ ಸದೃಢ, ಸಂಪದ್ಭರಿತ, ಸಮೃದ್ಧವಾಗಲು ಶ್ರಮಿಸಿದ ಅಂತರಂಗದ ಪ್ರಾಣಸ್ನೇಹಿತ ಬಸವಣ್ಣನ ಮೇಲೆ ಹೊರಿಸಿರುವ ಆಪಾದನೆಗಳನ್ನು ಕೇಳಿದ

ಬಿಜ್ಜಳ ಭೂಪಾಲ, ಸಾಮ್ರಾಜ್ಯದ ಉಚ್ಚನ್ಯಾಯಾಲಯದ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ಪ್ರಾರಂಭವಾದ ತನಿಖಾ ಪ್ರಕ್ರಿಯೆ ಬಿಜ್ಜಳನ ಆದೇಶದಂತೆ ನಿಧಾನ ಗತಿಯಲ್ಲಿ ಸಾಗತೊಡಗಿತು.

ಸನಾತನ ಧರ್ಮದ ಆದ್ವರ್ಯಗಳು ಬಸವಣ್ಣನ ಮೇಲೆ ಹೊರಿಸಿದ ಮೊದಲ ಅಪಾದನೆ ಸನಾತನ ಧರ್ಮದ ಸಾಮಾಜಿಕ ವ್ಯವಸ್ಥೆಯು ಸಾಕ್ಷಾತ್ ದೇವರಿಂದಲೇ ನಿರ್ಣಯಿಸಿದ ಚಾತುರ್ವರ್ಣ ವರ್ಗ ವ್ಯವಸ್ಥೆಯಂತೆ. ಬ್ರಾಹ್ಮಣ ವರ್ಗ ಅತ್ಯಂತ ಶ್ರೇಷ್ಠವೆಂದೂ, ದೇವರು ಮತ್ತು ಧರ್ಮದ ಹೊಣೆ ಬ್ರಾಹ್ಮಣರಿಗಷ್ಟೇ ಮೀಸಲು. ಎರಡನೆಯ ಕ್ಷತ್ರಿಯ ವರ್ಗ, ದೇಶದ ಮತ್ತು ದೇಶವಾಸಿಗಳ ರಕ್ಷಣೆ ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹೊಣೆ ಕ್ಷತ್ರಿಯ ವರ್ಗದವರದೆಂದೂ, ಮೂರನೆಯ ವೈಷ್ಯವರ್ಗ ದೇಶದ ಕೈಗಾರಿಕಾ ಮತ್ತು ವ್ಯವಸಾಯ ಉತ್ಪನ್ನಗಳನ್ನು ಹೊರದೇಶಗಳಿಗೆ ನಿರ್ಯಾತ ಮಾಡುವ, ಕೊರತೆಯಾದ ಉತ್ಪನ್ನಗಳನ್ನು ಆಯತ ಮಾಡುವ ವಾಣಿಜ್ಯ ವ್ಯವಹಾರಗಳ ಹೊಣೆ ವೈಷ್ಯ ವರ್ಗದವರದೆಂದೂ, ನಾಲ್ಕನೆಯ ಮತ್ತು ಕೊನೆಯ ಶೂದ್ರ ವರ್ಗ ದೇಶವಾಸಿಗಳ ಜೀವನ ಅವಶ್ಯಕ ಆಹಾರ, ಉಡುಪು, ಇನ್ನಿತರ ಪರಿಕರಗಳ ಉತ್ಪಾದನೆಯ ಹೊಣೆ ಶೂದ್ರ ವರ್ಗದವರದೆಂದೂ, ಐದನೆಯ ಪಂಚಮ, ದಲಿತ ಮತ್ತು ಅಸ್ಪೃಶ್ಯ ವರ್ಗ ಚಾತುರ್ವರ್ಣೀಯರ ನಿತ್ಯ ಸೇವೆಯ ಹೊಣೆಯೆಂದೂ, ಹೀಗೆ ದೇವರಿಂದಲೇ ನಿರ್ಣಯಿತವಾದ ಸಾಮಾಜಿಕ ವ್ಯವಸ್ಥೆಯ ವಿರುದ್ಧ, ಬಸವಣ್ಣ ಹೇಳುತ್ತಿರುವುದು ಮತ್ತು ಈಗಾಗಲೇ ಕಾರ್ಯಗತ ಗೊಳಿಸುತ್ತಿರುವುದು, ಮನುಷ್ಯ ಜನ್ಮದಲ್ಲಿ ಹುಟ್ಟಿದ ಸರ್ವರೂ ಸಮಾನರು, ಜೀವನ ನಿರ್ವಹಣೆ ಅವಶ್ಯಕತೆಗಳಿಗೆ ಅನುಗುಣವಾಗಿ, ಅವರವರ ಬೌದ್ಧಿಕ ಶಕ್ತಿ, ಗುಣ, ಕರ್ಮಗಳನ್ನು ಅನುಸರಿಸಿ, ಸತ್ಯ ಶುದ್ಧ ನ್ಯಾಯಯುತ ಉದ್ಯೋಗ ಯಾವುದೇ ಇರಲಿ, ಯಾರೂ ಯಾವುದೇ ಉದ್ಯೋಗದಲ್ಲಿ ತೊಡಗಿಕೊಳ್ಳಲು ಸ್ವತಂತ್ರರು.

ಇದರಲ್ಲಿ ಮೇಲು, ಮಧ್ಯಮ, ಕೀಳು ಎಂಬುದೇನೂ ಇಲ್ಲ ಎಂದು ಹೇಳುತ್ತಾ, ದೇವರ ನಿರ್ಣಯವನ್ನು ಅಲ್ಲಗಳೆಯುತ್ತಿರುವ ಬಸವಣ್ಣ ಬಹುದೊಡ್ಡ ತಪ್ಪು ಮಾಡಿದ್ದಾನೆ. ಇಷ್ಟಲ್ಲದೆ ಜಾತಿ ನಿರ್ಮೂಲನೆ ಮಾಡುವ ಅಂಗವಾಗಿ 'ರಕ್ತ ಸಂಬಂಧದಿಂದ ಸಮಾನತೆ' ಎಂಬ ಧ್ಯೇಯವಾಕ್ಯವನ್ನಿಟ್ಟುಕೊಂಡು ಜಾತಿ ಜಾತಿಗಳ ಮಧ್ಯೆ ಸಾಮೂಹಿಕ ವಿವಾಹ, ಸಹಪಂಕ್ತಿ ಭೋಜನ, ಸಾಮೂಹಿಕ ಲಿಂಗದೀಕ್ಷಾ ಸಮಾರಂಭಗಳು, ಇವುಗಳಿಂದಾಗಿ ಸನಾತನ ಧರ್ಮದ ಸಾಮಾಜಿಕ ನೀತಿಗಳಿಗೆ ಬಸವಣ್ಣನಿಂದ ಬಹುದೊಡ್ಡ ಹಾನಿಯಾಗುತ್ತಿದೆ, ಇದಕ್ಕೆ ತಡೆಯೊಡ್ಡಿ ನ್ಯಾಯ ದೊರಕಿಸಬೇಕು.

ಬಸವಣ್ಣನಿಂದ ಸನಾತನ ಧರ್ಮದ ಧಾರ್ಮಿಕ ವ್ಯವಸ್ಥೆಯ ಮೇಲೆ ಧಾಳಿಯಾಗುತ್ತಿದ್ದು, ಹೀಗೆಯೇ ಮುಂದುವರಿಯಲು ಬಿಟ್ಟಲ್ಲಿ ಸನಾತನ ಧರ್ಮ ನಾಶವಾಗುವುದರಲ್ಲಿ ಯಾವ ಸಂಶಯಗಳೂ ಉಳಿದಿಲ್ಲ. ಸನಾತನ ಧರ್ಮದ ಸರ್ವೋಚ್ಚ ದೇವರುಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರು ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತರಾಗಿ, ಇವರ ಮುಕ್ಕೋಟಿ ಪರಿವಾರ ದೇವಾನುದೇವತೆಗಳ ಅಸ್ತಿತ್ವವನ್ನೇ ಪ್ರಶ್ನಿಸಿ, ದೇವರು ಒಬ್ಬನೇ, ಅವನು ನಿರಾಕಾರ, ಸರ್ವಶಕ್ತ, ಸರ್ವವ್ಯಾಪಿ, ಸರ್ವಕಾರಣಕರ್ತ, ಸರ್ವಜ್ಞ, ಇಂತಹ ಒಬ್ಬನೇ ಒಬ್ಬ ದೇವರ ಕೃಪೆಗಾಗಿ ಪ್ರಾರ್ಥಿಸಲು ಯಾವ ಗುಡಿಗಳಿಗೂ ಹೋಗಬೇಕಾಗಿಲ್ಲ. ನಿರಾಕಾರನಾದ ದೇವರಿಗೆ ಗೋಳಾಕಾರ ಕೊಟ್ಟು ತನ್ನ ಹಸ್ತದಲ್ಲಿರಿಸಿ ಪೂಜಿಸಲು, ಪ್ರಾರ್ಥಿಸಲು ಹೇಳಿ, ತಮ್ಮ ತಮ್ಮ ಅಂಗದಲ್ಲಿ ಧರಿಸಲು ಹೇಳುವ ಬಸವಣ್ಣ ಸನಾತನ ಧರ್ಮದ ಧಾರ್ಮಿಕ ವ್ಯವಸ್ಥೆಯನ್ನೇ ಧಿಕ್ಕರಿಸಿದ್ದಾನೆ.

ಸನಾತನ ಧರ್ಮದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯ ವಿರುದ್ಧ ತನ್ನದೇ ಆದ ನೀತಿ, ನಿಯಮಗಳನ್ನು ರೂಪಿಸಿ, ಸನಾತನ ಧರ್ಮದ ಅನುಯಾಯಿಗಳ ದಿಕ್ಕನ್ನೇ ಬದಲಾಯಿಸಿ, ಸನಾತನ ಧರ್ಮವನ್ನು ಧಿಕ್ಕರಿಸಿ ಅವಮಾನ ಮಾಡಿದ್ದಾನೆ. ಈ ಎಲ್ಲಾ ಕಾರಣಗಳಿಂದ, ಬಸವಣ್ಣನನ್ನು ಸಾಮ್ರಾಜ್ಯದ ಪ್ರಧಾನ ಮಂತ್ರಿ ಸ್ಥಾನದಿಂದ ಕಿತ್ತೊಗೆದು ಗಡೀಪಾರು ಶಿಕ್ಷೆಯನ್ನು ಕೊಡಬೇಕು. ಇದು ಸನಾತನ ಧರ್ಮದ ಆದ್ವರ್ಯಗಳ ಬೇಡಿಕೆಯಾಗಿತ್ತು. ಬಸವಣ್ಣನವರ ಮೇಲೆ ಹೊರಿಸಿದ ಅಪಾದನೆಗಳನ್ನು ಪರಿಶೀಲಿಸಿದ ತನಿಖಾ ಆಯೋಗದ ಮುಖ್ಯಸ್ಥ ನ್ಯಾಯಮೂರ್ತಿಗಳು ಬಸವಣ್ಣನವರನ್ನು ನ್ಯಾಯಾಸ್ಥಾನಕ್ಕೆ ಕರೆಸಿಕೊಂಡು, ಅಪಾದನೆಗಳಿಗೆ ಉತ್ತರಿಸುವಂತೆ ಆದೇಶಿಸಿದರು. ನ್ಯಾಯಾಲಯದ ಕಟಕಟೆಯಲ್ಲಿ ನಿಂತ ಬಸವಣ್ಣನವರ ಉತ್ತರ ಕೇಳಿ ತಬ್ಬಿಬ್ಬುಗೊಂಡ ನ್ಯಾಯಾಧೀಶರು, ಏನನ್ನೂ ನಿರ್ಧರಿಸಲಾರದೆ ತೀರ್ಪು ಮುಂದೂಡಿದರು. ಹಾಗಾದರೆ ಬಸವಣ್ಣನವರ ಹೇಳಿಕೆಯಾದರೂ ಏನಿತ್ತು.

ನ್ಯಾಯಾಸ್ಥಾನದಲ್ಲಿ ನಿಂತ ಬಸವಣ್ಣ ತನ್ನ ಬಾಲ್ಯದಿಂದ ಇಲ್ಲಿಯವರೆಗೆ ತನಗೆ ಎದುರಾದ ಎಲ್ಲಾ ಘಟನೆಗಳನ್ನು ಸವಿಸ್ತಾರವಾಗಿ ಹೇಳುತ್ತಾ ಸನಾತನ ಧರ್ಮದ

**13ನೇ ಪುಟಕ್ಕೆ......**

# ಜನಗಣತಿ ಮತ್ತು ನೊಳಂಬ ಲಿಂಗಾಯತರು


ವೀರಶೈವ ನೊಳಂಬ ಸಂಘವು ಕೆಲವು ವರ್ಷಗಳ ಹಿಂದೆಯೇ ಲಿಂಗಾಯತ ನೊಳಂಬ ಸಂಘವಾಗಿ ನಾಮಕರಣಗೊಂಡಿದೆ. ಈ ಹೆಸರಿನ ಬದಲಾವಣೆ ಮಾಡುವುದಕ್ಕೆ ಕಾರಣರಾದ ಲಿಂಗಾಯತ ನೊಳಂಬ ಸಂಘದ ಎಲ್ಲ ಪದಾಧಿಕಾರಿಗಳಿಗೆ ನೊಳಂಬ ಸಮಾಜ ಕೃತಜ್ಞತೆ ಸಲ್ಲಿಸಬೇಕು. ಈ ಹೆಸರಿನ ಬದಲಾವಣೆಯು ಒಂದು ಚಾರಿತ್ರಿಕ ಮಹತ್ವದ ಸಂಗತಿಯಾಗಿದೆ. ಲಿಂಗಾಯತವು ಒಂದು ಜಾತಿಯಲ್ಲ; ಅದು ಒಂದು ಸರ್ವತಂತ್ರ ಸ್ವತಂತ್ರ ಧರ್ಮ. ನೊಳಂಬರು ಮೂಲತಃ ಸಿದ್ಧರಾಮಣ್ಣ ಪ್ರಣೀತ ಲಿಂಗಾಯತ ಧರ್ಮದ ಅನುಯಾಯಿಗಳು. ಸಿದ್ಧರಾಮಣ್ಣದೇವರು ಬಸವಣ್ಣನವರ ಸಮಕಾಲೀನ ಶರಣರು. ಬಸವಣ್ಣನಂತೆ ಸಿದ್ಧರಾಮಣ್ಣ ಚಾರಿತ್ರಿಕ ಪುರುಷರು. ಬಸವ–ಸಿದ್ಧರಾಮಣ್ಣಾದಿ ಶರಣರಿಗೆ "ಇಷ್ಟಲಿಂಗ" ದೇವರು, ಸಿದ್ಧರಾಮಣ್ಣ ಮತ್ತು ಬಸವ ತಂದೆ 'ಗುರು'ಗಳು. ಕೆಲವು ಚಾರಿತ್ರಿಕ, ಧಾರ್ಮಿಕ, ರಾಜಕೀಯ ಕಾರಣಗಳಿಂದಾಗಿ ಲಿಂಗಾಯತದೊಳಗೆ ವೀರಶೈವವು ಸೇರಿಕೊಂಡು ಬಿಟ್ಟಿದೆ. ವೀರಶೈವವು "ಶೈವ"ದ ಒಂದು ಭಾಗವಾಗಿದೆ. ವೀರಶೈವರು ತಮ್ಮನ್ನು ತಾವು ಹಿಂದುತ್ವದ ಭಾಗವೆಂದು, ಬಸವಣ್ಣ ಧರ್ಮ ಸುಧಾರಕನೇ ಹೊರತು ಲಿಂಗಾಯತ ಧರ್ಮಸ್ಥಾಪಕನಲ್ಲ ಎಂದು ಹೇಳಿತ್ತಿದ್ದಾರೆ. ನಮ್ಮದು ಪ್ರಾಚೀನ ಧರ್ಮ ಎಂದು ಅವರು ಘೋಷಿಸಿಕೊಳ್ಳುತ್ತಿದ್ದಾರೆ. ಮುಂದುವರಿದು ಬಸವಣ್ಣ – ಸಿದ್ಧರಾಮಣ್ಣಾದಿ ಶರಣರೆಲ್ಲರೂ "ಭಕ್ತ"ರೇ ವಿನಾ ಗುರುಗಳಲ್ಲ ಎಂದು ವೀರಶೈವ ಮಠಾಧೀಶರು ತಮ್ಮ ಶ್ರೇಷ್ಠತನವನ್ನು ಮೆರೆಸುತ್ತಿದ್ದಾರೆ. ಶ್ರೇಷ್ಠ – ಕನಿಷ್ಠ ಎಂದು ಭೇದವನ್ನು ಹುಟ್ಟು ಹಾಕ್ಕದ್ದಾರೆ. ವೀರಶೈವ ಮಠಾಧೀಶರು "ಗುರು"ಗಳು, ಬಸವಣ್ಣ "ಭಕ್ತ" ಎಂದು ಬಸವಣ್ಣ – ಸಿದ್ಧರಾಮಣ್ಣಾದಿ ಶರಣರನ್ನು ಗೌಣ ಮಾಡುತ್ತಿದ್ದಾರೆ. ಈಗಾಗಲೆ ಸಿದ್ಧವಾಗಿರುವಂತೆ ವೀರಶೈವವು ಲಿಂಗಾಯತ ಧರ್ಮದ ಒಂದು ಒಳಪಂಗಡವಾಗಿದೆ.

ಈ ಲಿಂಗಾಯತ–ವೀರಶೈವ ಎಂಬ 'ವಿಭೇದ'ದ ಕಾರಣವಾಗಿ ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ದೊರೆಯುತ್ತಿಲ್ಲ. ಏಕೆಂದರೆ ಲಿಂಗಾಯತವು ಹಿಂದುತ್ವದಿಂದ ಭಿನ್ನವಾಗಿದ್ದರೆ ವೀರಶೈವವು ಹಿಂದುತ್ವದ ಭಾಗ. ಇದನ್ನು ಬಿಗಿಯಾಗಿ ಹಿಡಿದುಕೊಂಡು ಕೇಂದ್ರ ಸರ್ಕಾರವು ಜನಗಣತಿ ನಿರ್ದೇಶನಾಲಯದ ಮೂಲಕ ಲಿಂಗಾಯತಕ್ಕೆ ಸ್ವತಂತ್ರ ಧರ್ಮ ಸ್ಥಾನಮಾನ ನೀಡುವುದನ್ನು ನಿರಾಕರಿಸುತ್ತಿದೆ. ಈ ಭೇದವನ್ನು ತೊಡೆದು ಹಾಕಿ – ಲಿಂಗಾಯತ ಒಂದು ಸ್ವತಂತ್ರ ಧರ್ಮ; ಇದು ವೇದಾಗಮ ಶಾಸ್ತ್ರ ಪುರಾಣಗಳನ್ನು ಒಪ್ಪುವುದಿಲ್ಲ; ಇಲ್ಲಿ ವರ್ಣ – ವರ್ಗ – ಲಿಂಗ ಭೇದಗಳಿಲ್ಲ ಎಂಬ ಸಿದ್ಧಾಂತದ ಮೂಲಕ ಲಿಂಗಾಯತ ಸ್ವತಂತ್ರ ಧರ್ಮ ಎಂಬುದನ್ನು ಪ್ರತಿಪಾದಿಸಿದರೆ ಅದಕ್ಕೆ ಸ್ವತಂತ್ರ ಧರ್ಮದ ಸ್ಥಾನವನ್ನು ಕೇಂದ್ರ ಸರ್ಕಾರಕ್ಕೆ ನಿರಾಕರಿಸುವುದು ಸಾಧ್ಯವಿಲ್ಲ.

**ಮುಂದಿನ ಜನಗಣತಿ – ಜಾತಿಗಣತಿ**

ಲಿಂಗಾಯತ ಸರ್ವತಂತ್ರಸ್ವತಂತ್ರ ಧರ್ಮದ ಸ್ಥಾನಮಾನವನ್ನು ಒತ್ತಾಯಿಸಲು ಮತ್ತು ಅದನ್ನು ಪಡೆದುಕೊಳ್ಳಲು ಒಂದು ಸುವರ್ಣಾವಕಾಶ ನಮ್ಮೆದುರಿಗೆ ಬಂದಿದೆ. ಮುಂದೆ 2026 ಅಕ್ಟೋಬರ್‌ನಲ್ಲಿ ಆರಂಭವಾಗಲಿರುವ ಜನಗಣತಿಯ ಜೊತೆಯಲ್ಲಿ ಜಾತಿಗಣತಿಯನ್ನು ನಡೆಸಲು ಕೇಂದ್ರ ಸರ್ಕಾರ ನಿರ್ಣಯಿಸಿದೆ. ಸ್ವಾತಂತ್ರ್ಯಾನಂತರ 1951ರಿಂದ ಜನಗಣತಿಯನ್ನು ಮಾತ್ರ ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಸುತ್ತಾ ಬರಲಾಗಿದೆ. ಕೊವಿಡ್ 19ರ ಭೀಕರ ರೋಗದ ಹಾವಳಿಯಿಂದಾಗಿ 2021ರಲ್ಲಿ ಜನಗಣತಿಯನ್ನು ನಡೆಸಲಿಲ್ಲ. ಈಗ ಕೇಂದ್ರ ಸರ್ಕಾರವು 2026ರಲ್ಲಿ ಜನಗಣತಿ ನಡೆಸಲು ತಯಾರಿ ನಡೆಸುತ್ತಿದೆ.

ಮೊದಲ ಬಾರಿಗೆ ಸ್ವಾತಂತ್ರ್ಯಾನಂತರ ಜನಗಣತಿಯ ಜೊತೆಯಲ್ಲಿ ಜಾತಿಗಣತಿಯನ್ನು ನಡೆಸಲಾಗುತ್ತಿದೆ. ಲಿಂಗಾಯತ ಸ್ವತಂತ್ರ ಧರ್ಮದ ಹಕ್ಕೊತ್ತಾಯವನ್ನು ಕೇಂದ್ರ ಸರ್ಕಾರದ ಮುಂದಿಡಲು ಇದೊಂದು ಸಕಾಲವಾಗಿದೆ. ಕರ್ನಾಟಕ ಸರ್ಕಾರವು 2018ರಲ್ಲಿಯೇ ಜಸ್ಟಿಸ್ ಎಚ್.ಎನ್. ನಾಗಮೋಹನದಾಸ್ ಆಯೋಗದ "ಲಿಂಗಾಯತ ಸ್ವತಂತ್ರ ಧರ್ಮ" ಎಂಬ ಶಿಫಾರಸ್ಸನ್ನು ಒಪ್ಪಿಕೊಂಡು ಲಿಂಗಾಯತವು ಸ್ವತಂತ್ರ ಧರ್ಮ ಎಂಬುದನ್ನು ಘೋಷಿಸಿದೆ. ಆದರೆ ಸ್ವತಂತ್ರ ಧರ್ಮದ ಸ್ಥಾನಮಾನವನ್ನು ನೀಡುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ.



**ಪ್ರೊ. ಟಿ.ಆರ್.ಚಂದ್ರಶೇಖರ**
ವಿಶ್ರಾಂತ ಪ್ರಾಧ್ಯಾಪಕ, 2ನೆ ಮೇನ್, 4ನೆಯ ಕ್ರಾಸ್, ಬೇಗೂರು ಮುಖ್ಯ ರಸ್ತೆ, ಹೊಂಗಸಂದ್ರ–560 068, ಬೆಂಗಳೂರು.

ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ನೀಡಬೇಕೆಂಬ ತನ್ನ ನಿರ್ಣಯವನ್ನು ಅನುಮೋದಿಸಲು ರಾಜ್ಯ ಸರ್ಕಾರವು ಕೇಂದ್ರಕ್ಕೆ 2018ರಲ್ಲಿಯೇ ವರದಿಯನ್ನು ಕಳುಹಿಸಿಕೊಟ್ಟಿದೆ. ಈಗ ಬಸವಣ್ಣ ಲಿಂಗಾಯತ ಧರ್ಮದ ಸ್ಥಾಪಕ ಮಾತ್ರವಲ್ಲ; ಅವನು ಕರ್ನಾಟಕದ ಸಾಂಸ್ಕೃತಿಕ ನಾಯಕ.

**ಧರ್ಮದ ಕಾಲಂನಲ್ಲಿ ಲಿಂಗಾಯತ; ಜಾತಿಯ ಕಾಲಂನಲ್ಲಿ ಒಳಪಂಗಡ**

ಮುಂಬರುವ 2026ರ ಜನಗಣತಿ–ಜಾತಿಗಣತಿಯಲ್ಲಿ ಕರ್ನಾಟಕದಲ್ಲಿ ನಾವೆಲ್ಲರು ಜನಗಣತಿ ಅನುಸೂಚಿಯಲ್ಲಿ ಧರ್ಮದ ಕಾಲಂನಲ್ಲಿ “ಲಿಂಗಾಯತ ಧರ್ಮ” ಎಂದು ಜಾತಿಯ ಕಾಲಂನಲ್ಲಿ ತಮ್ಮ ತಮ್ಮ ಒಳಪಂಗಡಗಳ ಹೆಸರನ್ನು ದಾಖಲಿಸುವ ಅಗತ್ಯವಿದೆ. ಉದಾ: ನೊಳಂಬ ಸಮುದಾಯವು ಜನಗಣತಿಯ ಅನುಸೂಚಿಯ ಧರ್ಮದ ಜಾಗದಲ್ಲಿ “ಲಿಂಗಾಯತ ಧರ್ಮ” ಎಂದು ಜಾತಿಯ ಜಾಗದಲ್ಲಿ ‘ನೊಳಂಬ ಲಿಂಗಾಯತ’ ಎಂದು ಬರೆಸಬೇಕು. ಇದಲ್ಲದೆ ಜನಗಣತಿಯ ಗಣತಿದಾರರು ಅನುಸೂಚಿಯನ್ನು ತುಂಬಿದ ನಂತರ ಇದನ್ನು ಸರಿಯಾಗಿ ದಾಖಲಿಸಿದ್ದಾರೆಂಯೇ ಹೇಗೆ ಎಂಬುದನ್ನು ಅನುಸೂಚಿಯನ್ನು ಪರಿಶೀಲಿಸಿ ಸ್ವತಃ ದೃಢಪಡಿಸಿಕೊಳ್ಳಬೇಕು. ಯಾವ ಕಾರಣಕ್ಕೂ ವೀರಶೈವ ಅಥವಾ ವೀರಶೈವ ಲಿಂಗಾಯತ ಎಂಬುದನ್ನು ಜನಗಣತಿಯಲ್ಲಿ ಬರೆಸಕೂಡದು. ಆ ಮೂಲಕ “ಲಿಂಗಾಯತರ ನಿಜ ಸಂಖ್ಯೆಯು 2 ಕೋಟಿ; ಅದು ವೇದಾಗಮಶಾಸ್ತ್ರಪುರಾಣಗಳಿಂದ ಭಿನ್ನ; ಅದು ಹಿಂದುತ್ವದ ಭಾಗವಲ್ಲ; ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕ; ಎಂಬುದು ದೃಢಪಟ್ಟರೆ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಸ್ಥಾನಮಾನ ದೊರೆಯುವುದು ಕಷ್ಟವಾಗಬಾರದು.

ಈ ಹಿನ್ನೆಲೆಯಲ್ಲಿ ಬಸವಣ್ಣ–ಸಿದ್ಧರಾಮಣ್ಣನವರ ಅನುಯಾಯಿಗಳಾದ ನಾವೆಲ್ಲರು ದೃಢನಿಶ್ಚಯ ಮಾಡಿ ಕಟಿಬದ್ಧರಾಗಿ ಜನಗಣತಿಯಲ್ಲಿ ನಮ್ಮ ಧರ್ಮ ಲಿಂಗಾಯತ ಎಂದು, ನಮ್ಮ ಜಾತಿ ನೊಳಂಬ ಎಂದು ದಾಖಲಿಸಬೇಕು. ಇದೊಂದು ಚರಿತಾರ್ಹ ಬೆಳವಣಿಗೆಯಾಗುತ್ತದೆ. ದೇಶದಲ್ಲಿ 60–70 ಲಕ್ಷ ಜನಸಂಖ್ಯೆಯಿರುವ ಜೈನ ಧರ್ಮಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನ 2014ರಲ್ಲಿ ದೊರೆತಿದೆ. ಕರ್ನಾಟಕದಲ್ಲಿ 2 ಕೋಟಿ ಮೀರಿ ಜನಸಂಖ್ಯೆಯಿರುವ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನ ದೊರಕಿಸಿಕೊಳ್ಳುವ ಸುವರ್ಣಾವಕಾಶವನ್ನು ನಾವು ಕಳೆದುಕೊಂಡರೆ ಇತಿಹಾಸ ಮತ್ತು ನಮ್ಮ ಮುಂದಿನ ತಲೆಮಾರು ನಮ್ಮನ್ನು ಕ್ಷಮಿಸುವುದಿಲ್ಲ.

---

**11ನೇ ಪುಟದಿಂದ....**

ಸ್ಥಾಪನೆ, ಅದರ ಮೂಲ ಆದರ್ಶ, ಸಾಮಾಜಿಕ ಮತ್ತು ಧಾರ್ಮಿಕ ನೀತಿಗಳು ಹೇಗೆ ಯಾರಿಂದ ಕಲುಷಿತಗೊಂಡವು, ಕಲುಷಿತಗೊಂಡ ಸನಾತನ ಧರ್ಮದ ಅನೀತಿ, ಅನ್ಯಾಯಗಳಿಂದ ಜನಸಾಮಾನ್ಯರು ಯಾವ ರೀತಿ ನಲುಗಿಹೋಗಿದ್ದರು. ನಲುಗಿಹೋಗಿದ್ದ ಜನರ ಬದುಕು ಹಸನಾಗಲು ಬಸವಣ್ಣ ಮತ್ತು ಅವನ ಸಂಗಡಿಗರು ಶ್ರಮಿಸಿದ್ದು, ಅವರ ಶ್ರಮ, ಪುರೋಹಿತಶಾಹಿ ಪಟ್ಟಭದ್ರ ಹಿತಾಸಕ್ತರ ಕುತಂತ್ರಕ್ಕೆ ಬಲಿಯಾಗಿದ್ದು ಮತ್ತು ಸನಾತನ ಧರ್ಮದ ಸಮಾಜೋಧಾರ್ಮಿಕ ನೀತಿಗಳ ಸುಧಾರಣಾ ಕಾರ್ಯ ಕೈಬಿಟ್ಟರು. ಕಲುಷಿತಗೊಂಡ ಸನಾತನ ಧರ್ಮದ ವಿರುದ್ಧ ಲಿಂಗಾಯತ ಧರ್ಮ ಸ್ಥಾಪಿಸಿದ್ದು, ಲಿಂಗಾಯತ ಧರ್ಮದ ಜನಪರ ನೀತಿಗಳನ್ನು ಅನುಷ್ಠಾನಗೊಳಿಸಲು ಸವಾಲಾಗಿ ನಿಂತ ಪುರೋಹಿತಶಾಹಿಗಳ ಕಿರುಕುಳಕ್ಕೊಳಗಾಗಿ ಎಲ್ಲವನ್ನೂ ಎಳೆಎಳೆಯಾಗಿ ವಿವರಿಸಿದ ಬಸವಣ್ಣ, ಒಂದು ವಿಧದಲ್ಲಿ ಸನಾತನ ಧರ್ಮದ ಅನೀತಿಯುತ ಸಮಾಜೋಧಾರ್ಮಿಕ ನೀತಿಗಳ ವಿರುದ್ಧ, ಲಿಂಗಾಯತ ಧರ್ಮದ ಸುನೀತಿಯುತ ಸಮಾಜೋಧಾರ್ಮಿಕ ನೀತಿಗಳನ್ನು ಪುರೋಹಿತಶಾಹಿ ವರ್ಗಕ್ಕೆ ಸೇರುದವರೇ, ನನ್ನ ಮೇಲೆ ಹೊರಿಸಿರುವ ಆಪಾದನೆಗಳಿಗೆ ಉತ್ತರವನ್ನೂ ಅವರೇ ಕೊಟ್ಟುಕೊಂಡು ನನ್ನ ಶ್ರಮವನ್ನು ಹಗುರ ಮಾಡಿದ್ದಾರೆ. ಅವರ ಆರೋಪಗಳ ಉತ್ತರಾರ್ಧವೇ ನನ್ನ ಹೇಳಿಕೆ ಎಂದು ಮಾನ್ಯ ಮಾಡಿ ಪ್ರಕರಣವನ್ನು ಇತ್ಯರ್ಥಗೊಳಿಸಲು ಪ್ರಾರ್ಥಿಸುತ್ತೇನೆ ಎಂದು ತಮ್ಮ ಮಾತನ್ನು ಮುಗಿಸಿದ ಬಸವಣ್ಣ ನ್ಯಾಯಾಸ್ಥಾನದಿಂದ ನಿರ್ಗಮಿಸಿದರು.

ಮುಂದೆ ನಡೆದ ಅಹಿತಕರ ಘಟನೆಗಳಿಂದ ನೊಂದ ಬಸವಣ್ಣ ಸಾಮ್ರಾಜ್ಯದ ಪ್ರಧಾನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ತನ್ನ ವ್ಯಕ್ತಿತ್ವವನ್ನು ರೂಪಿಸಿದ ಪುಣ್ಯಕ್ಷೇತ್ರ ಕೂಡಲಸಂಗಮದತ್ತ ನಡೆದು ಸಂಗಮನಾಥನಲ್ಲಿ ಲೀನವಾದರು.

**ಪತ್ರಿಕೆಗೆ ಚಂದಾದಾರಾಗಿ**

# ಕಂಬಿ ಹಬ್ಬ–2025

**ನಿರ್ಮಲ ಕರ್ಮವದು ಸದ್ಗತಿಗೆ ಸಾಧನ ನೋಡಾ**
**ನಿರ್ಮಲ ಕರ್ಮವದು ಜ್ಞಾನಕ್ಕೆ ವರ್ಧನ ನೋಡಾ**
**ನಿರ್ಮಲ ಕರ್ಮವದು ಕಪಿಲಸಿದ್ಧಮಲ್ಲಿಕಾರ್ಜುನನ**
**ಕೂಡುವ ಕೂಟ ನೋಡಾ**

ಎಲ್ಲಾ ಓದುಗರಿಗೂ ನನ್ನ ನಮಸ್ಕಾರಗಳು.

ನಾನು ಈ ಲೇಖನ ಬರೆಯಲು ಕಾರಣ, ಉತ್ತಮ ಯೋಜನೆ, ಇದನ್ನು ಉತ್ತಮ ಕಾರ್ಯದಿಂದ ನಿರ್ವಹಿಸಿದರೆ, ಉತ್ತಮ ಫಲಿತಾಂಶ ನೀಡುತ್ತದೆ. ಅದಕ್ಕೆ ಉದಾಹರಣೆ ಈ 'ಕಂಬಿ ಹಬ್ಬ', ಹಾಸ್ಟೆಲ್ ವಾರ್ಷಿಕೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ಅಂದುಕೊಂಡ ರೀತಿ ನಡೆದದ್ದು. ಒಮ್ಮೆ ಸೋತೆ ಎಂದು ಕಾರ್ಯದಿಂದ ಹಿಮ್ಮುಖವಾಗಬಾರದು, ಮುಂದಿನ ಪ್ರಯತ್ನದಲ್ಲೇ ಯಶಸ್ಸಾಗಬಹುದು. ಇದನ್ನು ಅರಿತ ನಮ್ಮ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮಗೆ ಆಶ್ರಯ ನೀಡಿದ ಹಾಸ್ಟೆಲ್‌ನ ವಾರ್ಷಿಕೋತ್ಸವ ವಿಜೃಂಭಣೆಯಿಂದ ಮಾಡಿ ಯಶಸ್ವಿಯಾಗಿಸಿದರು.

ತನ್ನದೇ ಆದ ಇತಿಹಾಸ ಹೊಂದಿರುವ ದಾನಶೂರ ಕಂಬಿ ಎಂ. ಸಿದ್ಧರಾಮಣ್ಣನವರ ವಿದ್ಯಾರ್ಥಿ ನಿಲಯವು ದಿನಾಂಕ 14–05–1989ರಂದು ಪ್ರಾರಂಭಗೊಂಡಿದ್ದು, ಇಂದು 36ನೇ ವಾರ್ಷಿಕೋತ್ಸವ ಆಚರಿಸಿಕೊಂಡಿದೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಸಂಸ್ಕಾರ ಗುಣಗಳನ್ನು ಬೆಳೆಸಿಕೊಂಡು ದೇಶ ವಿದೇಶಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ ಹಾಗೂ ಇಲ್ಲಿಂದ ನಿರ್ಗಮಿಸಲಿರುವ ಅಂತಿಮ ವರ್ಷದ ತಾಂತ್ರಿಕ ತಾಂತ್ರಿಕೇತರ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಶುಭ ಹಾರೈಕೆಗಳನ್ನು ಹಾಗೂ ಸಂಘದ ಪರವಾಗಿ ಅಭಿನಂದನೆ ಸಲ್ಲಿಸಿ, ಶ್ರೀಗುರು ಸಿದ್ಧರಾಮೇಶ್ವರರ ಕೃಪಾಶೀರ್ವಾದ ದೊರೆಯಲಿ ಎಂದು ಆಶಿಸುತ್ತೇನೆ.

ಈ ವಾರ್ಷಿಕೋತ್ಸವವು ದಿನಾಂಕ 28–06–2025ನೇ ಶನಿವಾರದಂದು ನಡೆದಿದ್ದು ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷರಾದ ಬಿ.ಕೆ.ಚಂದ್ರಶೇಖರ್‌ರವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು, ಗಣ್ಯಮಾನ್ಯರು, ಸಂಘದ ಪದಾಧಿಕಾರಿಗಳು, ಸಿಬ್ಬಂದಿ ವರ್ಗ, ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿರುತ್ತಾರೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

**ಹಾಸ್ಟೆಲ್ ಜೀವನದ ಸವಿ ನೆನಪಿನ ಕ್ಷಣಗಳು ಮತ್ತು ಮೌಲ್ಯಗಳು**

ಹಾಸ್ಟೆಲ್ ಜೀವನವು ವಿದ್ಯಾರ್ಥಿಗಳಿಗೆ ಸವಾಲುಗಳು ಮತ್ತು ಸ್ಮರಣೀಯ ಕ್ಷಣಗಳಿಂದ ತುಂಬಿದ ವಿಶಿಷ್ಟ ಅನುಭವಗಳನ್ನು ನೀಡುತ್ತದೆ. ಅತ್ಯುತ್ತಮ ಕ್ಷಣಗಳು ಹೆಚ್ಚಾಗಿ ಬಲವಾದ ಸ್ನೇಹವನ್ನು ಬೆಳೆಸುವುದು, ಸ್ವತಂತ್ರತೆಯನ್ನು ಪಡೆಯುವುದು ಮತ್ತು ಅಮೂಲ್ಯವಾದ ಜೀವನ ಪಾಠಗಳನ್ನು ಕಲಿಸುವುದರ ಸುತ್ತ ಕೇಂದ್ರೀಕೃತವಾಗಿರುತ್ತದೆ. ಈ ಅನುಭವಗಳಲ್ಲಿ ಹಂಚಿಕೊಂಡ ಊಟ, ಆಚರಣೆಗಳು ಮತ್ತು ಕಠಿಣ ಸಮಯದಲ್ಲಿ ಬೆಂಬಲ ನೀಡುವ, ಒಬ್ಬರಿಗೊಬ್ಬರು ಸಹಕರಿಸುವುದನ್ನು ಕಲಿಸುತ್ತದೆ.

ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಬಗ್ಗೆ ಹಾಸ್ಟೆಲ್ ಜೀವನ ತಿಳಿಸುತ್ತದೆ. ಜವಾಬ್ದಾರಿ ತಮ್ಮ ಸಮಯವನ್ನು ನಿರ್ವಹಿಸಲು, ದೈನಂದಿನ ಕೆಲಸಗಳನ್ನು ನಿರ್ವಹಿಸಲು ಮತ್ತು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು ಕಲಿಯುತ್ತಾರೆ. ವೈವಿಧ್ಯಮಯ ಹಿನ್ನೆಲೆಯ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸುವುದರಿಂದ ದೃಷ್ಟಿಕೋನಗಳು ವಿಶಾಲವಾಗುತ್ತವೆ ಮತ್ತು ಸಾಮಾಜಿಕ ಕೌಶಲ್ಯಗಳು ಹೆಚ್ಚಾಗುತ್ತವೆ.

ಶಾಶ್ವತ ನೆನಪುಗಳು, ಹಂಚಿಕೊಂಡ ಅನುಭವಗಳಿಂದ ತುಂಬಿರುತ್ತವೆ. ಒಟ್ಟಿಗೆ ಕೊಠಡಿಯಲ್ಲಿ ಅಡುಗೆ ಮಾಡುವುದು, ಆಟ ಆಡುವುದು, ತಡರಾತ್ರಿಯ ಮಾತುಕತೆ ನಡೆಸುವುದು ಬಂಧಗಳನ್ನು ಬಲಪಡಿಸುತ್ತವೆ. ವಿದ್ಯಾರ್ಥಿಗಳಲ್ಲಿ ಅವರ ಸೌಕರ್ಯ ವಲಯಗಳಿಂದ ಹೊರಗೆ ತಳ್ಳಿ, ಭವಿಷ್ಯಕ್ಕಾಗಿ ಅವರನ್ನು ಸಿದ್ಧಪಡಿಸುತ್ತದೆ. ಹಾಸ್ಟಲ್ ಜೀವನ ಮರೆಯಲಾಗದ ನೆನಪುಗಳ ಆಗರವೇ ಆಗಿರುತ್ತದೆ.



**ಕಿರಣ್ ಎಸ್.ಬಿ.**
ಹಿರೇಗೋಣಿಗೆರೆ,
ಹೊನ್ನಾಳಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.
ಕಂಬಿ ಸಿದ್ಧರಾಮಣ್ಣ
ವಿದ್ಯಾರ್ಥಿನಿಲಯ, ಬೆಂಗಳೂರು.
ಮೊ : 7760178577

# ಪಾಶ್ಚಿಮಾತ್ಯ ಶಿಕ್ಷಣ ಜ್ಞಾನದೀಪ ಶರಣರ ಸಂಸ್ಕಾರ ನಂದಾದೀಪ

ಶಿಕ್ಷಣ ಮತ್ತು ಸಂಸ್ಕಾರಗಳು ಒಂದು ಮೌಲ್ಯ ಭರಿತ ನಾಣ್ಯದ ಎರಡು ಮುಖಗಳಿದ್ದಂತೆ. ಎರಡು ಮೌಲ್ಯಗಳು ಪರಸ್ಪರ ದೂರವಾದೆಡೆ ತಮ್ಮ ನಿಜ ಮೌಲ್ಯವನ್ನು ಕಳೆದುಕೊಳ್ಳುತ್ತವೆ. ಪಾಶ್ಚಿಮಾತ್ಯ ಶಿಕ್ಷಣ ಎಂಬುದು ಜ್ಞಾನ ಪ್ರಭುತ್ವವಾದ ಶರಣರ ಸಂಸ್ಕಾರವು ಮಾನವೀಯ ಮೌಲ್ಯಗಳ ಹಕ್ಕುದಾರ. ಪ್ರತಿಯೊಬ್ಬರು ಸುಸಂಸ್ಕೃತನಾಗಬೇಕಾದರೆ ಅವನು ಪಡೆದ ಶಿಕ್ಷಣದಿಂದ ಸಾಧ್ಯವಾಗಲಾರದು. ಬದಲಾಗಿ ತಾನು ಪರಿಶ್ರಮದಿಂದ ಗಳಿಸಿದ ವಿದ್ಯೆಯೊಂದಿಗೆ ಸಂಸ್ಕಾರವನ್ನು ಅಂದರೆ ಶರಣರ ಉತ್ತಮ ಸಂಸ್ಕೃತಿಯ ಸೌಜನ್ಯಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಸಮಾಜದಲ್ಲಿರುವ ಎಲ್ಲರೂ ತಮ್ಮ ಸಂಸ್ಕಾರಗಳಿಂದ ಹೆಚ್ಚಿನ ವ್ಯಕ್ತಿತ್ವವನ್ನು ರೂಪಿಸಿಕೊಂಡಾಗ ಮಾತ್ರ ಮಾನವೀಯ ಮೌಲ್ಯಗಳುಳ್ಳ ಸದ್ಗುಣ ಸಂಸ್ಕಾರವಂತನಾಗುತ್ತಾನೆ. ಬಸವಾದಿ ಶರಣರು ತಿಳಿಸಿರುವಂತೆ ಸಂಸ್ಕಾರವು ಅಂತರಂಗವನ್ನು ಶುದ್ಧಿಗೊಳಿಸಿ ಸರ್ವರ ಬೆಳವಣಿಗೆಗೆ, ಸಮೃದ್ಧಿಗೆ ದಾರಿ ಮಾಡಿಕೊಡುತ್ತದೆ. ಶರಣರ ಸಂಸ್ಕೃತಿಯ ಸಂಸ್ಕಾರವಂತರು. ಪರಮಾತ್ಮನಿಗೆ ಪ್ರಿಯರಾದ ಸದ್ಭಕ್ತರಾಗಿ ಸನ್ನಡತೆಯ ಜೀವನ್ಮಾರ್ಗ ಸೂಚಕರಾಗಿರುತ್ತಾರೆ. ಸಂಸ್ಕಾರಗಳನ್ನು ಕಲಿತು ತಮ್ಮಲ್ಲಿ ಅಳವಡಿಸಿಕೊಂಡು ಶರಣರು ಮಾನವೀಯತೆಯ ಮೇರು ಶಿಖರ ಪ್ರಾಯರಾಗಿದ್ದಾರೆ. ಪಾಶ್ಚಿಮಾತ್ಯ ಶಿಕ್ಷಣ ಭೌದ್ಧಿಕ ಬೆಳವಣಿಗೆಗೆ ಬಹಳ ಮುಖ್ಯ. ಅಕ್ಷರಜ್ಞಾನವಿಲ್ಲದವರು ವೈಚಾರಿಕತೆಗೆ ಬದಲಾಗಿ ಮೌಢ್ಯ ಕಂದಾಚಾರಗಳಿಗೆ ಬಲಿಯಾಗಿ ಅಕ್ಷರಸ್ಥರು, ಅಧಿಕಾರ ಹೊಂದಿದ ಭ್ರಷ್ಟರ ಕಪಿಮುಷ್ಠಿಗೆ ಬಲಿಯಾಗಿ ಶೋಚನೀಯ ಜೀವನದಂತೆ ಹೀನಸ್ಥಿತಿಗೆ ಸಿಲುಕಿ ನಲುಗಿದ್ದಾರೆ ನಿಜ. ಆದರೆ ಶಿಕ್ಷಣವೇ ಅಂತಿಮ ಪರಿಹಾರ ಅಲ್ಲ. ಅದಕ್ಕೂ ಮಿಗಿಲಾಗಿ ಶರಣರ ಸಂಸ್ಕಾರವು ಹೆಚ್ಚು ಮಹತ್ವದಿಂದ ಕೂಡಿದೆ. ಉದಾಹರಣೆಗೆ ನೋಡುವುದಾದರೆ ನಮ್ಮ ಪೂರ್ವಜ ಶರಣರೆಲ್ಲರೂ ಉನ್ನತ ಪದವಿ ಪಡೆದ ಅಕ್ಷರಸ್ಥರಾಗಿರಲಿಲ್ಲವಾದರೂ ಸುಸಂಸ್ಕೃತರಾಗಿದ್ದರು. ಶರಣರು ತಮ್ಮ ಜೀವನದ ಜೊತೆಯಲ್ಲಿಯೇ ಸಂಸ್ಕಾರಗಳನ್ನು ಕಲಿತು ಸದ್ಗುಣ ಸಂಪನ್ನರಾಗಿದ್ದರು. ಅನ್ಯಾಯ, ಅನೀತಿ, ದುಷ್ಟಮಾರ್ಗದಿಂದ ಬಹು ಅಂತರದಲ್ಲಿದ್ದರು. ಆಡಿದ ಮಾತು ಕೊಟ್ಟ ವಚನ, ತಾವು ನಂಬಿದ ತತ್ವಸಿದ್ಧಾಂತಗಳಿಗೆ ಬದ್ಧರಾಗಿದ್ದರು. ನುಡಿದರೆ ಮುತ್ತಿನ ಹಾರದಂತಿರಬೇಕು. ಕೊಟ್ಟ ವಾಕ್ಯಕ್ಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬಂತೆ ನಿಷ್ಠರಾಗಿದ್ದರೆ ಹೊರತು ವಚನ ಭ್ರಷ್ಠರಾಗಿರಲಿಲ್ಲ.



**ಮಲ್ಲೇಶಪ್ಪ ಟಿ.ಎಸ್.**
ತಮ್ಮಡಿಹಳ್ಳಿ ಚಿಕ್ಕನಾಯಕನಹಳ್ಳಿ
ತಾಲ್ಲೂಕು, ತುಮಕೂರು ಜಿಲ್ಲೆ.
ಮೊ : 8050074810,9380939580

ಸುಶಿಕ್ಷಿತನು ಸಂಸ್ಕಾರವಂತನಾಗದಿದ್ದರೆ ಸಮಾಜಕ್ಕೆ, ನಾಡಿಗೆ, ದೇಶಕ್ಕೆ ಮಹಾಕಂಟಕನಾಗುತ್ತಾನೆ ಎಂಬುದು ಅಂದಿನಿಂದ ಇಂದಿಗೂ ಕಟುಸತ್ಯವೇ ಹೌದು. ಉದಾಹರಣೆಗೆ ವಿಶ್ವಾಮಿತ್ರ ಮಹಾಪಾಂಡಿತ್ಯವುಳ್ಳವನಾದರೂ ಅವನಲ್ಲಿದ್ದ ಪಾಂಡಿತ್ಯ ಪಡೆದಿರುವೆ ಎಂಬ ಅಹಂಕಾರ, ಕೋಪ, ಗರ್ವದಿಂದ ಸತ್ಯಹರಿಶ್ಚಂದ್ರನಿಂದ ಸೋಲಾಯಿತು. ಅಂದರೆ ಸಂಸ್ಕಾರ ಮರೆತು ಪಂಡಿತ ಎಂಬ ಗರ್ವ, ಸ್ವಾರ್ಥ ವರ್ತನೆಯಿಂದ ರಾವಣನ ಸ್ಥಿತಿಯು ಭಿನ್ನವಾದುದೇನಲ್ಲ. ಕಳಂಕ ಮೆತ್ತಿಕೊಂಡು ಅವಸಾನದತ್ತ ಮುಖ ಮಾಡಿದನು. ಪದವಿಶಿಕ್ಷಣ, ಪಾಂಡಿತ್ಯ, ವಿದ್ವಾಂಸ, ಮಹಾಜ್ಞಾನಿ ಎನಿಸಿಕೊಂಡವರೆಲ್ಲಾ ಸಂಸ್ಕಾರವಂತರಲ್ಲ. ತಾವು ಕಲಿತ ಪದವಿಗಳು ಕೆಲವು ವೇಳೆ ಅತಿಬುದ್ಧಿ ವಿನಾಶಕಾರಿ ಎಂಬಂತೆ ತನಗೆ ಮಾತ್ರವಲ್ಲದೆ ಸಮಾಜಕ್ಕೆ, ದೇಶದ ವಿನಾಶಕ್ಕೂ ತಕ್ಕ ನಿದರ್ಶನಗಳಾಗಿವೆ. ಪ್ರಪಂಚದ ವಿದ್ಯಮಾನಗಳಲ್ಲಿ ಅಕ್ಷರಸ್ಥರೆ ಸಮಾಜಘಾತುಕ ಕೃತ್ಯಗಳಲ್ಲಿ ಅಂದರೆ ಭ್ರಷ್ಟರು, ಮೋಸಗಾರರು ಭಯೋತ್ಪಾದಕರಾಗಿದ್ದಾರೆ. ಕಾನೂನು ಬಾಹಿರ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಿದ್ಯೆ ಕಲಿತರು ಸಮಾಜವನ್ನು, ದೇಶವನ್ನು ತಪ್ಪುದಾರಿಗೆ ಕೊಂಡೊಯ್ಯುತ್ತಿದ್ದಾರೆ. ಇದಕ್ಕೆ ಕಾರಣ ಧರ್ಮ, ಸಂಸ್ಕಾರ ರಹಿತ ಶಿಕ್ಷಣ ಪಡೆದ ಅಕ್ಷರಸ್ಥರು, ಶರಣರ ಮಾನವೀಯ ಮೌಲ್ಯಗಳು ನೈತಿಕ ತತ್ವಗಳನ್ನು ಜೀರ್ಣಿಸಿಕೊಳ್ಳದೆ ಕ್ರೂರಮೃಗಗಳಂತೆ ಸಾಮಾನ್ಯ ಜನರ ಮೇಲೆರಗಿ, ಶೋಷಣೆ, ರಕ್ತಪಾತ, ಭಯಭೀತ ವಾತಾವರಣವನ್ನು ಸೃಷ್ಟಿಸಿ ವಿನಾಶಕಾರಿ ಚಿಂತನೆಯುತ್ತ ಮುಖಮಾಡಿ ಕಾರ್ಯೋನ್ಮುಖರಾಗಿದ್ದಾರೆ.

ಶರಣರ ಸಂಸ್ಕಾರ ರಹಿತ, ಮಾನವೀಯತೆ ಇಲ್ಲದ ಪಾಶ್ಚಿಮಾತ್ಯ ಶಿಕ್ಷಣ ಬಹು ಅಪಾಯಕಾರಿ. ಮನುಷ್ಯನಾದವನಿಗೆ ಶರಣ ಸಂಸ್ಕಾರ

ಎಂಬ ಲಗಾಮು (ಬ್ರೇಕ್) ಅತ್ಯಾವಶ್ಯಕ. ಇಂದಿನ ಯುವ ಜನಾಂಗಕ್ಕೆ ಶಿಕ್ಷಣದ ಜೊತೆಗೆ ಸಂಸ್ಕಾರದ ಪ್ರಸ್ತುತತೆ ಇದೆ. ಶಿಕ್ಷಣದಿಂದ ಪಡೆದ ಜ್ಞಾನ ಸರ್ವರಹಿತ ಸಾಧನೆಗೆ ಸದುಪಯೋಗವಾದಾಗ ಮಾತ್ರ ಶಿಕ್ಷಣಕ್ಕೆ ಮೌಲ್ಯಬರುತ್ತದೆ. ಕಲಿತ ವಿದ್ಯೆಯನ್ನು ಸನ್ಮಾರ್ಗಕ್ಕೆ ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಶರಣರ ಸಂಸ್ಕಾರ ಕಲಿಸಿಕೊಡುತ್ತದೆ.

ಶಿಕ್ಷಣದಲ್ಲಿ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬಂತೆ, ಸಂಸ್ಕಾರವು ಮನೆಯಿಂದಲೇ ಪ್ರಾರಂಭವಾಗಿರಬೇಕು. ಜೊತೆಗೆ ಹೆಚ್ಚಿನ ಜ್ಞಾನಾರ್ಜನೆಗೆ ಶಾಲಾ ಕಾಲೇಜು ಸೇರಿ ವ್ಯಾಸಾಂಗ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಕರು, ಕೇವಲ ಹಣಗಳಿಸುವ ವಿದ್ಯೆಯನ್ನು ಅಂದರೆ ವಜ್ರ ವೈಢೂರ್ಯ ಹೊಟ್ಟೆ ಬಟ್ಟೆಯನ್ನು ತುಂಬಿಸಿಕೊಳ್ಳುವ ಯಂತ್ರಗಳನ್ನಾಗಿಸದೆ ಆ ಮಕ್ಕಳನ್ನು ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಗಳಾಗಿ ರೂಪಿಸಬೇಕು. ಜೀವನದ ನಡೆ, ನುಡಿ, ಸಂಸ್ಕೃತಿ, ಆಚಾರ, ಸಹನೆ, ತಾಳ್ಮೆ, ಪ್ರೀತಿ, ವಾತ್ಸಲ್ಯ, ಸತ್ಯ, ಅಹಿಂಸೆ, ಪರೋಪಕಾರ, ಸಾಮಾಜಿಕ ನಿಷ್ಠೆ, ಪ್ರಾಮಾಣಿಕತೆ, ಕರ್ತವ್ಯ, ಪ್ರೇಮ, ಸಕಲಜೀವಿಗಳಲ್ಲಿಯೂ ದಯೆ ಕರುಣೆ, ಗುರು-ಹಿರಿಯರಿಗೆ ಗೌರವ, ತಾಯಿ-ತಂದೆಯರ ಪೋಷಣೆ, ಇತರರ ಸಂಕಷ್ಟದಲ್ಲಿ ಸಹಾಯ ಮಾಡುವ ಗುಣ ಸ್ವಭಾವವನ್ನು ಹೃದಯಸ್ಪರ್ಶಿ, ಮನಮುಟ್ಟುವಂತೆ ಶಿಕ್ಷಕರು ಭೋಧಿಸಿ, ನೀತಿ ತತ್ವಗಳನ್ನು ಮನದಟ್ಟುಮಾಡಬೇಕು.

ಶಿಕ್ಷಕರು ದಿನದ ಕೊನೆ ಅವಧಿಯಲ್ಲಿ ಮಾನವೀಯ ಮೌಲ್ಯಗಳ ಸಾಕಾರಮೂರ್ತಿಗಳಾದ ಶರಣರು ಬುದ್ಧ, ಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ, ದಾಸಿಮಯ್ಯ, ಅಂಬೇಡ್ಕರ್, ವಿವೇಕಾನಂದ, ಮಹಾತ್ಮ ಗಾಂಧಿ, ಶಾಸ್ತ್ರಿ, ಅಬ್ದುಲ್ ಕಲಾಂ ಮೊದಲಾದ ಸನ್ಮಾರ್ಗಿಗಳ ಸಂಸ್ಕಾರವಂತರ ವಿಚಾರ, ತತ್ವ ಸಂದೇಶಗಳನ್ನು ತಿಳಿಸಿ ಸಂಸ್ಕಾರವಂತರನ್ನಾಗಿಸಬೇಕು. ವಿದ್ಯಾವಂತರ ಅಧರ್ಮ ಅನೀತಿ, ಅತ್ಯಾಚಾರ, ದುರಾಚಾರ, ಅವ್ಯವಹಾರಗಳಲ್ಲಿ ತೊಡಗಿ ದುಷ್ಟರಿಗಿಂತ ಬಹುಕ್ರೂರಿಗಳಾಗುತ್ತಿರುವುದು ವಿಶಾದಕರ ಸಂಗತಿ. ಪಾಶ್ಚಾತ್ಯ (ಪ್ರಸ್ತುತ) ಶಿಕ್ಷಣದಿಂದ ಜ್ಞಾನ-ವಿಜ್ಞಾನ, ಹಣ, ನಾಗರಿಕತೆಯ ಹಿಂದೆ ಯಾಂತ್ರಿಕನಾಗಿ, ಮಾವೀಯತೆಯನ್ನು ಮೆರೆಯುತ್ತಿದ್ದಾನೆ. ಅವನಿಗೆ ಜ್ಞಾನ ವಿಜ್ಞಾನಗಳ ಜೊತೆಗೆ ಶರಣರ ಸಂಸ್ಕಾರಗಳು ಸಿಗುವಂತೆ ಅವುಗಳನ್ನು ರೂಢಿಸಿಕೊಳ್ಳುವಂತೆ ತಿಳಿದವರು ಮನವರಿಕೆ ಮಾಡಿಕೊಡಬೇಕು. ತಪ್ಪಿದಲ್ಲಿ ಮಾನವ ತನ್ನ ವಿನಾಶವನ್ನು ತಾನೆ ತಂದುಕೊಳ್ಳುತ್ತಿದ್ದಾನೆ. ವೈಜ್ಞಾನಿಕ ಸೌಲಭ್ಯಗಳ ಜೊತೆಗೆ ಮಾನವೀಯತೆ, ನೈತಿಕತೆಯನ್ನು ನಿರ್ಲಕ್ಷಿಸದೆ ತಮ್ಮಲ್ಲಿ ಕಾರ್ಯಗತಗೊಳಿಸಿಕೊಳ್ಳುವುದು ಅತೀ ಮಹತ್ವದ ಸಂದೇಶವಾಗಿದೆ.

ಶರಣರ ಸರ್ವಕಾಲಿಕ, ಸಾರ್ವತ್ರಿಕ, ಮೌಲ್ಯಗಳನ್ನು ಸಂದೇಶಗಳನ್ನು ಪ್ರತಿಯೋರ್ವರು ಜಾತಿ, ಮತ, ಲಿಂಗ, ವರ್ಗ, ಸ್ಥಳ, ವರ್ಣಭೇದಗಳನ್ನು ಲೆಕ್ಕಿಸದೆ ಮಾನವೀಯ ಮತ್ತು ನೈತಿಕ ಹಿನ್ನಲೆಯಲ್ಲಿ ಶರಣರ ಸಂಸ್ಕಾರಗಳನ್ನು ರಾಗ ದ್ವೇಶಗಳಿಲ್ಲದೆ ಸ್ವೀಕರಿಸಿ ಅಳವಡಿಸಿಕೊಂಡಾಗ ಮಾತ್ರ ಜೀವನ ನಂದಾದೀಪವಾಗುತ್ತದೆ. ಮನಕುಲದ ಸರ್ವರು ಸುಂದರ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಶರಣರ ಆದರ್ಶಗಳನ್ನು ಶರಣು ಶರಣಾಳುಗಳು ಪಾಲಿಸಬೇಕಾಗಿದೆ. ಸಂಸ್ಕಾರ ಪ್ರಜ್ಞೆಯೊಂದಿಗೆ ಓ ನಮಃ ಶಿವಾಯ ಜಾಗೃತರಾಗಬೇಕು.

## ಮನವಿ

**ನೊಳಂಬ ಅರಸರ ರಾಜ್ಯಭಾರ, ನೊಳಂಬ ಸಮುದಾಯದ ಮಠಗಳು, ಸಾಹಿತ್ಯ, ಇತಿಹಾಸ, ಕೃಷಿ, ಭಾಷೆ, ಬದುಕು, ಸಂಸ್ಕೃತಿ, ಸಾಂಸ್ಕೃತಿಕ ಚಟುವಟಿಕೆ, ವಾಸ್ತು ಶಿಲ್ಪಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆ ಮಾಡಲು ನೊಳಂಬ ಲಿಂಗಾಯತ ಸಂಘದಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ಸ್ಥಾಪಿಸಿದ್ದು, ಅಧ್ಯಯನಕ್ಕಾಗಿ ಬರುವ ಅಭ್ಯರ್ಥಿ/ಸಂಶೋಧಕರುಗಳಿಗೆ ಸೌಲಭ್ಯ ಕಲ್ಪಿಸಲು ಹಣದ ಕೊರತೆ ತುಂಬಾ ಇರುವುದರಿಂದ ದಾನಿಗಳಾದ ತಾವು ವಂತಿಗೆ ನೀಡಲು ಬಯಸಿದ್ದಲ್ಲಿ ಈ ಕೆಳಕಂಡ ಬ್ಯಾಂಕಿಗೆ ಹಣವನ್ನು ವರ್ಗಾವಣೆ ಮಾಡಲು ಮನವಿ ಮಾಡುತ್ತೇನೆ.**

| | |
|---|---|
| ಹೆಸರು | : ನೊಳಂಬ ಲಿಂಗಾಯತ ಸಂಘ (ರಿ.) |
| ಬ್ಯಾಂಕ್ | : ಎಸ್.ಬಿ.ಐ. ಬಸವೇಶ್ವರನಗರ |
| ಖಾತೆ ಸಂಖ್ಯೆ | : 54033145493 |
| ಐ.ಎಫ್.ಎಸ್.ಸಿ. | : SBIN0040624 |

# ಬಸವಣ್ಣನಿಂದ ಬದುಕಿತೀ ಲೋಕವೆಲ್ಲ

ಸಮ ಸಮಾಜದ ನಿರ್ಮಾಣಕ್ಕಾಗಿ ಜಾತಿ ಧರ್ಮದಾಚೆಗೆ ಚಿಂತಿಸಿ ಎಲ್ಲರಿಗೂ ಸಮಬಾಳು, ಸಮಪಾಲು ಎಂದು ಪ್ರತಿಪಾದಿಸಿದ, ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ಅಚ್ಚ ಕನ್ನಡದಲ್ಲಿ ವಚನಗಳನ್ನು ರಚಿಸಿದ, ಮಹಿಳೆಯರಿಗೆ ಸ್ವಾತಂತ್ರ್ಯ ನೀಡಿದ, ಹೀನಕುಲದವರು ಎಂದು ಹೇಳುತ್ತಿದ್ದ ಜನರನ್ನು ಅಣ್ಣಾ, ಅಯ್ಯಾ ಎಂದು ಅಪ್ಪಿಕೊಂಡು ಅವರಲ್ಲಿ ಆತ್ಮವಿಶ್ವಾಸ ತುಂಬಿದ, ಸಂಪತ್ತಿನ ಸಮಾನ ಹಂಚುವಿಕೆಯ ಬಗ್ಗೆ ವಾದಿಸಿ ಒಬ್ಬ ಶ್ರೇಷ್ಠ ಅರ್ಥಶಾಸ್ತ್ರಜ್ಞನೆನಿಸಿಕೊಂಡ ಯಾರಾದರೂ ಈ ಜಗತ್ತಿನಲ್ಲಿ ಇದ್ದರೆ ಅದಕ್ಕೆ ಮೊದಲನೆಯ ಸ್ಥಾನ ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ಕನ್ನಡಿಗನಾಗಿ ಹುಟ್ಟಿ ಬೆಳೆದು ಸಮಾಜಕ್ಕೆ ಅದ್ಭುತವಾದ ಕೊಡುಗೆ ನೀಡಿದ ಬಸವಣ್ಣನೆಂದು ಹೇಳಬಹುದು.

ಐತಿಹಾಸಿಕ ಮಹಾಪುರುಷನಾದ ಬಸವಣ್ಣ ಶೈವ ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಬೆಳೆದವನು. ಅವರ ಮನೆಯಲ್ಲಿ ಶೈವದ ಭಕ್ತಿಯೂ ಇತ್ತು, ವೈಧಿಕದ ಕರ್ಮವೂ ಇತ್ತು. ಇವೆರಡು ಎಂದೂ ಒಂದಾಗುವುದಿಲ್ಲ ಎಂದು ಹರಿಹರ ಈ ರೀತಿ "ಶಿವಭಕ್ತಿಯುಂ ಕರ್ಮಮುಂ ಎಂದೂ ಒಂದಾಗಿರದು" ಎಂದು ಹೇಳುತ್ತಾನೆ. ಆದ್ದರಿಂದಲೇ ಬಸವಣ್ಣ ತನ್ನ ಮನೆಯಲ್ಲಿ ಇಂತಹ ದ್ವಂದ್ವಾಚರಣೆ ಇದ್ದುದರಿಂದ ಉಪನಯನವನ್ನು ತಿರಸ್ಕರಿಸಿ ಚಿಕ್ಕವಯಸ್ಸಿನಲ್ಲೇ ನಾಥ ಸಾಂಪ್ರದಾಯಿಕ ಕೇಂದ್ರವಾದ ಕೂಡಲ ಸಂಗಮಕ್ಕೆ ಹೋಗಿದ್ದು. ಈ ಸಂಪ್ರದಾಯದ ಆಚರಣೆಗಳು ಬಸವಣ್ಣನ ಮನಸ್ಥಿತಿಗೆ ಹೊಂದಿಕೆಯಾದರೂ ಅದರಲ್ಲಿ ಕೆಲ ದೋಷಗಳಿದ್ದವು. ಇದನ್ನು ಮನಗಂಡ ಬಸವಣ್ಣ ಅದನ್ನು ತಿದ್ದಿತೀಡುವ ಕೆಲಸಕ್ಕೆ ಕೈಹಾಕಿದನು.

ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಆ ವೇಳೆಗಾಗಲೇ ಬೌದ್ಧ, ಜೈನ, ಶೈವ, ವೈಧಿಕ ಧರ್ಮಗಳಿದ್ದವು. ಅವುಗಳಲ್ಲಿ ಬೌದ್ಧ ಮತ್ತು ಜೈನ ಧರ್ಮಗಳು ಶೈವ ಮತ್ತು ವೈಧಿಕ ಧರ್ಮಗಳ ಪ್ರಾಬಲ್ಯದಿಂದ ಮರೆಯಾಗ ತೊಡಗಿದವು. ಶೈವಧರ್ಮದ ಮೇಲೆ ವೈಧಿಕ ಧರ್ಮ ತನ್ನ ಶ್ರೇಷ್ಠತೆಯನ್ನು ಸಾಧಿಸಿತ್ತು. ಇಂದಿಗೂ ಕೂಡಾ ಭಾರತದಲ್ಲಿ ವೈಧಿಕ ಧರ್ಮವೇ ನಮ್ಮನ್ನಾಳುತ್ತಿದೆ. ಈ ಧರ್ಮಗಳು ಸಮಾಜದಲ್ಲಿ ಲಿಂಗಬೇಧ, ಮೇಲುಕೀಳು ಸೃಷ್ಟಿಸಿದ್ದವು. ಇವು ಇಡೀ ಸಮಾಜವನ್ನು ಶೋಷಿಸುತ್ತಿದ್ದವು. ಅಂದು ಕರ್ನಾಟಕದಲ್ಲಿದ್ದ ವೃತ್ತಿನಿರತ ಶೂದ್ರ ಜಾತಿಗಳು ಮೇಲುವರ್ಗದವರ ಹಿಡಿತಕ್ಕೆ ಸಿಕ್ಕಿ ಧರ್ಮದಿಂದ ವಂಚಿತವಾಗಿದ್ದವು. ಸಮಾಜದಲ್ಲಿ ಅವರು ಎಷ್ಟೇ ದುಡಿದರೂ, ತೆರಿಗೆ ನೀಡಿದರೂ ಅವರಿಗೆ ಸರಿಯಾದ ಸ್ಥಾನಮಾನವಿರಲಿಲ್ಲ. ಇವರೆಲ್ಲರೂ ಪುರೋಹಿತಶಾಹಿ ವರ್ಗದ ದಬ್ಬಾಳಿಕೆಯಿಂದ ನಲುಗಿದ್ದರು. ಕೋಪ ತಾಪಗಳಿದ್ದರೂ ಅವರು ಅದನ್ನು ತಮ್ಮ ಹೃದಯದಲ್ಲಿಟ್ಟು ಕೊಂಡಿದ್ದರು. ಅವರಿಗೆ ಇವುಗಳನ್ನು ಎದುರಿಸಿ ನಿಲ್ಲುವ ಧೈರ್ಯ ಇರಲಿಲ್ಲ. ಆದ್ದರಿಂದ ಅವರು ಒಬ್ಬ ನಾಯಕನಿಗಾಗಿ ಕಾಯುತ್ತಿದ್ದರು. ಇಂತಹ ಸನ್ನಿವೇಶವನ್ನು ಉಪಯೋಗಿಸಿ ಕೊಂಡು 12ನೇ ಶತಮಾನದಲ್ಲಿ ಅವರ ಪರವಾಗಿ ಹೋರಾಡಿದವನು ಬಸವಣ್ಣ.

ಬಸವಣ್ಣ ಮಾಡಿದ ಮೊದಲ ಕೆಲಸವೆಂದರೆ ಉತ್ತರ ಭಾರತದಿಂದ ಕರ್ನಾಟಕಕ್ಕೆ ಬಂದು ರಾಜಾಶ್ರಯ ಪಡೆದು ವೈಭವದಿಂದ ಮೆರೆಯುತ್ತಿದ್ದ ಧರ್ಮಗಳ ವಿರುದ್ಧ ಸೆಟೆದು ನಿಂತು ಧರ್ಮದಿಂದ ವಂಚಿತರಾಗಿ ಅಸಮಾನತೆಯ ಕೂಪದಲ್ಲಿದ್ದ ಶೂದ್ರ ವೃತ್ತಿಪರ ಜಾತಿಗಳನ್ನೆಲ್ಲ ಒಗ್ಗೂಡಿಸಿ ಅವರಿಗೆಲ್ಲ ಸಮಾನತೆಯ ಸಂಕೇತವಾದ. ಇಷ್ಟಲಿಂಗವನ್ನು ನೀಡಿ ಅವರನ್ನು ಲಿಂಗಧಾರಿಗಳನ್ನಾಗಿ ಮಾಡಿ ಲಿಂಗಾಯತ ಧರ್ಮ ಸ್ಥಾಪಿಸಿದನು. ಇದು ಕನ್ನಡಿಗನಾದ ಬಸವಣ್ಣನಿಂದ ಸ್ಥಾಪಿತವಾದ ಧರ್ಮ.

ಇವರನ್ನೆಲ್ಲಾ ಕೂಡಿಕೊಂಡು ಬಸವಣ್ಣ ಅನುಭವ ಮಂಟಪವನ್ನು ಕಟ್ಟಿ ಆ ಮೂಲಕ ಅಲ್ಲಿ ಪ್ರತಿಯೊಬ್ಬರಿಗೂ ಮಾತನಾಡುವ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟದ್ದು ಜಗತ್ತಿನ ಇತಿಹಾಸದಲ್ಲಿ ಐತಿಹಾಸಿಕ ಸಂಗತಿಯಾಗಿದೆ. ಪುರೋಹಿತ ಶಾಹಿಯ ವಿರುದ್ಧ ಸೆಟೆದುನಿಂತ ಬಸವಣ್ಣ ದೇಹವನ್ನೇ ದೇವಾಲಯವನ್ನಾಗಿ ಮಾಡಿ ಇಷ್ಟಲಿಂಗಧಾರಿಗಳನ್ನು ನಡೆದಾಡುವ ದೇವಾಲಯಗಳನ್ನಾಗಿಸಿದ. ಸತ್ಯ ಶುದ್ಧ ಕಾಯಕದ ಬಗ್ಗೆ ಪ್ರತಿಪಾದಿಸಿದ. ಈತ ಕಾಯಕವನ್ನೇ ಕೈಲಾಸ ಎಂದು ಕರೆದು ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂದು ಸಾರಿದ. ಮತ್ತೊಬ್ಬರನ್ನು



– ಡಾ. ಡಿ.ಎನ್.ಯೋಗೀಶ್ವರಪ್ಪ
ಸಂಶೋಧಕರು, ತುಮಕೂರು.
ಮೊ : 94486 80920

ಬೆಟ್ಟುಮಾಡಿ ತೋರಿಸುವುದನ್ನು ಬಿಟ್ಟು ನಿನ್ನನ್ನು ನೀನು ಮೊದಲು ತಿದ್ದಿಕೋ ಎಂದು ಹೇಳಿ ಸ್ವಸ್ಥ ಸಮಾಜದ ನಿರ್ಮಾಣದ ಪರಿಕಲ್ಪನೆಯನ್ನು ಮುಂದಿಟ್ಟ. ತಳಸಮುದಾಯ ದವರಲ್ಲಿ ಆತ್ಮವಿಶ್ವಾಸವನ್ನು ತುಂಬಲು ಸ್ವತಃ ತಾನೇ ಮಹಾಮಂತ್ರಿ ಆಗಿದ್ದರೂ ಅವರ ಮನೆಗಳಿಗೆ ತೆರಳುತ್ತಿದ್ದುದೇ ಅಲ್ಲದೆ ತಾನು "ಮಾದಾರ ಚನ್ನಯ್ಯನ ಮಗ ನಾನು" ಎಂದು ಹೇಳಿಕೊಂಡಿದ್ದಾನೆ.

ಹನ್ನೆರಡನೇ ಶತಮಾನದ ಬಹುದೊಡ್ಡ ಸಾಮಾಜಿಕ ಚಿಂತಕನಾದ ಬಸವಣ್ಣ ಇವನಾರವ ಎಂದೆನಿಸದೆ ಇವ ನಮ್ಮವ ಇವ ನಮ್ಮವ ಎನ್ನುತ್ತಾ ಸಮಾಜದ ಅಸಮಾನತೆ, ಅಂದಿನ ಸಮಾಜದಲ್ಲಿದ್ದ ಅನಿಷ್ಠ ಪದ್ಧತಿಗಳ ವಿರುದ್ಧ ವೃತ್ತಿನಿರತ ಜಾತಿಗಳನ್ನು ಸಂಘಟನೆ ಮಾಡಿ ಓಲೆಗರಿ ಮತ್ತು ಕಂಠವನ್ನಿಡಿದು ವಚನಗಳನ್ನು ರಚಿಸುವುದರ ಮೂಲಕ ಹೋರಾಟ ನಡೆಸಿದನು. ಇದರ ಫಲವಾಗಿ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ವಚನಗಳು ಬಸವಾದಿ ಶರಣರಿಂದ ರಚನೆಯಾದವು. ಜಾತಿಯ ಹಂಗಿಲ್ಲದೆ ಎಲ್ಲ ವರ್ಗದ ವಚನಕಾರರು ವಚನಗಳ ಮೂಲಕ ತಮ್ಮ ಅನುಭಾವಿಕ ಹೊಸ ಚಿಂತನೆಗಳನ್ನು ಕಟ್ಟಿಕೊಡುತ್ತಿದ್ದರು. ಈ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಬಸವಾದಿ ಶರಣರು ಮಾಡಿದರು.

ಇಂತಹ ಹೋರಾಟಗಾರ ಐತಿಹಾಸಿಕ ಮಹಾಪುರುಷ ಬಸವಣ್ಣನವರ ಬಗ್ಗೆ ಆತನ ಕಾಲಕ್ಕೆ ಹತ್ತಿರದಲ್ಲಿದ್ದ ಹರಿಹರನಿಂದ ಹಿಡಿದು ಇಲ್ಲಿಯವರೆಗೆ ಅಗಾಧವಾದ ಕೃತಿಗಳು ರಚನೆಯಾಗಿದ್ದರೂ ಅವರ ರಚಿಸಿದ ವಚನಗಳ ಸಂಗ್ರಹ ಇಪ್ಪತ್ತನೇ ಶತಮಾನದಲ್ಲಿ ಆರಂಭವಾಗಿದ್ದುದು ವಚನಗುಮ್ಮಟ ಎನಿಸಿಕೊಂಡ ಫ.ಗು.ಹಳಕಟ್ಟಿಯವರಿಂದ ಎಂಬುದನ್ನು ನೆನೆಯಬೇಕು.

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಇತಿಹಾಸದ ಐತಿಹಾಸಿಕ ಮಹಾಪುರುಷನಾದ ಬಸವಣ್ಣನವರ ಬಗ್ಗೆ ಜಾಗೃತಿಯನ್ನುಂಟುಮಾಡಿ ಬಸವಾನುಯಾಯಿಗಳನ್ನು ಒಟ್ಟುಗೂಡಿಸಲು 1913ರಲ್ಲಿ ಕರ್ನಾಟಕದ ಗಾಂಧಿ ಎಂದೇ ಪ್ರಸಿದ್ಧರಾದ ಹರ್ಡೇಕರ್ ಮಂಜಪ್ಪನವರು ದಾವಣಗೆರೆ ವಿರಕ್ತಮಠದಲ್ಲಿ ಚಿತ್ರದುರ್ಗ ಮುರುಘಾ ಮಠದ ಜಯದೇವ ಜಗದ್ಗುರುಗಳ ಸಮ್ಮತಿ ಪಡೆದುಕೊಂಡು ಮೊಟ್ಟಮೊದಲ ಬಾರಿಗೆ ಸಾರ್ವಜನಿಕವಾಗಿ ಬಸವಜಯಂತಿಯನ್ನು ಆಚರಿಸಲು ಪ್ರಾರಂಭಿಸುತ್ತಾರೆ. ಈ ಜಯಂತಿಯನ್ನು ಎಸ್.ಎಂ.ಕೃಷ್ಣರವರು ಸರ್ಕಾರದ ವತಿಯಿಂದ ಆಚರಿಸಲು ಆದೇಶ ಮಾಡುತ್ತಾರೆ. ಅನಂತರ ಪ್ರಸ್ತುತ ಮುಖ್ಯಮಂತ್ರಿಯಾಗಿರುವ ಸಿದ್ಧರಾಮಯ್ಯನವರು ಬಸವಣ್ಣನವರ ಅನುಯಾಯಿಗಳು. ಅವರು ಬಸವಣ್ಣನವರನ್ನು 2024ರಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿ ಗೌರವ ಸಲ್ಲಿಸಿದ್ದಾರೆ.

ಇಂತಹ ಸಮಗ್ರ ವ್ಯಕ್ತಿತ್ವದ ಬಸವಣ್ಣನವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಇಂದು ನಿನ್ನೆಯದಲ್ಲ ಹನ್ನೆರಡನೇ ಶತಮಾನದಲ್ಲೇ ಆತನನ್ನು ಕಲ್ಯಾಣ ಬಿಟ್ಟು ಹೋಗುವಂತೆ ಮಾಡಿದರು. ಅಂದಿನಿಂದ ಇಲ್ಲಿಯವರೆಗೂ ಸಮಷ್ಠಿ ಪ್ರಜ್ಞೆಯೆಂದೇ ಹೇಳುವ ಬಸವಣ್ಣನವರನ್ನು ಕ್ರಿ.ಶ. 1650ರಲ್ಲಿ ಧರಣಿ ಪಂಡಿತ ಎಂಬ ಕವಿ ತನ್ನ ಬಿಜ್ಜಳರಾಯ ಚರಿತೆ ಎಂಬ ಕೃತಿಯಲ್ಲಿ ಬಿಜ್ಜಳನ ಭಂಡಾರವನ್ನು ದುರುಪಯೋಗ ಮಾಡಿಕೊಂಡ ಸ್ವಾಮಿದ್ರೋಹಿ ಎಂದು ಕರೆದಿದ್ದಾನೆ. ಅಲ್ಲಿಂದ ಆರಂಭವಾದ ಬಸವಣ್ಣನವರ ಮೇಲಿನ ಧಾಳಿಗಳು ಇಂದಿಗೂ ಮುಂದುವರಿದಿವೆ. 20ನೇ ಶತಮಾನದ ಮಧ್ಯಭಾಗದಲ್ಲಿ ಕಪಟರಾಳ ಕೃಷ್ಣರಾಯರು ಬಸವಣ್ಣ ಸ್ಥಾಪಿಸಿದ ಅನುಭವಮಂಟಪವೇ ಇರಲಿಲ್ಲ ಎಂದು ಹೇಳಿದ್ದರೂ ಬಸವಾನುಯಾಯಿಗಳು ಮೌನವಾಗಿದ್ದರೂ ಕ್ರೈಸ್ತ ಧರ್ಮೀಯರಾದ ಉತ್ತಂಗಿ ಚನ್ನಪ್ಪನವರು ಅನುಭವ ಮಂಟಪದ ಬಗ್ಗೆ ಸಂಶೋಧನೆ ನಡೆಸಿ ತಕ್ಕ ಉತ್ತರ ಕೊಟ್ಟಿದ್ದರು. ನಂತರ ಕಟ್ಟಾ ಬಸವಾನುಯಾಯಿಯಾದ ಮಾತೆ ಮಹಾದೇವಿಯವರು ತಮ್ಮ "ವಚನದೀಪ್ತಿ" ಕೃತಿಯಲ್ಲಿ ಬಸವಣ್ಣ ಮತ್ತು ಅಕ್ಕಮಹಾದೇವಿಯವರ ವಚನಾಂಕಿತವನ್ನು ಬದಲಾಯಿಸುವುದರ ಮೂಲಕ ಸಮಾಜದ ಕೆಂಗಣ್ಣಿಗೆ ಗುರಿಯಾದರು. ಪಿ.ವಿ.ನಾರಾಯಣ ಅವರ ಧರ್ಮಕಾರಣ (1995) ಕಾದಂಬರಿಯಲ್ಲಿ ಬಸವಣ್ಣ ಮತ್ತು ಅಕ್ಕನಾಗಮ್ಮ ಮತ್ತಿತರ ಪಾತ್ರಗಳಿಗೆ ಅವಮಾನ ಮಾಡಲಾಗಿತ್ತು. ಹೆಚ್.ಎಸ್.ಶಿವಪ್ರಕಾಶ್‌ರವರು ತಮ್ಮ ಮಹಾಚೈತ್ರ ಎಂಬ ನಾಟಕವು ಗುಲ್ಬರ್ಗ ವಿ.ವಿ. ವಿದ್ಯಾರ್ಥಿಗಳಿಗೆ ಪಠ್ಯಕ್ರಮ ವಾದಾಗ ಅದರಲ್ಲಿ ಬಸವಣ್ಣನವರ ಬಗ್ಗೆ ರೂಢಿಗತವಾದ ನಂಬಿಕೆಗಳನ್ನು ನೋಯಿಸುವಂತೆ ಚಿತ್ರಿಸಲಾಗಿತ್ತು. ಧರ್ಮಕಾರಣ ನಿಷೇಧಕ್ಕೆ ಒಳಗಾದರೆ ಮಹಾಚೈತ್ರ ಕೃತಿಯನ್ನು ಗುಲ್ಬರ್ಗ ವಿ.ವಿ. ವಾಪಸ್ ಪಡೆಯಿತು. 2007ರಲ್ಲಿ ಬಂಜಗೆರೆ ಜಯಪ್ರಕಾಶ್‌ರವರ "ಆನುದೇವ ಹೊರಗಣವನು" ಎಂಬ ಕೃತಿಯಲ್ಲಿ ಬಸವಣ್ಣನವರ ಜಾತಿ ಮೂಲವನ್ನು ಕೆದಕಿ ಬರೆದಿದ್ದರಿಂದ ಬಸವಾನುಯಾಯಿಗಳು ಸಿಟ್ಟಿಗೆದ್ದಿದ್ದರು. ಬಂಜಗೆರೆಯವರು ಆ ಕೃತಿಯನ್ನು ವಾಪಸ್ ಪಡೆದುಕೊಂಡರು.

ಇತ್ತೀಚಿಗೆ ಪ್ರಕಟವಾದ ವಚನ ದರ್ಶನ ಎಂಬ ಕೃತಿಯಲ್ಲಿ ಬಸವಣ್ಣನ ನೇತೃತ್ವದಲ್ಲಿ 12ನೇ ಶತಮಾನದಲ್ಲಿ ಯಾವುದೇ ಸಮಾಜೋ-ಧಾರ್ಮಿಕ ಚಳವಳಿ ನಡೆದಿಲ್ಲ. ಅದೊಂದು ಕೇವಲ ಭಕ್ತಿಯ ಚಳವಳಿ. ವಚನಗಳು ಕೇವಲ ಭಕ್ತಿಯ ಅಭಿವ್ಯಕ್ತಿ ಎಂದು ಬಿಂಬಿಸುವ ಪ್ರಯತ್ನ ಮಾಡಲಾಗಿದೆ. ಈ ಕೃತಿಯನ್ನು ನಾಡಿನಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಬಿಡುಗಡೆ ಮಾಡುತ್ತಾ ಇರುವುದು ಏನನ್ನು ಸೂಚಿಸುತ್ತದೆ. ಇದೇ ಅಲ್ಲದೆ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಾದ ಬಾಲಗಂಗಾಧರ್ ಝಳಕಿ, ರಾಜಾರಾಂ ಹೆಗ್ಗಡೆ ಇವರೆಲ್ಲ ಬಸವಣ್ಣ ಭಕ್ತಿಪಂಥದ ನಾಯಕ ಎಂದು ಹೇಳುತ್ತಾ ಅವರ ವರ್ಚಸ್ಸಿಗೆ ಕುಂದುತರುವ ಪ್ರಯತ್ನ ನಡೆಸಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಂಕರಾನಂದ ಅವರು ವಚನಗಳನ್ನು ದೈವಾಂಶಸಂಭೂತರು ಬರೆದಿದ್ದಾರೆ ಎಂದರೆ, ಮುಕುಂದ್ ಎಂಬುವರು ಲಿಂಗಾಯತ ಶೈವ ಪಂಥದ ಒಂದು ಭಾಗ ಎಂದು ಕರೆದಿದ್ದಾರೆ. ಅನುಭವ ಮಂಟಪದ ಬಗ್ಗೆ ಮಾತನಾಡಿರುವ ವೀಣಾ ಬನ್ನಂಜೆಯವರು ಅನುಭವಮಂಟಪ ಎಂಬುದು ಮಿಥ್ಯ ಎಂದು ಹೇಳುವ ಮೂಲಕ ಬಸವಾದಿ ಶರಣರ, ಅನುಯಾಯಿಗಳ ನಂಬಿಕೆಗೆ ಧಕ್ಕೆ ತಂದಿದ್ದಾರೆ.

ಹೀಗೆ ಹದಿನೇಳನೇ ಶತಮಾನದಿಂದಲೂ ಮತ್ತೆ ಮತ್ತೆ ಬಸವ ವಿರೋಧ, ವಚನಶಾಸ್ತ್ರ ವಿರೋಧದಂತಹ ಕೆಲವು ಜನರ ನಿಲುವುಗಳು ಬಸವಣ್ಣನವರ ವ್ಯಕ್ತಿತ್ವವನ್ನು ಕುಂದಿಸಲು ಪ್ರಯತ್ನಿಸುತ್ತಿದೆ. ಆದರೆ ಬಸವಣ್ಣನ ವ್ಯಕ್ತಿತ್ವ ಇದರಿಂದ ಉಜ್ವಲವಾಗಿದೆಯೇ ಹೊರತು ಕಳೆಗುಂದಿಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ಲಂಡನ್ನಿನ ಥೇಮ್ಸ್ ನದಿಯ ತಟದಲ್ಲಿ ಬಸವಣ್ಣನ ಮೂರ್ತಿಯ ಪ್ರತಿಷ್ಠಾಪನೆ, ಭಾರತದ ಸಂಸತ್ತಿನೊಳಗಡೆ ವಚನಗಳ ಪ್ರದರ್ಶನ, ಪ್ರಧಾನಿಯವರು ಸಂಸತ್ತನ್ನು ಅನುಭವಮಂಟಪ ಎಂದು ಘೋಷಿಸಿದ್ದು, ಇದೇ ಅಲ್ಲದೆ ಈ ವರ್ಷ ಏಪ್ರಿಲ್ 30ರಂದು ದೆಹಲಿಯ ಪಾರ್ಲಿಮೆಂಟ್ ಎದುರು ಬಸವಜಯಂತಿ ಆಚರಣೆ, ಬಸವ ಸಮಿತಿಯಿಂದ ಪ್ರಪಂಚದ 45 ಭಾಷೆಗಳಿಗೆ ವಚನಗಳ ಅನುವಾದ, ಈ ಎಲ್ಲ ಕ್ರಿಯೆಗಳು ಬಸವಣ್ಣನವರನ್ನು ಜಗತ್ತಿಗೆ ಪರಿಚಯಿಸುವಂತಹವುಗಳು. ಇದರಿಂದ ಹನ್ನೆರಡನೇ ಶತಮಾನದ ಬಸವಣ್ಣ 21ನೇ ಶತಮಾನದಲ್ಲಿ ಜಾಗತಿಕ ಮಹಾಪುರುಷನಾಗಿ ರೂಪುಗೊಂಡಿರುವುದು ಸ್ಪಷ್ಟ. ಇಂದು ಇಂತಹ ವಾತಾವರಣದಲ್ಲಿ ಬಸವಜಯಂತಿಯನ್ನು ಆಚರಿಸಿ ಅವರಿಗೆ ಪ್ರತಿಯೊಬ್ಬರೂ ಶರಣು ಶರಣಾರ್ಥಿ ಎಂದು ಹೇಳಬೇಕಾಗಿದೆ.

## ಕಾಯಕದ ಪ್ರಸ್ತುತತೆ

ಶರಣರು ನಿರ್ದೇಶಿಸಿದ ಕಾಯಕತತ್ವ ಸಿದ್ಧಾಂತವು ಆಧುನಿಕ ವಿಚಾರವಾದಿಗಳಾದ ರಸ್ಕಿನ್, ಟಾಲ್ಸ್ಟಾಯ್, ಮಾರ್ಕ್ಸ್, ಗಾಂಧೀಜಿಯವರ ಕಾಯಕ ತತ್ವ ವಿಚಾರಗಳಿಗಿಂತ ಮಿಗಿಲಾದುದಾಗಿದೆ. ಶರಣರ ಕಾಯಕತತ್ವದಿಂದ ಹಿಂದಿನ ಶೋಷಣೆಯ ಸಮಾಜ ಬದಲಾಗಿ ಸಮಾನತೆಯ ಸಮಾಜ ನಿರ್ಮಾಣಗೊಂಡಿತು. ಶರಣರ ಕಾಯಕತತ್ವದ ವಿಶೇಷವೇನೆಂದರೆ ಕಾಯಕದ ಜೊತೆಗೆ ಇದು ದಾಸೋಹ ವನ್ನೂ ಪ್ರತಿಪಾದಿಸಿತು. ವ್ಯಕ್ತಿ ಶಾರೀರಿಕ ಶ್ರಮದಿಂದ ಗಳಿಸಿದ ಹಣ ತನ್ನ ಹಾಗೂ ತನ್ನ ಕುಟುಂಬದವರಿಗಾಗಿ ಸೀಮಿತವಾಗಿರದೆ, ಸಾರ್ವಜನಿಕರಿಗಾಗಿಯೂ ಮೀಸಲಾಗಿರಬೇಕು ಎನ್ನುವುದು ಇವರ ಉದಾತ್ತವಾದ ವಿಚಾರವಾಗಿದೆ. ದಾಸೋಹ ತತ್ವ ದಿಂದಾಗಿ ದುಡಿಯುವ ವರ್ಗ, ದುಡಿಸಿಕೊಳ್ಳುವ ವರ್ಗ ಕೂಡ ಇಲ್ಲದಂತಾಗಿದೆ. ಇಂದಿನ ಕಾಲದಲ್ಲಿ ದುಡಿಯುವ ವರ್ಗ ತನ್ನ ಪರಿಶ್ರಮದಿಂದ ಬಂದ ಹಣ ಸಾಕಷ್ಟಿಲ್ಲವೆಂದು ಗೊಣಗಿದರೆ, ದುಡಿಸಿಕೊಳ್ಳುವ ವರ್ಗ ದುಡಿಯುವವರ ಬೆವರಿನಿಂದ ಹೆಚ್ಚು ಹೆಚ್ಚು ಶ್ರೀಮಂತವಾಗಲು ಬಯಸುತ್ತದೆ. ಆದರೆ ಶರಣರು ಸೃಷ್ಟಿಸಿದ ಆದರ್ಶ ಸಮಾಜದಲ್ಲಿ ದುಡಿಸಿಕೊಳ್ಳುವವರೇ ಇರಲಿಲ್ಲ. ಎಲ್ಲರೂ ದುಡಿಯುವವರೇ. ದುಡಿಸಿಕೊಳ್ಳುವವರು ಇದ್ದರೂ ಅವರು ದಾಸೋಹಕ್ಕಾಗಿ ಧನ ವಿನಿಯೋಗಿಸುತ್ತಿದ್ದರು. ದುಡಿದವರೂ ದಾಸೋಹಕ್ಕಾಗಿ ಹಣ ವೆಚ್ಚ ಮಾಡುತ್ತಿದ್ದರು. ದಾಸೋಹ ಪದ್ಧತಿಯಿಂದಾಗಿ ಅಂದಿನ ಸಮಾಜದಲ್ಲಿ ವರ್ಗಸಂಘರ್ಷವೇ ಇರಲಿಲ್ಲ. ಬಂದ ಹಣವನ್ನೆಲ್ಲಾ ಅಂದಂದಿನ ದಾಸೋಹಕ್ಕಾಗಿ ಬಳಸುತ್ತಾ ಬಂದದ್ದರಿಂದ ಬಡವ ಶ್ರೀಮಂತರೆಂಬ ಭೇದವೂ ಶರಣರು ಕಟ್ಟಿದ ಸಮಾಜದಲ್ಲಿರಲಿಲ್ಲ. ಆರ್ಥಿಕ ಅಸಮಾನತೆಯೆನ್ನುವ ಪ್ರಶ್ನೆ ಅಂದು ಉದ್ಭವಿಸಿರಲಿಲ್ಲ.

ಹೀಗೆ ಶರಣರು ಕಟ್ಟಿದ ಅಂದಿನ ಆದರ್ಶ ಸಮಾಜ ಸಮಾನತೆಯ ಸಮಾಜ. ಅಲ್ಲಿ ಆರ್ಥಿಕ ಸಾಮಾಜಿಕ ಅಸಮಾನತೆಗಳಿಗೆ ಅವಕಾಶವೇ ಇರಲಿಲ್ಲ. ಜಾತಿ-ಮತ-ಪಂಥ, ಹಿರಿಯ-ಕಿರಿಯ, ಸ್ತ್ರೀ-ಪುರುಷ, ಮೇಲ್ವರ್ಗ-ಕೆಳವರ್ಗ, ಸುಶಿಕ್ಷಿತರು-ಅಶಿಕ್ಷಿ ತರು, ಸಂಸ್ಕೃತ ಬಲ್ಲವರು-ಸಂಸ್ಕೃತ ತಿಳಿಯದವರು ಎನ್ನುವ ಭೇದವೇ ಇರಲಿಲ್ಲ. ಇಂಥ ಆದರ್ಶ ಸಮಾಜವನ್ನು ಕಟ್ಟಲು ಬಸವಣ್ಣನವರಿಗೆ ಬೆನ್ನೆಲುಬಾಗಿ ನಿಂತವರು ಅಂದಿನ ಅಸಂಖ್ಯಾತ ಶರಣರು.

**– ಎಂ.ಟಿ.ವಿಶ್ವನಾಥಯ್ಯ**

**ಮುಂದುವರೆಯುವುದು......**

# ದಯೆ ಎಂಬುದು ಮನುಷ್ಯನ ಹೃದಯದಲ್ಲಿ ಹುಟ್ಟುವಂಥದ್ದು

**ಒಬ್ಬರ ಮನವ ನೋಯಿಸಿ ಒಬ್ಬರ ಮನವ ಘಾತಕವ ಮಾಡಿ ಗಂಗೆಯ ಮುಳುಗಿದಡೇನಾಗುವುದಯ್ಯಾ ಒಬ್ಬರ ಮನವ ನೋಯಿಸದವನೇ ಒಬ್ಬರ ಘಾತಕವ ಮಾಡದವನೇ ಪರಮ ಪಾವನ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ**

ಯಾವುದೇ ಒಂದು ಕಾಲದ ರೀತಿ ನೀತಿ ರೂಢಿ ಸಂಪ್ರದಾಯ ಆಚರಣೆ ಪದ್ಧತಿಗಳು ಮಗದೊಂದು ಕಾಲದಲ್ಲಿ ಪರಿವರ್ತನೆ ಆಗಿರುವುದನ್ನು ಇತಿಹಾಸದಿಂದ ಅರಿಯುತ್ತೇವೆ. ಅಂದಮೇಲೆ ಯಾವುದೇ ಒಂದು ಕಾಲದ ಜೀವನ ಮೌಲ್ಯಗಳು ನಿತ್ಯ ಪರಿವರ್ತನಾಶೀಲವಾದವು. ಒಂದು ಯುಗದ ಜೀವನ ಮೌಲ್ಯಗಳ ಕುರಿತು ನಿರ್ಧಾರದ ಇತಿಮಿತಿಯನ್ನು ಎಂದಿಗೂ ಹೇರಲಾಗದು. ಆದರೂ ಲೋಕಕಲ್ಯಾಣಕ್ಕಾಗಿ ಪಾರಂಪರಿಕವಾಗಿ ಯುಗಯುಗಗಳಿಂದ ಬಂದಿರುವ ಆಯಾ ಕಾಲಘಟ್ಟದಲ್ಲಿ ಕೆಲವು ಮಹಾನ್ ವ್ಯಕ್ತಿಗಳನ್ನು ಅಂತೆಯೇ ಮಹಾನ್ ಸಮೂಹವನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಉತ್ತಮ ಸಮಾಜ ನಿರ್ಮಾಣಕ್ಕಾಗಿ 12ನೇ ಶತಮಾನದ ಇಡೀ ಶರಣ ಸಮೂಹವೇ ತಮ್ಮದೇ ಆದ ಬದ್ಧತೆಯುಳ್ಳ ನವ ಸಮಾಜ ನಿರ್ಮಾಣದ ರೂಪರೇಷೆಯನ್ನ ಜಾರಿಗೆ ತಂದರು. ವ್ಯಷ್ಟಿ ಹಿತದೊಂದಿಗೆ ಸಮಷ್ಟಿ ಹಿತವನ್ನು ಬಯಸುವ ಉತ್ತಮ ವಾತಾವರಣವನ್ನು 12ನೇ ಶತಮಾನದಲ್ಲಿ ಕಾಣುತ್ತೇವೆ. ಹೊರಗಿನ ಶುದ್ಧಿಗಿಂತ ಒಳಗಿನ ಶುದ್ಧಿಗೆ ಆದ್ಯತೆ ನೀಡಿದ ಯುಗವಿದು. ಈ ಶತಮಾನದ ಶರಣರ ವಚನಗಳನ್ನು ಕುರಿತು ದ.ರಾ. ಬೇಂದ್ರೆಯವರು 'ಬೆಳಕಿಗಿಂತ ಬೆಳ್ಳಗೆ, ಗಾಳಿಗಿಂತ ತೆಳ್ಳಗೆ' ಎನ್ನುತ್ತಾರೆ. ವಚನಕಾರರು ತಮ್ಮ ಬದುಕಿನ ಅನುಭವಗಳನ್ನೇ ಅನುಭಾವಿಕ ನೆಲೆಯಲ್ಲಿ ನಿಂತು ವಚನಗಳನ್ನು ರಚಿಸಿದಂತಹ ಅನುಭಾವಿಗಳು.

ಈ ಶತಮಾನದ ಹಲವಾರು ಅನುಭಾವಿಗಳಲ್ಲಿ ಶಿವಯೋಗಿ ಕರ್ಮಯೋಗಿ ಸಿದ್ಧಿಪುರುಷ ಸಿದ್ಧರಾಮರು ಧ್ರುವತಾರೆಯಂತೆ ಮಿನುಗುತ್ತಾರೆ. ಈ ಲೋಕ ಇರುವ ತನಕ ಅವರ ಸುಜ್ಞಾನದ ಹೊಳಪು ಲೋಕ ಸಂದೇಶಗಳು ಮಿನುಗುತ್ತಲೇ ಇರುತ್ತವೆ. ಏಕೆಂದರೆ ವಚನಕಾರ ಸಿದ್ಧರಾಮರು ದಯಾ ಪೂರ್ಣರು. ಜನಪರ ಕಾಳಜಿ ಉಳ್ಳವರು. ಲೋಕೋಪಕಾರಿ. ಸಮಾಜ ಪ್ರೇಮಿಯಾದಂತೆ ಧರ್ಮ ಗುರು ಹೌದು. ಸ್ವಾರ್ಥ ತ್ಯಾಗದಿಂದ ಲೋಕ ಕಲ್ಯಾಣ ಬಯಸಿದವರು ತತ್ವಜ್ಞಾನಿ. ನ್ಯಾಯಮೂರ್ತಿ. ಸತ್ಯನಿಷ್ಠರಾದ ಸಿದ್ಧರಾಮರ ಸಾಂಸ್ಕೃತಿಕ ಚಿಂತನಗಳು ಇಂದಿನ ಜಾಗತೀಕರಣಕ್ಕೆ ನಿಲುಕುವಂಥವು.



**ಸುಶೀಲ ಸೋಮಶೇಖರ್**
ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು
ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084

ಮೇಲಿನ ಅವರ ಈ ವಚನವು ಸಿದ್ಧರಾಮರ ಅನುಭಾವಕ್ಕೆ ಹಿಡಿದ ಕನ್ನಡಿ. ಸಿದ್ಧರಾಮರು ನುಡಿದಂತೆ ನಡೆದವರು. ಅವರ ಜೀವನದ ಅಂತಕರಣದಿಂದ ಬಂದ ಮಾತುಗಳು ಇಲ್ಲಿ ಫಲಕಾರಿಯಾಗಿದೆ. ದಯೆ ಎಂದರೆ ಸಮಾಜವು ಒಟ್ಟುಗೂಡಿಸಿ ಕಟ್ಟಿದ ಒಂದು ಬಂಗಾರದ ಸರಪಳಿ ಎನ್ನುತ್ತಾರೆ. ಮನುಷ್ಯನಲ್ಲಿರುವ ಅನೇಕ ಜೀವನ ಮೌಲ್ಯಗಳಲ್ಲಿ ದಯಾಭಾವವು ಒಂದು. ಮಾನವತೆ ಇದ್ದಲ್ಲಿ ದಯೆ ಹುಟ್ಟುತ್ತದೆ. ಮಾನವತೆಯು ಮನುಕುಲದ ಮೂಲ ಸ್ವಭಾವ. ಈ ಮೂಲ ಸ್ವಭಾವದಲ್ಲಿ ಜೀವಪರ ದನಿ ಇರುತ್ತದೆ.ದಯೇ ಕರುಣೆ ಎಂಬುದು ಮನುಷ್ಯನ ಹೃದಯದಲ್ಲಿ ಹುಟ್ಟಿ ಬರಬೇಕು.

ಯಾರೊಬ್ಬರಿಗೆ ಆಗಲಿ ಅವರ ಮನಸ್ಸನ್ನು ಆಘಾತ ಗೊಳಿಸದೆ ಯಾವ ಕೇಡನ್ನು ಉಂಟುಮಾಡದೆ ತಾನು ಬದುಕಿ ಅನ್ಯರನ್ನು ಬದುಕಲು ಬಿಡಬೇಕು ಈ ರೀತಿಯ ಉತ್ತಮ ಬದುಕು, ಪರಕ್ಕೆ ಸಾಧನವಾಗುತ್ತದೆ. ಸಕಲ ಜೀವಿಗಳಿಗೆ ನೋವುಂಟು ಮಾಡದಂತೆ ಬದುಕುವುದೇ ತುಂಬಾ ಪವಿತ್ರವಾದ ಬದುಕು. ದಯಾಪರರಾದ ಸಿದ್ಧರಾಮರು ಶ್ರೇಷ್ಠ ಕಾಯಕ ಜೀವಿಯಾಗಿ ನೂರಾರು ಕೆರೆಕಟ್ಟೆಗಳನ್ನು ನಿರ್ಮಿಸಿ, ಕೃಷಿಕ ಬದುಕಿಗೆ ಪಶು ಪಕ್ಷಿ ಪ್ರಾಣಿಗಳಿಗೆ ಜೀವ ಜಲಧಾರೆಯಾದ ಜಲತಜ್ಞರಾಗಿದ್ದಾರೆ. ಸಕಲರಲ್ಲಿ ದಯೆ ತೋರುವುದೇ ಅವರ ಅನನ್ಯ ತತ್ವವಾಗಿತ್ತು. 'ಕೆರೆಗಳಲ್ಲಿ ತೀರ್ಥ ಮನದಲ್ಲಿ ಸರ್ವಜೀವ ದಯಾಪರತ್ವ ಮೈದೆಗೆದಡೆ ನಿಮ್ಮ ಪಾದ ಸಾಕ್ಷಿ ನನ್ನ ಮನಸಾಕ್ಷಿ' ಎಂದು ನುಡಿದ ದಯಾಪರರು. ಕರುಣೆ ದಯೆ ಎಂಬುದು ಕೇವಲ ಮನಕುಲಕ್ಕೆ ಮಾತ್ರ ಸೀಮಿತವಲ್ಲ. ಸಕಲ ಜೀವಿಗಳಿಗೂ ಅದು ದೊರೆಯಬೇಕು ಎನ್ನುತ್ತಾರೆ ಸಿದ್ಧರಾಮರು. ಶಿವಯೋಗಿ ಸಿದ್ಧರಾಮರು ಇಡೀ ವಿಶ್ವಕ್ಕೆ ಅನ್ವಯಿಸುವ ದಯೆ ಪ್ರೀತಿ ಕರುಣೆಯನ್ನು ಪ್ರತಿಪಾದಿಸಿರುವ

ಕರುಣಾಕರ. ಹಾಗಾಗಿಯೇ ನಿರಾಶ್ರಿತರಿಗೆ ಛತ್ರಗಳನ್ನ ಕಟ್ಟಿಸಿದರು ಭಕ್ತ ಸಮೂಹಕ್ಕೆ ಅನುಕೂಲವಾಗುವಂತೆ ದೇವಾಲಯಗಳನ್ನು ನಿರ್ಮಿಸಿದರು. ದಯೆ ಎಂಬುದು ಹೃದಯದ ಅಂತರಾಳದಿಂದ ಹುಟ್ಟಿ ಬರಬೇಕು. ಅಲ್ಲಿ ಸದ್ಗುಣ ನೆಲೆಗೊಳ್ಳುತ್ತದೆ. ದಯಾವಂತರು ನ್ಯಾಯಪರರಾಗಿರುತ್ತಾರೆ. ಅನ್ಯರನ್ನು ಅಯ್ಯೋ ಎನಿಸಿ ಗಂಗೆಯಲ್ಲಿ ಮುಳುಗಿದರಾಯಿತೇ? ಗಂಗೆಯನ್ನು ಮುಳುಗುವ ಉದ್ದೇಶ ಪಾಪನಾಶವಾಗಿ ಪುಣ್ಯದ ಫಲ ದೊರೆಯಲೆಂದು. ಪಾಪದ ಫಲವನ್ನು ಹೊತ್ತು ತಾನು ನೊಂದು ಬೆಂದು ಅನ್ಯರನ್ನು ನೋಯಿಸಿ ಬಾಹ್ಯವಾಗಿ ದೇಹ ಶುದ್ಧಿ ಮಾಡಿಕೊಂಡರೆ ಆಯಿತೇ?. ಮಾನಸಿಕ ಸ್ವಸ್ಥತೆ ಇರಬೇಕು. ವಿವೇಕವಿದ್ದಲ್ಲಿ ಅಂತರಂಗ ಶುದ್ಧಿ ಇರುತ್ತದೆ ಎಂಬುದು ಸಿದ್ಧರಾಮರ ನಿಲುವು. ಅಂತರಂಗ ಶುದ್ಧಿಗೆ ದಯಾಭಾವವೇ ಮೂಲ ತಳಹದಿ. ಚಿತ್ತ ಶುದ್ಧಿಯಿಂದ ಶಿವ ಸನ್ನಿಧಿಯಲ್ಲಿ ಪರಮ ಪಾವನರು ಎನಿಸುತ್ತಾರೆ ಎಂಬ ಲೋಕ ಸಂದೇಶವನ್ನು ತಿಳಿಸಿದ್ದಾರೆ.

ಆದರೆ ಪ್ರಸ್ತುತ ದಿನಗಳಲ್ಲಿ ಬದುಕಿನ ಸ್ಥಿತ್ಯಂತರ ಗಳನ್ನು ನೋಡಿದಾಗ ಆಘಾತವೆನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ದಯೆ ಎಂಬುದು ಕ್ರಮೇಣ ಕ್ಷೀಣಿಸುತ್ತಿರುವುದನ್ನು ಹಲವು ಘಟನೆಗಳಿಂದ ತಿಳಿಯಬಹುದು. ಪ್ರಸ್ತುತ ಸನ್ನಿವೇಶದ ಹಲವಾರು ಪ್ರಕರಣಗಳನ್ನು ನೋಡಿದಾಗ ಕೇಳಿದಾಗ ಶರಣರ ನುಡಿಗಳು ಕೇವಲ ವೇದಿಕೆಯ ಬಂಡವಾಳ ವಾಗುತ್ತಿದೆಯೇ ಎಂಬ ಭಾವವು ಮೂಡುತ್ತದೆ. ಮಾಧ್ಯಮಗಳ ಮೂಲಕ ತಿಳಿದು ಬರುವ ಕೆಲವು ಅನಾಹುತದ ಭಯಾನಕ ಪ್ರಸಂಗಗಳು ಎಂತಹವರ ಎದೆಯನ್ನು ನಡುಗಿಸುತ್ತವೆ. ಕೆಲವರು ನಿರ್ಧಯಿಗಳಾಗಿ ಇತರರ ಜೀವ ಹಾನಿ ಮಾಡುವುದನ್ನು ನೋಡಿದಾಗ ಅಂಥವರ ಮನಸ್ಸುಗಳಿಗೆ ಏನಾಗಿದೆ ಎಂಬ ಪ್ರಶ್ನೆ ಮೂಡುತ್ತದೆ. ಕಾಶ್ಮೀರದ ಸೌಂದರ್ಯೋಪಾಸನೆಯಲ್ಲಿದ್ದ ಅಮಾಯಕರನ್ನು ಮಡದಿ ಮಕ್ಕಳೆದುರೇ ಕೊಂದ ಪಾಪಾತ್ಮರಿಗೆ ದಯೆ ಎಂಬುದೇ ಇರಲಿಲ್ಲವಾ......? 2025ರ ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್ನಲ್ಲಿ ಏನೊಂದು ತಪ್ಪು ಮಾಡದ ಅಮಾಯಕರನ್ನು ಪ್ಯಾಂಟ್ ಬಿಚ್ಚಿಸಿ ಮುಂಜಿ ಆಗಿದೆಯಾ ಎಂಬುದನ್ನು ನೋಡಿ ಕಲ್ಮ ಓದಲು ಹೇಳುತ್ತಾ ಮಡದಿ ಮಕ್ಕಳೆದುರೇ ಅವರನ್ನು ಕೊಂದುಬಿಟ್ಟರಲ್ಲ! ಮದುವೆಯಾಗಿ ಕೇವಲ ಒಂದು ವಾರ ಅಷ್ಟೇ ಕಳೆದು ಮಧುಚಂದ್ರಕ್ಕೆಂದು ಬಂದಿದ್ದ ಹರಿಯಾಣದ ನವವಧು ಹಿಮಾನ್ಶಿ ನರ್ವಾಲ್ ಮದುಮಗ ವಿನಯ್ ನರ್ವಾಲ್ ಮಾಡಿದ್ದ ತಪ್ಪಾದರೂ ಏನು..? ಹಿಮಾನ್ಶಿ ಎದುರೇ ನರ್ವಾಲನನ್ನು ಕೊಂದ ಗಳಿಗೆಯನ್ನು ಆ ಹೆಣ್ಣುಮಗಳು ಹೇಗೆ ಸಹಿಸಿರಬಹುದು.....? ಸಲ್ಲದ ವಿಷಯಗಳನ್ನು ಯೋಚಿಸಿದ ಮನಸ್ಸು ಇಷ್ಟೇಕೆ ಕ್ರೂರವಾಗುತ್ತದೆ. ಪತಿಯನ್ನು ಕಳೆದುಕೊಂಡಿದ್ದ ಆ ದುಃಖದ ನಡುವೆಯೂ ಜೈ ಹಿಂದ್ ಎಂದು ಪತಿಯ ಶವದ ಎದುರು ಹೇಳಿದ ದೂರದರ್ಶನದಲ್ಲಿ ಕಂಡು ಬಂದ ಆ ದೃಶ್ಯ ಮರೆಯಲಾದೀತೇ? ಇದು ಎಂಥಾ ಕಲ್ಲು ಹೃದಯವನ್ನು ಕರಗಿಸುವಂಥದ್ದು.

ಇನ್ನು ಶಿವಮೊಗ್ಗದ ಮಂಜುನಾಥ್ ಅವರನ್ನು ಕಲ್ಮ ಓದಲು ಹೇಳುತ್ತಾ ಓದಲು ಬಾರದಿದ್ದಾಗ ಮಡದಿ ಪಲ್ಲವಿ ಮತ್ತು ಅವರ ಮಗನೆದುರು ರೆಪ್ಪೆ ಮುಚ್ಚಿ ಬಿಡುವಷ್ಟರಲ್ಲಿ ಕೊಂದುಬಿಟ್ಟರಲ್ಲ. ಧರ್ಮಾಂಧರಾದ ಅವರ ಅಮಾನುಷ ಕೃತ್ಯಕ್ಕೆ ಅವರುಗಳ ಮನಸ್ಸಾದರೂ ಹೇಗೆ ಒಪ್ಪಿತು....,? ಯಾವ ಧರ್ಮವು ಹಿಡೀ ಕಡಿ ಕೊಲ್ಲು ಎಂದು ಹೇಳುವುದಿಲ್ಲ. ದಯೆಯೆ ಧರ್ಮ ಎಂದು ಎಲ್ಲರೂ ಬೋಧಿಸಿದ್ದಾರೆ. ಆದರೆ..... ಧರ್ಮಾಭಿಮಾನದ ಅಂಧತ್ವ ಅವರ ಒಳಗಣ್ಣನ್ನು ಮುಚ್ಚಿರುತ್ತದೆ. ಆ ಕಾರಣದಿಂದಲೇ ಇಂತಹ ಕಿಡಿಗೇಡಿಗಳು ದೈತ್ಯರಂತೆ ವರ್ತಿಸುತ್ತಾರೆ. ಇವರು ಇಡೀ ಜಗದ ಬದುಕನ್ನು ಅಲ್ಲೋಲಕಲ್ಲೋಲ ಗೊಳಿಸುತ್ತಾರೆ. ಧರ್ಮಾಂಧರು ಸಮಾಜಘಾತಕರು ದುಷ್ಟಬುದ್ಧಿ ಉಳ್ಳವರು ಮಾತ್ರ ಅಲ್ಲ. ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳು ತುಂಬಾ ನಿರ್ದಯಿಗಳಾಗಿ ಕೆಲವು ಸಂದರ್ಭಗಳಲ್ಲಿ ವರ್ತಿಸುತ್ತಿರುವುದು ಅತ್ಯಂತ ವಿಷಾದನೀಯ.

ಪ್ರಿಯಕರನ ಜೊತೆ ಸೇರಿ ಪತಿಯನ್ನು ಕೊಂದು ಶವವನ್ನು 15 ತುಂಡುಗಳನ್ನಾಗಿ ಮಾಡಿ ಡ್ರಮ್ಮಿನಲ್ಲಿ ಇಟ್ಟು ಸಿಮೆಂಟ್‌ನಿಂದ ಮುಚ್ಚಿದ್ದ ಉತ್ತರ ಪ್ರದೇಶದ ಮೀರತ್‌ನ ಮಹಿಳೆ ಮುಸ್ಕಾನ್ ರಸ್ತೋಗಿ ಪಾಶವಿ ಕೃತ್ಯದಲ್ಲಿ ತಾನೇನೂ ಕಮ್ಮಿ ಇಲ್ಲವೆಂಬ ಧೂರ್ತ ಮನಸ್ಸನ್ನು ತೆರೆದಿಟ್ಟಿದ್ದಾಳೆ. ಇಂದೋರಿನ ಟ್ರಾನ್ಸ್‌ಪೋರ್ಟ್ ಉದ್ಯಮಿಯಾಗಿದ್ದ ರಾಜಾ ರಘುವಂಶಿ ಆತನ ಪತ್ನಿ ಸೋನಂ 2025ರ ಮೇ 20ರಂದು ಮೇಘಾಲಯಕ್ಕೆ ಹನಿಮೂನ್ ಗೆಂದು ಹೊರಟರಷ್ಟೆ. ಆದರೆ ಹೋದ ಎರಡನೇ ದಿನದಂದು ಸೋನಂ ಅದೇ ತಿಂಗಳ 22ನೇ ತಾರೀಕಿನಂದು ಹಂತಕರಿಗೆ 20 ಲಕ್ಷ ಸುಫಾರಿ ಕೊಟ್ಟು ಕೊಲೆ ಮಾಡಿಸಿ ವೈಸಾವ್ಡಾಂಗ್ ಎಂಬ ಜಲಪಾತದ ಬಳಿ ರಘುವಂಶಿಯ ಶವವನ್ನು ಎಸೆದು ಬಿಟ್ಟರಲ್ಲ! ಮದುವೆಯಾದ ಕೇವಲ ಒಂದು ವಾರದೊಳಗೆ ಈ ಕೃತ್ಯ ಎಸಗಿದ ಸೋನಂ ಮನದೊಳಗೆ ಅದಾವ ರಾಕ್ಷಸ ಹುದುಗಿದ್ದ. ರಘುವಂಶಿಯೊಂದಿಗೆ ತಾನು ಸಂಸಾರ ಮಾಡಲಾರೆ ಎಂದು ಆತನನ್ನು ಬಿಡಬಹುದಿತ್ತಲ್ಲ.... ಅವಳು ಅವನಿಂದ ತೊರೆದು ಹೋಗಲು ಬಹು ಆಯ್ಕೆಗಳು ಇದ್ದವು. ಅದನ್ನೇಕೆ ಅವಳು ಯೋಚಿಸಲಿಲ್ಲ. ಒಂದರೆಗಳಿಗೆ ಅವಳು ಸಕಾರಾತ್ಮಕವಾಗಿ ಚಿಂತಿಸಿದ್ದರೆ ರಘುವಂಶಿಯಾದರು ಬದುಕುತ್ತಿದ್ದ. ಮದುವೆಯಾದ 36 ದಿನಗಳಲ್ಲಿ ಜಾರ್ಖಂಡಿನ ಗರ್ಭದಾ ಎಂಬ ಊರಿನ ಸುನೀತಾ ಎಂಬ ಮಹಿಳೆ ತನ್ನ ಪತಿ ಬುದ್ಧನಾಥ್ ಸಿಂಗ್‌ನನ್ನು ಪತಿ ನನಗೆ ಇಷ್ಟವಾಗಿಲ್ಲ ಎಂದು

ತಗಾದೆ ತೆಗೆದು ಕೊಲೆ ಮಾಡಿಸಿಬಿಟ್ಟಳಲ್ಲ... ಅವನ ಕನಸುಗಳನ್ನು ಮುರಿಯಲು ಅವಳಿಗೆ ಅದಾವ ಹಕ್ಕಿತ್ತು...? ಇಷ್ಟವಿಲ್ಲವೆಂದು ಮದುವೆಗೆ ಮೊದಲೇ ಹೇಳಿದ್ದರೆ ಆ ಜೀವವಾದರೂ ಉಳಿಯುತ್ತಿತ್ತು. ಹೆತ್ತ ಒಡಲಿಗೆ ಅದೆಷ್ಟು ದುಃಖವಾಗಿರಬಹುದು....

ಇತ್ತೀಚೆಗೆ ಮರಣ ಹೊಂದಿದ ಮಹಿಳೆ ಒಬ್ಬರ ಸಂಬಂಧಿಕರು ಅವಳ ಆಸ್ತಿಗಾಗಿ ಏನೆಲ್ಲಾ ಕಸರತ್ತನ್ನು ಮಾಡಿದರು. ಸತ್ತ ಆ ಮಹಿಳೆಯ ಶವ ಸಂಸ್ಕಾರದ ಬಗ್ಗೆ ಚಿಂತಿಸದ, ಸಾವಿಗಾಗಿ ಮರುಕ ಪಡದ ಅವರು ಶವದ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡ ನಿರ್ದಯಿ ಗಳಾಗಿದ್ದಾರೆ. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗು ಹೆಣ್ಣಾಯಿತೆಂದು ಚಾಕುವಿನಿಂದ ತಿವಿದುಕೊಂದ ಕ್ರೂರ ತಾಯಿ ಇದ್ದಾಳೆ. ಮಾಧ್ಯಮಗಳಲ್ಲಿ ಪ್ರಸಾರವಾದ 800 ಭ್ರೂಣ ಹತ್ಯೆಗಳನ್ನು ಮಾಡಿರುವ ಹೃದಯವಿದ್ರಾವಕ ಘಟನೆಯಿಂದ ಎಂತಹ ಕಠಿಣ ಹೃದಯಿಗಳು ತಲೆ ತಗ್ಗಿಸುತ್ತಾರೆ. ತನ್ನ ಹೊಟ್ಟೆಯಲ್ಲಿ ಹುಟ್ಟಿ ಬಂದ ಎರಡು ದಿನದ ಕರುಳ ಕುಡಿಯನ್ನು ಎರಡು ಲಕ್ಷಕ್ಕೆ ಮಾರಿದ ಮೂರ್ಖ ತಾಯಿ ಇದ್ದಾಳೆ. ಕುಡಿಯಲು ಹಣ ಕೊಡಲಿಲ್ಲವೆಂದು ಕುಡುಗೋಲಿನಿಂದ ತಾಯಿಯನ್ನು ಕೊಂದ ಪಾಪಿಗೆ ಭಗವಂತ ಕ್ರೂರ ಶಿಕ್ಷೆ ನೀಡಬಾರದೇ....? ಅನಾರೋಗ್ಯದಿಂದ ಪೀಡಿತಳಾಗಿದ್ದ ತನ್ನ ತಾಯಿಯನ್ನು ಆರನೇ ಮಹಡಿಗೆ ಕರೆದೊಯ್ದು ಕೆಳಗೆ ಬೀಳಿಸಿ ಕೊಂದ ಉತ್ತರ ಭಾರತದ ಕ್ರೂರ ಮಗನಿದ್ದಾನೆ. ಆಸ್ತಿಯಲ್ಲಿ ಪಾಲು ಕೊಡಲಿಲ್ಲವೆಂದು ತಂದೆಯ ಕಣ್ಣ ಗುಡ್ಡೆಯನ್ನೇ ಕಿತ್ತು ಹಾಕಿದ ಮಗನಿದ್ದಾನೆ. ಕೇವಲ ಮೂರು ದಿನದ ಹಸುಗೂಸನ್ನು ರಸ್ತೆಯ ಪಕ್ಕದಲ್ಲಿ ಬಿಟ್ಟು ಹೋದ ತಾಯಿ ಎಂತಹ ನೀಚಳಿರಬಹುದು ...? ಪೊಲೀಸರಿಗೆ ಸಿಕ್ಕ ಅವಳು ಕೊಟ್ಟ ಕಾರಣ ಮಗುವಿಗೆ ಕುಡಿಸಲು ತನ್ನ ಎದೆಯಲ್ಲಿ ಹಾಲು ಬರುತ್ತಿಲ್ಲ ಎಂಬುದು. ತಾಯ ಎದೆ ಹಾಲೆ ಇಲ್ಲದೆ ಎಷ್ಟೋ ಮಕ್ಕಳು ಬೆಳದಿಲ್ಲವೇ..? ಈ ಸಾಮಾನ್ಯ ತಿಳುವಳಿಕೆಯು ಅವಳಿಗೆ ಇಲ್ಲವಾಯಿತಲ್ಲ. ಕರೋನ ವೇಳೆಯಲ್ಲಿ ಮರಣ ಹೊಂದಿದ ತನ್ನ ತಂದೆಯನ್ನು ನೋಡಲು ಬಾರದೆ ಪರದೇಶಿ ಹೆಣದಂತೆ ಶವಸಂಸ್ಕಾರಕ್ಕೆ ಒಪ್ಪಿಗೆ ನೀಡಿದ ಕೆಟ್ಟ ಮಗನಿದ್ದಾನೆ. ಆದರೆ ಅವನು ತನ್ನ ತಂದೆಯ ಜೇಬಿನಲ್ಲಿದ್ದ ಹಣವನ್ನು ಮಾತ್ರ ಪಡೆದುಕೊಂಡನಷ್ಟೇ. ಇಂತಹ ನೂರಾರು ಪ್ರಸಂಗಗಳು ದಿನನಿತ್ಯವೂ ನಡೆಯುತ್ತಿರುವುದು ವಿಷಾದನೀಯ. ಇಲ್ಲೆಲ್ಲ ಮಾನವತೆಯನ್ನು ಮೀರಿದ ಮನಸ್ಸುಗಳ ವರ್ತನೆಯೇ ಇರುತ್ತದೆ. ಇಂಥವರಿಗೆ ದಯಾ ಭಾವದ ಅರ್ಥವೇ ತಿಳಿದಿರುವುದಿಲ್ಲ.

ಸಮಾಜದಲ್ಲಿ ಮೂರು ರೀತಿಯ ಸ್ವಭಾವದವರನ್ನು ಕಾಣುತ್ತೇವೆ. ತಮ್ಮ ಪಾಡಿಗೆ ತಾವಿರುವವರು ಕೆಲವರಿದ್ದರೆ, ಅನ್ಯರೆದೆಗೆ ಮಿಡಿಯುವ ಹೃದಯ ಶ್ರೀಮಂತಿಕೆಯುಳ್ಳ ಸದ್ಗುಣಿಗಳು ಇರುತ್ತಾರೆ. ಮತ್ತೊಂದು ಮೂರನೇ ವರ್ಗವಿದೆ. ಇವರು ತಮ್ಮ ಬದುಕಿನಲ್ಲಿ ನೈತಿಕತೆಯನ್ನು ತೀರಾ ಕೆಳಮಟ್ಟಕ್ಕೆ ಇಳಿಸಿಕೊಂಡವರು. ಮಾನವೀಯ ಮೌಲ್ಯಗಳ ಅರಿವೇ ಇಲ್ಲದ ಸ್ವಾರ್ಥಪರ ಕಠೋರ ಹೃದಯಿಗಳು. ಇವರಿಂದ ಸಮಾಜಘಾತಕತನದ ಪ್ರಸಂಗಗಳೇ ನಡೆಯುತ್ತಿರುತ್ತವೆ. ಇವರಿಗೆ ಕೇವಲ ಭೌತಿಕ ಸುಖ ಬಯಕೆ ಯೊಂದೇ ಬೇಕಾಗಿರುತ್ತದೆ. ಇಂತಹವರಿಂದ ಅತೃಪ್ತಿ ಅಶಾಂತಿ ಅರಾಜಕತೆ ಸಮಾಜದಲ್ಲಿ ಹೆಚ್ಚುತ್ತದೆ. ಇವರು ಮಾನವೀಯ ಧರ್ಮದ ಚೌಕಟ್ಟನ್ನು ಮೀರಿದವರು.

ಮನುಷ್ಯ ಸ್ವಭಾವದಲ್ಲಿ ಕರುಣೆ ಪರೋಪಕಾರ ಅಡಕವಾಗಿರುವುದು ಸಹಜವಾದರೂ ಅವುಗಳನ್ನು ರಚನಾತ್ಮಕ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಮೇಧಾವಿತನ ವುಳ್ಳವರೇ ಮಹಾನ್ ವ್ಯಕ್ತಿಗಳು ಎನಿಸುತ್ತಾರೆ. ಇಂಥವರು ಪರೋಪಕಾರ ಜೀವಿಗಳಾಗಿರುತ್ತಾರೆ. ಅವರ ಹೃದಯದಲ್ಲಿ ಕರುಣೆ ಅನುಕಂಪಕ್ಕೆ ಒಂದು ಜಾಗ ಮೀಸಲಾಗಿರುತ್ತದೆ. ಕರುಣೆ ಅಂದ ಮಾತ್ರಕ್ಕೆ ದೈನ್ಯತೆಯ ಭಾವ ಎಂಬರ್ಥವಲ್ಲ. ಮನುಕುಲವೇ ಸ್ವರ್ಗಮಯವಾಗುವುದು ದಯೆ ಅನುಕಂಪ ಕರುಣೆ ಸಹಕಾರ ಹೊಂದಾಣಿಕೆಯಂತಹ ಸದ್ಗುಣಗಳಿಂದ. ಇಂತಹ ಗುಣವುಳ್ಳವರು ಸುಖ ಬದುಕನ್ನು ನಡೆಸುತ್ತಾ ಅನ್ಯರ ಸುಖವನ್ನು ಆದರಿಸುತ್ತಾರೆ. ತಮ್ಮ ಉದಾತ್ತ ಗುಣಗಳಿಂದ ಸುತ್ತಲಿನ ಬದುಕನ್ನು ಸಂತೋಷದಿಂದಿಡುತ್ತಾರೆ. ಫ್ಲಾರೆನ್ಸ್ ನೈಟಿಂಗೇಲ್ ಮಹಾ ಕರುಣಾಮಯಿ ಆಗಿದ್ದಳು. ಅಹಿಂಸಾ ಭಾವವನ್ನು ಬೋಧಿಸಿದ್ದ ಬುದ್ಧ ವಿಶ್ವ ಪೂಜ್ಯನಾಗಿದ್ದಾನೆ. ಇವರೆಲ್ಲರೂ ತಾವು ಬದುಕಿ ಅನ್ಯರಿಗೂ ಉತ್ತಮ ಬದುಕಿನ ಕಲೆಯನ್ನು ತಮ್ಮ ದಯಾಭಾವದ ಮೂಲಕ ತಿಳಿಸಿಕೊಟ್ಟವರು. ಅನ್ಯರ ಗೌರವಕ್ಕೆ ಧಕ್ಕೆ ಬಾರದಂತೆ ನಡೆದುಕೊಂಡ ಮಹತ್ತರ ಗುಣವುಳ್ಳವರು.

ದಯೆ ಎಂಬುದು ಯಾರು ಯಾರಿಗೂ ಹೇಳಿ ಕೊಡುವಂತದ್ದಲ್ಲ. ಕರುಣೆ ಎಂಬುದು ಇಡೀ ಜಗತ್ತನ್ನು ಸುಸ್ಥಿತಿಯಲ್ಲಿಡುತ್ತದೆ. ದಯೆಯೆ ಬಾಳಿನ ಬೆಳಕು. ದಯೆಯು ಸಮಾಜವನ್ನು ಒಟ್ಟುಗೂಡಿಸುತ್ತದೆ. ದಯೆ ಇದ್ದಲ್ಲಿ ಸದ್ಗುಣವು ನೆಲೆಗೊಳ್ಳುತ್ತದೆ ಎನ್ನುತ್ತಾರೆ ಕಬೀರದಾಸರು. ದಯಾವಂತರು ಮಾತ್ರ ನ್ಯಾಯಪರರು ಎನ್ನುತ್ತಾರೆ ವಿದೇಶಿ ದಾರ್ಶನಿಕ ಸ್ವಾನ್ಲೆ. ದುಃಖ ನಿವಾರಣೆ ಕಷ್ಟದಲ್ಲಿ ನೆರವು ನೀಡುವುದೇ ದಯಾಪರತೆ. ದಯೆಯು ಅಂತಕರಣದಿಂದ ಕೂಡಿರುವಂತದ್ದು. ದಯಾಭಾವವು ಸದಾ ಹಸಿರಾಗಿರುತ್ತದೆ ಎನ್ನುತ್ತಾರೆ. ಅಂತೆ ಇಡೀ ಲೋಕವು ಸದಾ ಹಸಿರಾಗಿದ್ದರೆ ಅದೆಷ್ಟು ಚಂದಾ.........

# ಇರಿವನೊಳಂಬಾಧಿರಾಜ ದಿಲೀಪನ ದೇವಭೋಗದ ಧರ್ಮೇಶ್ವರ ದೇವಾಲಯ ಮತ್ತು ಕೆರೆಯ ದಮ್ಮ (ಧರ್ಮ)

ಕರ್ನಾಟಕದ ಇತಿಹಾಸದಲ್ಲಿ ಮೂರು ಶತಮಾನಗಳ ಕಾಲ ಪ್ರಧಾನ ಪಾತ್ರ ವಹಿಸಿದ ಹಿರಿಯ ಸಾಮಂತ ರಾಜಮನೆತನಗಳ ಪೈಕಿ ನೊಳಂಬರ ಮನೆತನವೂ ಒಂದು. ಬಾಣ, ವೈದುಂಬರಂತೆ ಸಾಮಂತರಾಗಿದ್ದ ಇವರು ರಾಷ್ಟ್ರಕೂಟರು, ಗಂಗರೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ತಲಕಾಡಿನ ಗಂಗರ ಆಶ್ರಿತರಾಗಿ ಆಳ್ವಿಕೆ ಆರಂಭಿಸಿದ ಇವರು ಇಂದಿನ ಆಂಧ್ರ ಪ್ರದೇಶದ ಅನಂತಪುರ, ಕರ್ನಾಟಕದ ಚಿತ್ರದುರ್ಗ, ತುಮಕೂರು ಜಿಲ್ಲೆಗಳ ಭಾಗಗಳನ್ನೊಳಗೊಂಡ 'ನೊಳಂಬಳಿಗೆ ೧೦೦೦', ಕ್ರಮೇಣ ಬಳ್ಳಾರಿ, ಚಿಕ್ಕಬಳ್ಳಾಪುರ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳನ್ನೊಳಗೊಂಡ 'ನೊಳಂಬಳಿಗೆ ೩೨೦೦೦' ವ್ಯಾಪ್ತಿಯನ್ನು ಹೊಂದಿದ್ದರು. ಹೆಂಜೇರು (ಪೆಂಜೇರು) ಅಥವಾ ಹೇಮಾವತಿ ಇವರ ರಾಜಧಾನಿಯಾಗಿತ್ತು. ಇದು ಸಿರಾ ತಾಲ್ಲೂಕಿನ ಉತ್ತರಕ್ಕೆ ಇಂದಿನ ಅನಂತಪುರ ಜಿಲ್ಲೆಯಲ್ಲಿದೆ. ಚಿತ್ರದುರ್ಗವೂ ನೊಳಂಬ ಸಾಸಿರದ ಆಡಳಿತ ಕೇಂದ್ರವಾಗಿತ್ತೆಂದು ಎಸ್.ಗೋವಿಂದ ಆರ್ಯಪ್ರಭು ಅವರು ಅಭಿಪ್ರಾಯಪಟ್ಟಿದ್ದಾರೆ.

ಹೊಸಕೋಟೆ ತಾಲ್ಲೂಕಿನ ನಂದಗುಡಿ ಹೋಬಳಿ ಜೋಡಿ ದಳಸಿಗೆರೆ (ಹೊಸಕೋಟೆ–೯, ಸಾ.ಶ. ೮೭೦), ಸಿದ್ದನಹಳ್ಳಿ (ಹೊಸಕೋಟೆ–೧೪, ಸಾ.ಶ. ೯೦೦), ಹೊಸಕೋಟೆ ಹೋಬಳಿ ಕುಂಬಳದಹಳ್ಳಿ (ಹೊಸಕೋಟೆ–೧೧೦, ಸಾ.ಶ.ಸು. ೯೦೦), ನಂದಗುಡಿ ಹೋಬಳಿ ಕೊಂಡಹಳ್ಳಿ (ಹೊಸಕೋಟೆ–೩೭, ಸಾ.ಶ. ೯೫೦), ಬನಹಳ್ಳಿ (ಹೊಸಕೋಟೆ–೧೯೯, ಸಾ.ಶ. ೯೬೦), ಹಡಕನಹಳ್ಳಿ (ಹೊಸಕೋಟೆ–೪೭, ೪೮, ಸಾ.ಶ. ೯೮೦?) ಹಾಗೂ ಕಮ್ಮಸಂದ್ರ (ಹೊಸಕೋಟೆ–೧೧೧, ಸಾ.ಶ. ೧೦೦೧) ಗಳಲ್ಲಿ ನೊಳಂಬರ ಶಾಸನಗಳು ದೊರಕಿವೆ.

ಕೊಂಡ್ರಹಳ್ಳಿ ಕೆರೆಕೋಡಿಯ ಸಾ.ಶ. ೯೫೦ರ ಶಾಸನವು ಧರ್ಮೇಶ್ವರ ಮಹಾಕ್ಷೇತ್ರದ 'ನಂಜುಗುಳಿ'ಯನ್ನು 'ಏಕವಾಕ್ಯ ಶ್ರೀಮತ್ ಇರಿವ ನೊಳಂಬಾದಿರಾಜರ ಣಂನ್ದಿಗೊಳಿ' ಎಂದು ಉಲ್ಲೇಖಿಸುತ್ತದೆ. ನಂದಗುಡಿ ಸ್ಥಳನಾಮದ ಅತ್ಯಂತ ಪ್ರಾಚೀನ ರೂಪವನ್ನು ತಿಳಿಸುವ ಶಾಸನವೂ ಇದಾಗಿದೆ. ಧರ್ಮೇಶ್ವರ ದೇವಾಲಯದಿಂದ ದಕ್ಷಿಣಕ್ಕೆ ಕೇವಲ ಒಂದೂವರೆ ಕಿ.ಮೀ. ದೂರದಲ್ಲಿರುವ ಈ ಶಾಸನದಲ್ಲಿ ಇರಿವನೊಳಂಬಾಧಿರಾಜನನ್ನು ಪಂಚಮಹಾಶಬ್ದ, ಪಲ್ಲವಾನ್ವಯ, ಶ್ರೀ ಪೃಥ್ವೀವಲ್ಲಭ, ಪಲ್ಲವಕುಲತಿಲಕ, ಪಲ್ಲವರಾಮ ಎಂಬ ಬಿರುದುಗಳಿಂದ ಕರೆಯಲಾಗಿದೆ. ಇವನು ಣಂನ್ದಿಗೊಳಿಯ ಗವುಣ್ಡ...ಮಿಯಾ ಬಸಪ್ಪನಿಗೆ ತನ್ನ ಕಂಬ್ವರನಾಡು ಮತ್ತು ನೆಕ್ಕುಂದಿನಾಡುಗಳಲ್ಲಿರುವ ದೇವಾಲಯಗಳ ದಾನದತ್ತಿ ನಿರ್ವಹಣೆ ಹಾಗೂ ಎರಡೂ ಪಟ್ಟಣಗಳ ಆಳ್ವಿಕೆಯನ್ನು ವಹಿಸಿದ್ದನು. ಇಂದಿನ ಚಿಂತಾಮಣಿ, ಶಿಡ್ಲಘಟ್ಟ ತಾಲ್ಲೂಕಿನ ದಕ್ಷಿಣ ಭಾಗಗಳು, ಕೋಲಾರ ತಾಲ್ಲೂಕಿನ ವಾಯವ್ಯ ಭಾಗ ಹಾಗೂ ಹೊಸಕೋಟೆ ತಾಲ್ಲೂಕಿನ ಈಶಾನ್ಯ ಮೂಲೆಗಳು ಕೈವಾರನಾಡಿನಲ್ಲಿ ಅಂತರ್ಗತವಾಗಿದ್ದವು. ಚಿಂತಾಮಣಿ ಪಟ್ಟಣದ ನೆಕ್ಕುಂದಿಪೇಟೆ ಅಥವಾ ನೆಕ್ಕುಂದಿ ಅಗ್ರಹಾರವೆಂದು ಕರೆಯಲ್ಪಡುವ ಎಡೆಯು ಪ್ರಾಚೀನ ನೆಕ್ಕುಂದಿನಾಡಿನ ಕೇಂದ್ರಸ್ಥಳವಾಗಿತ್ತು. ನೆಕ್ಕುಂದಿನಾಡು[1] ಇಂದಿನ ಚಿಂತಾಮಣಿ ತಾಲ್ಲೂಕಿನ ಪೂರ್ವ, ಉತ್ತರ ಭಾಗಗಳು ಮತ್ತು ಶ್ರೀನಿವಾಸಪುರ ತಾಲ್ಲೂಕಿನ ಪಶ್ಚಿಮದಲ್ಲೂ ವ್ಯಾಪಿಸಿತ್ತೆಂದು ಊಹಿಸಬಹುದು. ಈ ಎರಡು ನಾಡುಗಳಲ್ಲಿ ಅಂತರ್ಗತವಾಗಿದ್ದ ದೇವಾಲಯಗಳ ದೇವಭೋಗ ನಿರ್ವಹಣೆಯ ಅಪರೂಪದ ಶಾಸನವನ್ನು ಧರ್ಮೇಶ್ವರ ದೇವಾಲಯದ ಸಮೀಪದಲ್ಲಿ ಹಾಕಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ.

ಶಾಸನದ ಉತ್ತರಾರ್ಧ ಭಾಗದಲ್ಲಿ 'ಕೆರೆಗೆ ಕೊಡದಾತ ವಾರಣಾಸಿಯಲ್ಲಿ ಕವಿಲೆಯುಮಳಿದ ಪಞ್ಚಮಹಪಾತಕನಕ್ಕು, ಇರಿವನೊಳಂಬನ ದಮ್ಮ' ಎಂಬ ಸಾಲುಗಳಿವೆ. ಕೆರೆಗೆ ಕೊಡದಾತ ಅಂದರೆ ಯಾರು? ಪ್ರಸ್ತುತ ಶಾಸನದ ಕೆರೆ ಯಾವುದು? ಏನನ್ನು ಕೊಡಬೇಕು ಮತ್ತು ಏಕೆ ಕೊಡಬೇಕು? ಎಂಬ ಪ್ರಶ್ನೆಗಳು ಇಲ್ಲಿ ಮೂಡುತ್ತವೆ. ಹಸು–ಪ್ರಾಣಿ–ಪಕ್ಷಿಗಳು ಮತ್ತು ಮನುಷ್ಯರು ಕೆರೆಯ ನೀರು ಕುಡಿದು ತೃಪ್ತರಾದಾಗ ಅದರ ಫಲವು ಕೆರೆ ನಿರ್ಮಾತೃವಿಗೆ

ಸಲ್ಲುತ್ತದೆ ಮತ್ತು ಅವನು ಅಶ್ವಮೇಧಯಾಗದ ಫಲ ಪಡೆಯುತ್ತಾನೆಂದು ಮಹಾಭಾರತ ಮಹಾಕಾವ್ಯವು ಹೇಳುತ್ತದೆ. ಹಾಗಾಗಿ ಕೆರೆ ನಿರ್ಮಿಸಲು ಹಣವನ್ನಿತ್ತವರ ಹೆಸರುಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಹಣಕ್ಕಿಂತಲೂ ಮೊದಲು ಕೆರೆ ನಿವೇಶನದ ಅಗತ್ಯವಿದೆ. ನಿವೇಶನ ದಾನಿಗಳೂ ಪುಣ್ಯ ಪಡೆಯುತ್ತಾರೆಂದು ನಂಬಲಾಗಿದೆ. ಕೆರೆಯು ದೀರ್ಘಕಾಲ ಉಳಿಯಬೇಕಾದರೆ ಅದರ ಯೋಗಕ್ಷೇಮ ಅಂದರೆ ಕಟ್ಟೆ ಒಡೆಯಬಹುದು, ತೂಬು ಹಾಳಾಗಬಹುದು, ಮಣ್ಣು-ಮರಳು ತುಂಬಿ ಹೂತು ಹೋಗಬಹುದು. ಇವುಗಳಿಗೆ ಗಮನ ಕೊಡಲು ಹಣವಿಲ್ಲದಿದ್ದಾಗ ಊರಿನ ಜನರು ಸೇರಿ ಒಂದು ಜಮೀನನ್ನು 'ಬಿತ್ತುವಟ್ಟ'ವನ್ನಾಗಿ ಬಿಟ್ಟುಕೊಟ್ಟು, ಅದರ ಆದಾಯವನ್ನು ದುರಸ್ತಿ ಕೆಲಸಗಳಿಗಾಗಿ ಮೀಸಲಿಡುತ್ತಿದ್ದರು. ಇಂಥ ಸಂದರ್ಭಗಳಲ್ಲಿ ಸಹಕರಿಸದವರನ್ನು ಕೊಂಡ್ರಹಳ್ಳಿ ಶಾಸನವು '**ಕೆರೆಗೆ ಕೊಡದಾತರು**' ಎಂದು ಸಂಬೋಧಿಸುತ್ತದೆ. ಕೊಂಡ್ರಹಳ್ಳಿ ಕೆರೆಕೋಡಿಯ ಹತ್ತಿರವಿರುವ ಈ ಶಾಸನದ ಕೆರೆಯೇ ಶಾಸನೋಕ್ತ ಇರವಿಸಂದ್ರ'ವಾಗಿದೆ.

ನೊಳಂಬರಸ ಇರಿವನೊಳಂಬ ದಿಲೀಪನ ಹೆಸರಿನಲ್ಲಿ ನಿರ್ಮಾಣವಾದ ಕೆರೆಯಾದ್ದರಿಂದ 'ಇರವಿ' ಪೂರ್ವಪದವೂ, ಸಮುದ್ರದಂತಿರುವ ಜಲಮೂಲ ಕಾರಣಕ್ಕಾಗಿ 'ಸಂದ್ರ' ಎಂಬ ಉತ್ತರ ಪದವೂ ಬಳಕೆಯಾಗಿರುತ್ತವೆ. ಇರವಿಸಂದ್ರ ಅಥವಾ ಕೊಂಡ್ರಹಳ್ಳಿ ಕೆರೆ ಏರಿಯು ಹಾವಿನ ಚಲನೆಯನ್ನು ನೆನಪಿಸುವ ಅಂಕು ಡೊಂಕುಗಳಿಂದ ಕೂಡಿದೆ. ಕೆರೆ ಏರಿಗೆ ಗಟ್ಟಿ ಸುಣ್ಣದ ಹರಳು ಮಿಶ್ರಿತ ಕೆಂಪು (ಕರ್ಚುಗಲ್ಲು) ಮಣ್ಣನ್ನು ಬಳಸಲಾಗಿದೆ. ಕೆರೆಏರಿಯಲ್ಲಿ ಕೋಣದ ತಲೆಯ ಮೇಲೆ ಸಮಪಾದದಲ್ಲಿ ನಿಂತಿರುವ ಪೂರ್ವಾಭಿಮುಖ ದುರ್ಗಾಶಿಲ್ಪವಿದೆ. ಕೆರೆಗೆ ಎರಡು ತೂಬುಗಳಿದ್ದು, ಒಂದು ತೂಬಿನ ಶಿಲಾಕಂಬಗಳ ಮೇಲಿನ ತೊಲೆಯ ಮೇಲೆ ಗಣಪತಿ ಹಾಗೂ ಒಂದನ್ನೊಂದು ಪರಸ್ಪರ ಹಿಂತಿರುಗಿ ನೋಡುತ್ತಿರುವ ಎರಡು



**ಕೊಂಡ್ರಹಳ್ಳಿ ಕೆರೆಏರಿಯ ದುರ್ಗೆ**

ನಾಯಿಗಳ ಉಬ್ಬುಶಿಲ್ಪಗಳಿವೆ. ಇನ್ನೊಂದು ತೂಬು ಪೊದೆಗಳಿಂದ ಮುಚ್ಚಿದೆ. ನಾಡ ದೇವಾಲಯಗಳ ದೇವಭೋಗ, ಕೆರೆ ನಿರ್ಮಾಣ ಮತ್ತು ನಿರ್ವಹಣೆಗಳಿಗೆ



**ಕೊಂಡ್ರಹಳ್ಳಿ ಕೆರೆತೂಬು**

ನಾವು ತನು-ಮನ-ಧನದಿಂದ ಮುಂದೆ ಬರಬೇಕೆಂದು ಸೂಚ್ಯ ಸಂದೇಶ ನೀಡಿದ ನೊಳಂಬದೊರೆ ಎ(ಇ)ರಿವನೊಳಂಬ ದಿಲೀಪನು ಇದುವೇ ತನ್ನ ಧರ್ಮವೆಂದು ಪ್ರತಿಪಾದಿಸಿರುತ್ತಾನೆ. ದೇವಾಲಯಗಳ ದೇವಭೋಗ ಹಾಗೂ ಇರವಿಸಂದ್ರ>ಕೊಂಡ್ರಹಳ್ಳಿ ಕೆರೆಕಾಯಕವನ್ನು ಬೆಂಬಲಿಸದವರು ವಾರಣಾಸಿಯಲ್ಲಿ ಕವಿಲೆಯನ್ನು ಅಳಿದ ಪಾಪಕ್ಕೆ ಗುರಿಯಾಗುವರೆಂಬ ಶಾಪಾಶಯವು ಶಾಸನದಲ್ಲಿದೆ.

ಸಾ.ಶ. ೯೮೦ರ ಪುಂಗನೂರು ತಾಲ್ಲೂಕಿನ ಮೂಗಾಂಡ್ಲಪಲ್ಲೆ ಶಾಸನವು ಇರಿವ ನೊಳಂಬನು ಪರುವಿನಾಡ ವೆಂದುರಪೊನ್ನೆಯಲ್ಲಿದ್ದಾಗ ಪುಲಿನಾಡಿನ ಪೆರ್ಮ್ಮಾಡಿ ಬೀರಾನೆಗಾವುಂಡನ ಮಗ ಬಸವಯ್ಯನಿಗೆ ಪಲ್ಲವಾದಿತ್ಯ ನೊಳಂಬಗಾವುಂಡನೆಂದು ಹೆಸರಿಟ್ಟು ಅವನನ್ನು ತನ್ನ ಸಾಮಂತನನ್ನಾಗಿ ಮಾಡಿಕೊಂಡಿರುವುದನ್ನು ದಾಖಲಿಸುತ್ತದೆ. ಸಾ.ಶ. ೧೦೪೯ರ ಕಡೂರು ತಾಲ್ಲೂಕು ಗರ್ಜಿ ಶಾಸನವು ಕಳವರನಾಡ ನಾಲ್ಗಾವುಂಡ ಸಂಕಯ್ಯ ಬಸವಯ್ಯನ ಮಗ ನೊಳಂಬಗಾವುಂಡ, ಇವನ ಮಗ ಉದಯಾದಿತ್ಯನನ್ನು ಉಲ್ಲೇಖಿಸುತ್ತದೆ. ಈ ಎರಡು ಶಾಸನಗಳನ್ನು ನಮ್ಮ ಕೊಂಡಹಳ್ಳಿ ಕೆರೆಕೋಡಿಯ ಸಾ.ಶ. ೯೫೦ರ ಶಾಸನದೊಟ್ಟಿಗೆ ಗಮನಿಸಿದಾಗ, ಣನ್ದಿಗೊಳಿ ಗವುಂಡ...ಮಿಯಾ ಬಸಪ್ಪ, ಬೀರಾನೆಗಾವುಂಡನ ಮಗ ಬಸವಯ್ಯ ಹಾಗೂ ಕಳವರನಾಡ ನಾಲ್ಗಾವುಂಡ ಸಂಕಯ್ಯ ಬಸವಯ್ಯ ಎಂಬ ಹೆಸರುಗಳು ಣನ್ದಿಗೊಳಿ ಗವುಡ ...ಮಿಯಾ ಬಸಪ್ಪನನ್ನೇ ಬೇರೆ ಬೇರೆ ಹೆಸರುಗಳಿಂದ

ಸಂಬೋಧಿಸಿರಬಹುದೆಂದು ಭಾಸವಾಗುತ್ತದೆ. ಏಕೆಂದರೆ ಇವರುಗಳ ಕಯ್ವರನಾಡು – ನೆಕ್ಕುಂದಿನಾಡು, ಪುಲಿನಾಡು ಮತ್ತು ಕಳವರನಾಡುಗಳು ಹೆಚ್ಚು ಕಡಿಮೆ ಒಂದೇ ಪ್ರದೇಶದಲ್ಲಿದ್ದು, ಇವರುಗಳ ಮನೆತನವನ್ನು ಈ ಕೆಳಗಿನಂತೆ ನಿರೂಪಿಸಬಹುದು. ಬೀರಾನೆಗಾವುಂಡನ ಮಗ ...ಮಿಯಾ ಬಸಪ್ಪ ಅಥವಾ ಬಸವಯ್ಯನು ತಾನು ಇರಿವನೊಳಂಬನಿಂದ ಪಡೆದ 'ಪಲ್ಲವಾದಿತ್ಯ ನೊಳಂಬಗಾವುಂಡ' ಎಂಬ ಪಟ್ಟಾಧಿಕಾರ, ರಾಜಚಿಹ್ನೆ, ಕುದುರೆ, ಕೊಡೆ, ಅಡ್ಡಪಲ್ಲಕ್ಕಿ, ಅಡ್ಡಣಿಗೆ, ಗದ್ದಿಗೆ ಹಾಗೂ ಉಂಬಳಿಯ ಅಭಿಮಾನ ಸ್ಮರಣೆಗಾಗಿ ತನ್ನ ಮಗನಿಗೆ 'ನೊಳಂಬಗಾವುಂಡ' ನೆಂದು ಹೆಸರಿಟ್ಟು ಕರೆದಿರುವುದು ಸ್ಪಷ್ಟವಾಗುತ್ತದೆ.

ಬೀರಾನೆಗಾವುಂಡ

|

ಣನ್ದಿಗೊಳಿಗವುಂಡ ...ಮಿಯಾ ಬಸಪ್ಪ/ಪಲ್ಲವಾದಿತ್ಯ
ನೊಳಂಬಗಾವುಂಡ ಬಸವಯ್ಯ/ಕಳವರನಾಡ
ನಾಲ್ಗಾವುಂಡ ಸಂಕಯ್ಯ ಬಸವಯ್ಯ (ಸಾ.ಶ. ೯೫೦)

|

ನೊಳಂಬಗಾವುಂಡ (ಸಾ.ಶ. ೯೮೦)

|

ಉದಯಾದಿತ್ಯ (ಸಾ.ಶ. ೧೦೮೯)

ಇರಿವನೊಳಂಬ ದಿಲೀಪನು (ಸಾ.ಶ. ೯೪೧–೯೬೮) ಒಂದನೆಯ ಅಯ್ಯಪದೇವನ ಮಗ ಹಾಗೂ ಅಣ್ಣಿಗ ಬೀರನೊಳಂಬನ ತಮ್ಮನಾಗಿದ್ದಾನೆ. ಇವನ ಸಾ.ಶ. ೯೪೨ರ ಹೇಮಾವತಿ ಸ್ತಂಭ ಶಾಸನವು ನೊಳಂಬರ ಮೂಲ ಹಾಗೂ ವಂಶಾವಳಿಯನ್ನು ತಿಳಿಸುತ್ತದೆ. ಇವನಿಗೆ ಪಿರಿಯಬ್ಬರಸಿ ಎಂಬ ಪತ್ನಿ, ನನ್ನಿನೊಳಂಬ/ಚಲಂದಕಕಾರ (ಸಾ.ಶ ೯೬೯–೯೭೫), ಇಮ್ಮಡಿ ಅಯ್ಯಪದೇವ (ಸಾ.ಶ. ೯೪೯–೯೬೬) ಎಂಬ ಪುತ್ರರಿದ್ದರು. ತನ್ನ ಅಣ್ಣ ಅಣ್ಣಿಗ ಬೀರನೊಳಂಬನು (ಸಾ.ಶ.ಸು. ೯೩೪–೯೪೦) ಚಿತ್ರದುರ್ಗದ ಕೆಲವು ಭಾಗಗಳನ್ನು ರಾಷ್ಟ್ರಕೂಟರಿಗೆ ಕಳೆದುಕೊಂಡ ನಂತರ ಅಧಿಕಾರಕ್ಕೆ ಬಂದ ಇರಿವ ನೊಳಂಬಾಧಿರಾಜನು ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನಿಗೆ ಸಾಮಂತನಾಗಿ, ಸ್ನೇಹಿತನಾಗಿ, ಚೋಳದೊರೆ ರಾಜಾದಿತ್ಯಚೋಳ/ಇಮ್ಮಡಿ ಕರಿಕಾಲನ (ಸಾ.ಶ.೯೬೫–೯೬೯)ವಿರುದ್ಧ ಯುದ್ಧ ಮಾಡುತ್ತಾನೆ. ರಾಜಾದಿತ್ಯಚೋಳನು ಹತನಾಗಲ್ಪಟ್ಟು ತಂಜಾವೂರು ರಾಷ್ಟ್ರಕೂಟರ ವಶವಾಗುತ್ತದೆ. ರಾಮೇಶ್ವರದವರೆಗಿನ ತಮ್ಮ ಪ್ರದೇಶಗಳನ್ನು ಸಾಮಂತರಿಗೆ ವಹಿಸಿದ ರಾಷ್ಟ್ರಕೂಟರು ಇರಿವ ನೊಳಂಬಾಧಿರಾಜನಿಗೆ ನೊಳಂಬವಾಡಿಯನ್ನು ಬಿಟ್ಟುಕೊಡುತ್ತಾರೆ. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಬಾಣ, ವೈದುಂಬರನ್ನು ಇರಿವ ನೊಳಂಬಾಧಿರಾಜನಿಗೆ ಸಹಾಯಕರಾಗಿರಲು ಸೂಚಿಸುತ್ತಾನೆ. ಈ ಕಾರಣಕ್ಕಾಗಿಯೇ ಬೇತಮಂಗಲ ಶಾಸನದಲ್ಲಿ ವೈದುಂಬರಾಜ ತಿರುವಯ್ಯನಿಗೆ ಇರಿವನೊಳಂಬಾಧಿರಾಜನು ಕೆರೆದುರಸ್ತಿಗಾಗಿ ಆದೇಶ ನೀಡಿರುವುದನ್ನು ಕಾಣುತ್ತೇವೆ.[3] ಆಗ ವಿಜಯಾದಿತ್ಯಮಂಗಲ, ಮಂಡಿಕಲ್ ಹಾಗೂ ಬಂಗವಾಡಿ ಕೆರೆಗಳ ದುರಸ್ತಿ ಕಾರ್ಯ ನಡೆಯುತ್ತದೆ. ಇರಿವನೊಳಂಬನು ಪಟ್ಟವೇರಿದ ಇಪ್ಪತ್ತನೆಯ ವರ್ಷದಲ್ಲಿ ನೆಲೆಯುವ್ಮಗಾವುಂಡ, ಅಳಲಯ್ಯಗಾವುಂಡರು ಬಂಬಿಕನೂರು>ಬನಹಳ್ಳಿ (ನಂದಗುಡಿ ಹೋಬಳಿ)ಯಲ್ಲಿ ಕೆರೆ ನಿರ್ಮಿಸಿದ್ದಾರೆ.[4] ಆವನಿಯ ಶೈವಗುರು ಕಲಿಯುಗ ರುದ್ರನಿಂದಲೂ ಐವತ್ತು ದೇವಾಲಯಗಳು ಮತ್ತು ಎರಡು ದೊಡ್ಡಕೆರೆ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ.[5] ಹೀಗೆ ನೊಳಂಬಾಧಿರಾಜನು ಅಧೀನ ಆಡಳಿತಗಾರರಿಂದ ಸುಮಾರು ೨೮ ವರ್ಷಗಳ ಅವಧಿಯಲ್ಲಿ ತನ್ನ ವ್ಯಾಪ್ತಿಗೊಳಪಟ್ಟಿದ್ದ ಬಳ್ಳಾರಿ, ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು ಮತ್ತು ಅನಂತಪುರ ಭಾಗಗಳಲ್ಲಿ ದೇವಾಲಯ, ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆಗಳಿಗೇ ಹೆಚ್ಚು ಒತ್ತು ಕೊಟ್ಟಿದ್ದನು. ಈ ಮೂಲಕ ಕೊಂಡ್ರಹಳ್ಳಿ ಶಾಸನದ 'ಎ(ಇ)ರಿವನೊಳಂಬನ ಧರ್ಮ' ಪಾಲನೆಯಾಗಿದೆ. ಇವನ ಕಾಲವನ್ನು ನೊಳಂಬರ ಇತಿಹಾಸದಲ್ಲಿ ಧರ್ಮಯುಗ, ಸುವರ್ಣಯುಗ, ಅತ್ಯಂತ ಪರಾಕಾಷ್ಠತೆಯ ಭವ್ಯ ಕಾಲವೆಂದೂ ಹೇಳಬೇಕಾಗುತ್ತದೆ.

### ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು



೧. **ಎಪಿಗ್ರಾಫಿಯಾ ಕರ್ನಾಟಿಕಾ–೧೦,** ಕೋಲಾರ ಜಿಲ್ಲೆ, ಬಿ.ಎಲ್.ರೈಸ್, ಚಿಂತಾಮಣಿ–೩೫ರ 'ನೆಕ್ಕುನ್ದಿ', ಚಿಂತಾಮಣಿ–೪೦ರ 'ಕಾಕತ್ತಿಯ ಸೀಮೆಯ ಸ್ಥಳ ನೆಕ್ಕುಂದೆ' (ಸಾ.ಶ.೧೪೨೩), ಚಿಂತಾಮಣಿ–೩೬ರ 'ಕುನ್ದಯ್ಯಂ ನೆಕ್ಕುನ್ದಿನಾಡಾಳೆ' (ಸಾ.ಶ.೮೮೫) ಮತ್ತು ಕೋಲಾರ ೨೦೦ರ 'ನೆಕ್ಕುನ್ದಿನಾಡನಿರಿಯಿಮೆನ್ದು ಅಟ್ಟೆ' (ಸಾ.ಶ.೮೯೦) ಎಂಬ ಶಾಸನೋಕ್ತ ಸಾಲುಗಳು ಗಮನೀಯವಾಗಿವೆ.

೨. **ಎಪಿಗ್ರಾಫಿಯಾ ಕರ್ಣಾಟಿಕಾ–೯,** ಬೆಂಗಳೂರು ಜಿಲ್ಲೆ, ಬಿ.ಎಲ್.ರೈಸ್, ಹೊಸಕೋಟೆ–೩೬, ಧರ್ಮೇಶ್ವರ ದೇವಾಲಯ, ಸಾ.ಶ. ೧೦೬೫.

೩. **ಎಪಿಗ್ರಾಫಿಯಾ ಕರ್ನಾಟಿಕಾ–೧೦,** ಕೋಲಾರ ಜಿಲ್ಲೆ, ಬಿ.ಎಲ್.ರೈಸ್, ಬೌರಿಂಗ್‌ಪೇಟೆ–೪, ಬೇತಮಂಗಲ, ಸಾ.ಶ. ೯೫೦.

೪. **ಎಪಿಗ್ರಾಫಿಯಾ ಕರ್ನಾಟಿಕಾ–೯ (ಸಪ್ಲಿ),** ಬೆಂಗಳೂರು ಜಿಲ್ಲೆ, ಬಿ.ಎಲ್.ರೈಸ್, ಹೊಸಕೋಟೆ–೧೯೯, ಬನಹಳ್ಳಿ, ಸಾ.ಶ. ೯೬೧?

೫. **ಎಪಿಗ್ರಾಫಿಯಾ ಕರ್ನಾಟಿಕಾ–೧೦,** ಕೋಲಾರ ಜಿಲ್ಲೆ, ಬಿ.ಎಲ್.ರೈಸ್, ಮುಳಬಾಗಲು–೬೫, ಆವನಿ, ಸಾ.ಶ. ೯೬೧.




**– ಆದಪ್ಪ ಪಾ ಸೋಡಿ**

#159, ಶಿವಗಂಗಾ, ಕರ್ಣಶ್ರೀ ಬಡಾವಣೆಯ 3ನೆಯ ಹಂತ,
ಮೇಡಹಳ್ಳೀ, ವಿರ್‍ಗೋನಗರ ಅಂಚೆ,
ಬೆಂಗಳೂರು–560 049.
ಮೊ : 9880860135

# ನೊಳಂಬ ದೇವಾಲಯಗಳು

ಮೊಸಳೆಯು ಮುಳ್ಳುಗಳನ್ನು ಹೊಂದಿರುವುದರಿಂದ ಅದರ ಬೆನ್ನಮೇಲೆ ಕುಳಿತುಕೊಳ್ಳುವುದು ಕಷ್ಟಕರವಾದುದರಿಂದ ಬಹುಶಃ ಬಳ್ಳಿ ಹೂವುಗಳನ್ನು ಅದರ ಬೆನ್ನಿನ ಮೇಲೆ ಹರಡಿರಲೂಬಹುದು ಎಂದೆನಿಸುತ್ತದೆ. ವರುಣನು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ. ವಾರುಣಿಯು ತನ್ನ ಎಡಗೈಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡಿದ್ದಾಳೆ. ವರುಣ ಮತ್ತು ವಾರುಣಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ.

**ವಾಯು**



ವಾಯು ವಾಯುವ್ಯ ದಿಕ್ಕಿನ ಅಧಿಪತಿ. ಇವನ ವಾಹನ ಜಿಂಕೆ. ಇವನ ಹೆಂಡತಿಯ ಹೆಸರು ಮೋಹಿನಿ. ವಾಯು ಮತ್ತು ಮೋಹಿನಿಯರನ್ನು ಹೊತ್ತಿರುವ ಜಿಂಕೆಯ ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿಂದ ಅದನ್ನು ಜಿಂಕೆಯ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ. ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡ ಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಜಿಂಕೆಯ ಕತ್ತಿನಲ್ಲಿ ಘಂಟಾಹಾರವನ್ನು ಹಾಕಲಾಗಿದೆ. ವಾಯುವು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಇಲ್ಲಿ ಮೋಹಿನಿಯೂ ಸಹ ಕಮಲದ ಮೊಗ್ಗನ್ನು ತನ್ನ ಎಡಗೈಯಲ್ಲಿ ಇಟ್ಟುಕೊಂಡಿದ್ದಾಳೆ. ವಾಯು ಮತ್ತು ಮೋಹಿನಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ. ಆದರೆ ಮೋಹಿನಿಯ ಬಲಗೈ ವಾಯುವಿನ ಶರೀರದಿಂದ ಮುಚ್ಚಲ್ಪಟ್ಟಿದೆ.


**ಕುಬೇರ**

ಕುಬೇರ ಉತ್ತರ ದಿಕ್ಕಿನ ಅಧಿಪತಿ. ಇವನ ವಾಹನ ಕುದುರೆ. ಕೆಲವು ವಿದ್ವಾಂಸರು ಕಲ್ಲೇಶ್ವರ ದೇವಾಲಯದ ಅಷ್ಟದಿಕ್ಪಾಲಕರ ಪಟ್ಟಿಕೆಯಲ್ಲಿರುವ ಕುಬೇರನ ವಾಹನ ಟಗರು ಎಂದು ತಿಳಿಸಿರುತ್ತಾರೆ. ಕೆಲವೊಮ್ಮೆ ಅವನ ವಾಹನಗಳು ಟಗರು ಅಥವಾ ಆನೆಯೂ ಆಗಿರಬಹುದೆಂದು ಅಂಶುವುದ್ ಭೇದಾಗವವು ತಿಳಿಸುತ್ತದೆ ಎಂದು ಗೋಪಿನಾಥರಾಯರು ತಿಳಿಸಿದ್ದಾರೆ. ಇವನ ಹೆಂಡತಿಯ ಹೆಸರು ಹಾರಿತಿ. ಈ ಪಟ್ಟಿಕೆಯಲ್ಲಿ ಕುಬೇರನು ತನ್ನ ಸತಿಯಾದ ಹಾರಿತಿಯೊಡನೆ ತನ್ನ ವಾಹನವಾದ ಕುದುರೆಯ ಮೇಲೆ ನಟರಾಜನ ನೃತ್ಯವನ್ನು ನೋಡಲು ಧಾವಿಸುತ್ತಿದ್ದಾನೆ. ಕುದುರೆಯ ಕತ್ತಿನಲ್ಲಿ ಅತ್ಯಂತ ಅಲಂಕೃತವಾದ ಘಂಟಾಹಾರಗಳು ಮಣಿಹಾರಗಳು. ಕಂಠೀಹಾರಗಳೂ ಇವೆ. ಎಷ್ಟುದರೂ ಕುಬೇರನು ಅತ್ಯಂತ ಶ್ರೀಮಂತ. ಎಲ್ಲಾ ಸಂಪತ್ತಿನ ಒಡೆಯ. ಹಾಗಾಗಿ ಕುಬೇರನ ಕುದುರೆಯೂ ಅಲಂಕೃತವಾಗಿದೆ. ಕುಬೇರ ಮತ್ತು ಹಾರಿತಿಯರು ಕುಳಿತಿರುವ ಕುದುರೆಯ ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿ0ದ ಅದನ್ನು ಅದರ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ, ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡ ಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಕುಬೇರನು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದ್ದು ಅತ್ಯಂತ ಶ್ರೀಮಂತವಾಗಿದೆ. ಇಲ್ಲಿ ಹಾರಿತಿಯೂ ಸಹ ಕಮಲದ ಮೊಗ್ಗನ್ನು ತನ್ನ ಎಡಗೈಯಲ್ಲಿ ಇಟ್ಟುಕೊಂಡಿದ್ದಾಳೆ. ಆದರೆ ಇಂದಿಗೆ ಅದರ ತೊಟ್ಟು ಮಾತ್ರ ಉಳಿದಿದ್ದು ಪದ್ಮವು ಬಹುಶಃ ಬಿದ್ದುಹೋಗಿದೆ. ಬಹುಶಃ ಈ ಪದ್ಮವನ್ನು ಬಿಡಿಯಾಗಿ ಶಿಲ್ಪಿಯ ಕೆತ್ತಿದ್ದನು ಎಂದು ತೋರುತ್ತದೆ. ಕುಬೇರ ಮತ್ತು ಹಾರಿತಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ.



**ಈಶಾನ**

ಈಶಾನನು ಈಶಾನ್ಯದ ದಿಕ್ಕಿನ ಅಧಿಪತಿ. ಇವನು ಶಿವನ ಇನ್ನೊಂದು ಅವತಾರವೇ. ಶಿವನ ವಾಹನ



ಸುಂಕಂ ಗೋವರ್ಧನ
ಬೆಂಗಳೂರು
ಮೊ : 9535762464

ನಂದಿಯಂತೆಯೇ ಈಶಾನನ ವಾಹನವೂ ನಂದಿಯೇ.



ಶಿವನ ಹೆಂಡತಿ ಗಿರಿಜೆ. ಬೇರೆಲ್ಲಾ ದಿಕ್ಪಾಲಕರನ್ನು ಅತ್ಯಂತ ಸರಳವಾಗಿ ಚಿತ್ರಿಸಿರುವ ಈ ಪಟ್ಟಿಕೆಯಲ್ಲಿ ಈಶಾನನ್ನು ಮಾತ್ರ ಅತ್ಯಂತ ವಿಜೃಂಭಣೆಯಿಂದ ಶಿಲ್ಪಿಸಲಾಗಿದೆ. ಎಲ್ಲರಿಗೂ ದ್ವಿಭುಜವನ್ನು ನೀಡಿರುವ ಶಿಲ್ಪಿಯು ಶಿವನಿಗೆ ಮಾತ್ರ ನಾಲ್ಕು ಕೈಗಳನ್ನು ನೀಡಿದ್ದಾನೆ. ಇಲ್ಲಿ ಶಿವನ ವೇಗವನ್ನು ಉದ್ದೀಪನಗೊಳಿಸಲು ನಾಲ್ಕು ಜನ ವಾದ್ಯಗಾರರನ್ನು ಕೂಡ ಶಿಲ್ಪಿಸಲಾಗಿದೆ. ಇದರೊಂದಿಗೆ ನರ್ತನದಲ್ಲಿ ನಿರತರಾಗಿ ತಾಳವನ್ನು ನುಡಿಸುತ್ತಿರುವ ವ್ಯಕ್ತಿಯನ್ನೂ ಇವನೊಂದಿಗೆ ತಾಳದಲ್ಲಿ ಸಹಕರಿಸುತ್ತಿರುವ ಇನ್ನೊಬ್ಬ ವಾದ್ಯಗಾರನನ್ನು ಕೆತ್ತಲಾಗಿದೆ. ಇನ್ನಿಬ್ಬರು ಸ್ತ್ರೀಯರು. ಇವರಲ್ಲಿ ಒಬ್ಬಳು ಕೊಳಲನ್ನೂ ಹಾಗೂ ಇನ್ನೊಬ್ಬಳು ತಬಲವನ್ನೂ ನುಡಿಸುತ್ತಿರುವಂತೆ ತೋರಿಸಲಾಗಿದೆ. ವಿಶೇಷವೆಂದರೆ ಶಿವ ಮತ್ತು ಉಮೆಯನ್ನು ಸ್ವಾಗತಿಸಲು ಬಂದಿರುವ ಗಂಧರ್ವರು ಪುಷ್ಪ ಹಾರಗಳನ್ನು ಶಿವನ ಕೊರಳಿಗೆ ತೊಡಿಸಲು ಧಾವಂತರಾಗಿದ್ದಾರೆ.

ಶಿವ ಮತ್ತು ಶಿವೆಯರನ್ನು ಹೊತ್ತೊಯ್ಯುತ್ತಿರುವ ನಂದಿಯ ಕತ್ತಿಗೆ ಅತ್ಯಂತ ಸೊಗಸಾದ ಘಂಟಾಹಾರವನ್ನು ತೊಡಿಸಲಾಗಿದೆ. ಬೆನ್ನಿಗೆ ಮೆತ್ತನೆಯ ಹಾಸನ್ನು ಕಟ್ಟಿರುವುದರಿಂದ ಅದನ್ನು ನಂದಿಯ ಹೊಟ್ಟೆಗೆ ಒಂದು ಪಟ್ಟಿಕೆಯಿಂದ ಕಟ್ಟಿಹಾಕಲಾಗಿದೆ. ಈ ಮೆತ್ತನೆಯ ಹಾಸು ಸ್ವಲ್ಪ ದೊಡ್ಡದಿರುವುದರಿಂದ ಅದನ್ನು ಸರಿಯಾಗಿ ತಡೆಯಲು ಎಡ ಬಲಗಳಿಗೂ ಒಂದು ಪಟ್ಟಿಕೆಯನ್ನು ತೊಡಿಸಲಾಗಿದೆ. ಶಿವ ಮತ್ತು ಶಿವೆಯರು ಸರ್ವಾಭರಣ ಭೂಷಿತರಾಗಿದ್ದಾರೆ. ಶಿವನು ಜಟಾಮುಕುಟವನ್ನು ಧರಿಸಿದ್ದಾನೆ. ಶಿವನು ಕರ್ಣಕುಂಡಲ, ಯಜ್ಞೋಪವೀತ, ಕಂಠೀಹಾರ, ಕಾಲ್ಕಡಗಗಳನ್ನು ತೊಟ್ಟಿದ್ದಾನೆ. ತಾನು ತೊಟ್ಟಿರುವ ಅಧೋವಸ್ತ್ರವು ಅತ್ಯಂತ ನವುರಾಗಿದೆ. ಶಿವಪಾರ್ವತಿ ಇಬ್ಬರ ಬಲಗೈ ಪತಾಕ ಹಸ್ತದಲ್ಲಿದೆ.

**ಯಕ್ಷರು ಅಥವಾ ಗಂಧರ್ವರು**

ಈ ಅಷ್ಟದಿಕ್ಪಾಲಕರ ಶಿಲ್ಪಗಳು ಮೂರು ಮೂರು ಅಂಕಣಗಳ ನಾಲ್ಕು ನಾಲ್ಕು ಸುತ್ತಿನ ಆವರಣದ ದಿಂಡುಗಳನ್ನು ಒಳಗೊಂಡಿದ್ದು ಅದರ ನಡುವಿನ ಸಂಧಿಗಳು ಸಂಧಿಸುವ ಕೋನಗಳಲ್ಲಿ ಪುಷ್ಪಾಹಾರಗಳನ್ನು ಕೈಯಲ್ಲಿ ಹಿಡಿದು ನಟರಾಜನಿಗೆ ಅರ್ಪಿಸಲೆಂದು ಅವನ ಆನಂದತಾಂಡವವು ಮುಗಿಯುವುದನ್ನೇ ಕಾಯುತ್ತಿರುವ ನಾಲ್ವರು ಗಂಧರ್ವರನ್ನು ಕೆತ್ತಲಾಗಿದೆ. ಇದೊಂದು ಶಿಲ್ಪಿಗಳ ಅತ್ಯಂತ ಚಾಕಚಕ್ಯತೆಯನ್ನು ಪ್ರದರ್ಶಿಸುವ ಕೈಚಳಕವಾಗಿದೆ. ಈ ಗಂಧರ್ವರ ಬೆನ್ನುಗಳಲ್ಲಿ ತಿರುಗುಣಿಗಳನ್ನು ನಿರ್ಮಿಸಿ ಈ ವಿತಾನದಿಂಡುಗಳಲ್ಲಿ ಅಳವಡಿಸಿ ಅದನ್ನು ಕಟ್ಟಿನಿಲ್ಲಿಸಿರುವಂತೆ ತೋರುತ್ತದೆ.



ಗೂಢಮಂಟಪದ ದ್ವಾರಬಂಧ ಕಲ್ಲೇಶ್ವರ ದೇವಾಲಯವನ್ನು ನೊಳಂಬರ ನಿರ್ಮಾಣವೆಂದು ನಾನು ಪ್ರತಿಪಾದಿಸುವ ಹಲವು ಕಾರಣಗಳಲ್ಲಿ ಈ ದೇವಾಲಯದ ಬಾಗಿಲುವಾಡವೂ ಒಂದು. ಕಲ್ಲೇಶ್ವರ ದೇವಾಲಯದ ದ್ವಾರಬಂಧವು ಅತ್ಯಂತ ಸುಂದರವಾಗಿದೆ. ಪಂಚಶಾಖೆಗಳನ್ನು ಹೊಂದಿರುವ ಈ ಬಾಗಿಲುವಾಡದಲ್ಲಿ ಕೆಳಗಡೆ ಸುಮಾರು ಒಂದೂಕಾಲು ಅಡಿಯ ಶೈವ ದ್ವಾರಪಾಲಕರುಗಳನ್ನು ಕೆತ್ತಲಾಗಿದೆ. ಈ ದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಕಾಲುಗಳನ್ನು ಸ್ವಸ್ತಿಕ ಪೃಷ್ಠದಲ್ಲಿ ಇಟ್ಟುಕೊಂಡಿದ್ದಾರೆ. ಕೈಗಳಲ್ಲಿ ಢಮರು, ಗದೆಗಳನ್ನು ಹಿಡಿದುಕೊಂಡಿದ್ದಾರೆ. ಈ ಇಬ್ಬರು ದ್ವಾರಪಾಲಕರ ಮೇಲೆ ವಿದ್ಯಾಧರರು ಹಾರಾಡುತ್ತಿದ್ದಾರೆ.

ಪಂಚಶಾಖೆಗಳಲ್ಲಿ ಎರಡು ಶಾಖೆಗಳು ಅಂದರೆ ಮೊದಲನೆಯ ಹಾಗೂ ಕೊನೆಯ ಶಾಖೆಗಳು ಕಲ್ಪವಲ್ಲಿಯನ್ನು ಎಂದರೆ ಬಳ್ಳಿಗಳ ರಚನೆಯನ್ನು ಹೊಂದಿದೆ. ಈ ಕಲ್ಪವಲ್ಲಿಗಳಲ್ಲಿ ಸಂಗೀತಗಾರರ ಚಿಕಣಿ ಶಿಲ್ಪಗಳಿವೆ. ಗೀತ ಮತ್ತು ನರ್ತನದಲ್ಲಿ ತೊಡಗಿರುವ ಗಂಧರ್ವರ ಶಿಲ್ಪಗಳು ವಿಶೇಷವಾಗಿವೆ. ಈ ಕಲ್ಪವಲ್ಲಿಯಲ್ಲಿ ಕೆಳಗಿನಿಂದ ಗಂಡೊಂದು ಹೆಣ್ಣೊಂದು ಇರುವಂತೆ ಸಂಯೋಜಿಸಲಾಗಿದೆ. ಈ ಕಲ್ಪವಲ್ಲಿ ಶಾಖೆಯ ನಂತರ ರತ್ನಪದಶಾಖೆಯನ್ನು ಹೊಂದಿದೆ. ಈ ಶಾಖೆಯ ನಂತರ ಮೂರನೆಯ ಶಾಖೆಯಾದ ವ್ಯಾಳಮಾಲಾ ಶಾಖೆಯಿದೆ. ಇದಕ್ಕೆ ಹೊಂದಿಕೊಂಡಂತೆ ಪದ್ಮಶಾಖೆಯಿದೆ. ಇದಾದ ನಂತರ ಗೂಢಮಂಟಪದ ದ್ವಾರಬಂಧ ಸ್ತಂಭಶಾಖೆಯಿದೆ. ಬ್ರಹ್ಮಕಾಂತ ಮಾದರಿಯ ಸ್ತಂಭ ಶಾಖೆಯ ಮೇಲೆ ಗಂಗೆ ಮತ್ತು ಯಮುನೆಯರನ್ನು ನೊಳಂಬರ ವಿಶೇಷವಾದ ಹಾರಗಳಲ್ಲಿ ಕೆತ್ತಲಾಗಿದೆ. ಇದರ ನಂತರ ಯಾಳಿಮಾಲಾ ಶಾಖೆಯನ್ನು ಹೊಂದಿದೆ. ಇದರಲ್ಲಿ ಇಕ್ಕೆಲಗಳಲ್ಲೂ ಎಂಟೆಂಟು ಯಾಳಿಗಳನ್ನು ಬಿಡಿಸಲಾಗಿದೆ. ಇದಾದ ನಂತರ ಐದನೆಯದು ರತ್ನಪದ್ಮಶಾಖೆಯನ್ನು ಹೊಂದಿದೆ.

**ಮುಂದುವರೆಯುವುದು......**

# ಇತಿಹಾಸ vs WhatsApp University Stories

ಈಗಿನ ಕಾಲಘಟ್ಟದಲ್ಲಿಯೂ, ಮುಂದೆ ಬರುವ ಯುಗಾಂತರಗಳಲ್ಲಿಯೂ ಇತಿಹಾಸ ಎಂಬುದು ಬಹಳ ಮುಖ್ಯವಾದ ವಿಷಯ. ಯಾವುದೇ? ಸಂಗತಿಯ ವಿಮರ್ಶೆ, ವಿಶ್ಲೇಷಣೆ, ವಿಕಾಸ, ಎಲ್ಲದಕ್ಕೂ ಇತಿಹಾಸ ಅತ್ಯಗತ್ಯ. ಇತಿಹಾಸ ನಮಗೆ ಅದರ ಹುಟ್ಟಿಂದ ಹಿಡಿದು ವರ್ತಮಾನದವರೆಗೂ ತಿಳಿಸಿಕೊಡುತ್ತದೆ. ಎಲ್ಲ ಕ್ಷೇತ್ರಗಳಲ್ಲೂ ಇತಿಹಾಸ ಎಂಬುದು ಮಹತ್ವವಾಗಿದೆ. ಇತಿಹಾಸ ತಿಳಿದರೆ ಮಾತ್ರ ಮುಂದಿನ ಹೆಜ್ಜೆ ಸರಿಯಾಗಿ ಇಡಲು ಸಾಧ್ಯ. ವಿಜ್ಞಾನ, ಮನೋವಿಜ್ಞಾನ, ಖಗೋಳ, ಸಾಮಾಜಿಕ, ವೈದ್ಯಕೀಯ, ರಾಜಕೀಯ, ತಂತ್ರಜ್ಞಾನ, ಶಿಕ್ಷಣ ಇನ್ನೂ ಮುಂತಾದ ಎಲ್ಲದರಲ್ಲಿಯೂ ಇತಿಹಾಸದ ಮೂಲಕ ಹಿನ್ನೋಟ ದೊರೆತು, ಮುನ್ನೋಟದ ಹಾದಿ ತೆರೆದುಕೊಳ್ಳುವ ಅವಕಾಶಗಳ ವೇದಿಕೆಯಾಗುತ್ತದೆ.

ಈ ನಡುವೆ ಏನಾಗಿದೆ ಅಂದರೆ, ಸಂಶೋಧನಾ ನೈಜ್ಯ ಇತಿಹಾಸಗಳು ಜನರಿಗೆ ತಲುಪಿಲ್ಲದ ಕಾರಣ ವಾಟ್ಸಾಪ್. ಯುನಿವರ್ಸಿಟಿಯ ನಕಲಿ ಕಥೆಗಳೆ ಇತಿಹಾಸ ಎಂದು ಜನರ ಮನಸಲ್ಲಿ ಭ್ರಮೆಯ ಬೇರೂರಿ, ಸಮಾಜದ ಸ್ವಾಸ್ತ್ಯವನ್ನು ಹಾಳುಗೆಡುವಲ್ಲಿ ಮಹತ್ತರವಾದ ಪಾತ್ರ ನಿರ್ವಹಿಸಿದೆ. ಇತಿಹಾಸವನ್ನು ಗೇಲಿ ಮಾಡಿ ಕಾಣದ ಭೂತದಂತೆ ನಗುತ್ತಿದೆ. ಇತಿಹಾಸವು ಜಗತ್ತಿನ ಗತಕಾಲದ ಅಧ್ಯಯನವಾಗಿದೆ ಮತ್ತು ಇದು ಸಮಾಜದ ಎಲ್ಲಾ ಅಂಶಗಳನ್ನು ಒಳಗೊಂಡಿದೆ. ಇದು ಹಿಂದಿನ ಘಟನೆಗಳನ್ನು ವಿವರಿಸಲು, ವಿಶ್ಲೇಷಿಸಲು ಮತ್ತು ಪ್ರಶ್ನಿಸಲು ನಿರೂಪಣೆಯನ್ನು ಬಳಸುವ ಶೈಕ್ಷಣಿಕ ವಿಭಾಗವಾಗಿದೆ. ಈ ಘಟನೆಗಳ ಕಾರಣ ಮತ್ತು ಪರಿಣಾಮದ ಮಾದರಿಗಳನ್ನು ಸಹ ಇತಿಹಾಸವು ತನಿಖೆ ಮಾಡುತ್ತದೆ.

ಇತಿಹಾಸವು ಅಧ್ಯಯನವನ್ನು ಒಳಗೊಂಡಿದೆ, ರಾಜಕೀಯ ಬೆಳವಣಿಗೆಗಳು, ಸಾಮಾಜಿಕ ಬೆಳವಣಿಗೆಗಳು, ಆರ್ಥಿಕ ಬೆಳವಣಿಗೆಗಳು, ವೈಜ್ಞಾನಿಕ ಬೆಳವಣಿಗೆಗಳು, ತಾಂತ್ರಿಕ ಬೆಳವಣಿಗೆಗಳು, ವೈದ್ಯಕೀಯ ಬೆಳವಣಿಗೆಗಳು, ಸಾಂಸ್ಕೃತಿಕ ಬೆಳವಣಿಗೆಗಳು, ಬೌದ್ಧಿಕ ಬೆಳವಣಿಗೆಗಳು, ಧಾರ್ಮಿಕ ಬೆಳವಣಿಗೆಗಳು ಮತ್ತು ಮಿಲಿಟರಿ ಬೆಳವಣಿಗೆಗಳು. ಇತಿಹಾಸವು ಹಿಂದಿನ ಘಟನೆಗಳನ್ನು ವಿವರಿಸುತ್ತದೆ ಮತ್ತು ಅವುಗಳನ್ನು ಪ್ರಸ್ತುತ ಮತ್ತು ಭವಿಷ್ಯದ ಘಟನೆಗಳಿಗೆ ತುಲನೆ ಮಾಡುತ್ತದೆ. ನೈಜ್ಯ ಇತಿಹಾಸವನ್ನು ಅಪ್ಪಿಕೊಂಡರೆ ಪ್ರಬುದ್ಧರಾಗಬಹುದು ಭವಿಷ್ಯವನ್ನು ಸುಸ್ಥಿರವಾಗಿ ಕಟ್ಟಿಕೊಳ್ಳಬಹುದಾಗಿದೆ.

ಇತಿಹಾಸವು ಒಂದು ಮೌಲ್ಯವಾದ ಅಧ್ಯಯನ ವಾಗಿದೆ. ನಿರೂಪಣೆಗಳನ್ನು ನಿರ್ಮಿಸಲು ಪುರಾವೆಗಳನ್ನು ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಮೂಲಕ ಏನಾಯಿತು ಎಂಬುದನ್ನು ಇದು ಪರಿಕಲ್ಪನೆ ಮಾಡುತ್ತದೆ ಮತ್ತು ವಿವರಿಸುತ್ತದೆ. ಈ ನಿರೂಪಣೆಗಳು ಘಟನೆಗಳು ಹೇಗೆ ತೆರೆದುಕೊಂಡವು ಎಂಬುದನ್ನು ಮಾತ್ರವಲ್ಲದೆ ಅವು ಏಕೆ ಸಂಭವಿಸಿದವು ಮತ್ತು ಯಾವ ಸಂದರ್ಭಗಳಲ್ಲಿ ಸಂಬಂಧಿತ ಹಿನ್ನೆಲೆಯು ಪರಿಸ್ಥಿತಿಗಳು ಮತ್ತು ಸಾಂದರ್ಭಿಕ ಕಾರ್ಯವಿಧಾನಗಳ ವಿವರಣೆಯನ್ನು ಒದಗಿಸುತ್ತದೆ. ಇತಿಹಾಸವು ಐತಿಹಾಸಿಕ ಘಟನೆಗಳ ಅರ್ಥವನ್ನು ಮತ್ತು ಅವುಗಳನ್ನು ಪ್ರೇರೇಪಿಸುವ ಆಧಾರವಾಗಿರುವ ಮಾನವ ಉದ್ದೇಶಗಳನ್ನು ಸಹ ಪರಿಶೀಲಿಸುತ್ತದೆ. ಇತಿಹಾಸ ಕಲಾವಿಭಾಗದ ಪ್ರಮುಖ ವಿಷಯವಾಗಿ ಹೊರ ಹೊಮ್ಮಿದರೂ ಕೂಡ ಅದು ಆ ವಿಭಾಗಕ್ಕೆ ಸ್ಥಿಮಿತಗೊಂಡಿಲ್ಲ. ತನ್ನ ಛಾಪನ್ನು ಎಲ್ಲ ವಿಭಾಗಗಳಲ್ಲಿ ಮೂಡಿಸಿ, ತನ್ನದೆಯಾದ ಕೊಡುಗೆಯನ್ನು ಎಲ್ಲಾ ಕ್ಷೇತ್ರಗಳಿಗೆ ಕೊಡುಗೆಯಾಗಿ ನೀಡಿದೆ.

ಈ ಇತಿಹಾಸದ ಬೆನ್ನಟ್ಟಿ ಹೋಗುವ ಇತಿಹಾಸಕಾರರ ಬದ್ದತೆ, ತ್ಯಾಗ, ಪರಿಶ್ರಮ, ಕೊಡುಗೆ ಅತ್ಯಮೂಲ್ಯವಾದದ್ದು. ಅವರ ಶೋಧಿನೆಗಳು, ಸಂಶೋಧನೆಗಾಳಾಗಿ ಹೊರಹೊಮ್ಮುವ ಮಧ್ಯದಲ್ಲಿ ಅವರ ವೇದನೆಗಳ ಅರಿಯುವಲ್ಲಿ ಸಮಾಜ ಎಡವಿದರೆ. ವಾಟ್ಸಾಪ್ ಯುನಿವರ್ಸಿಟಿಯ ನಕಲಿ ಕಥೆಗಳಿಂದ ಇತಿಹಾಸಕ್ಕೂ, ಇತಿಹಾಸಕಾರರಿಗೂ ದೊಡ್ಡ ಅಪಮಾನ ಮಾಡುವ ಕುಹಕವಾಗಿದೆ. ಕೆಲವು ನವ ಮಾಧ್ಯಮದವರು ಇತಿಹಾಸಗಳಿಂದ ಇತಿಹಾಸಗಳನ್ನು ಪ್ರತ್ಯೇಕಿಸಲು ವ್ಯಾಖ್ಯಾನಾತ್ಮಕ ಮತ್ತು ವಿವರಣಾತ್ಮಕ ಅಂಶಗಳ ಮೇಲೆ ಕೇಂದ್ರೀಕರಿಸುತ್ತಾರೆ, ವಾದಿಸುತ್ತಾರೆ, ಇತಿಹಾಸಗಳು ಕೇವಲ ಕಾಲಾನುಕ್ರಮದಲ್ಲಿ ಘಟನೆಗಳನ್ನು ಪಟ್ಟಿಮಾಡುತ್ತವೆ ಎಂದು ವಾದಿಸುತ್ತಾರೆ, ಆದರೆ ಇತಿಹಾಸಗಳು ಅವುಗಳ ಕಾರಣಗಳು, ಸಂದರ್ಭಗಳು ಮತ್ತು



**ವಿನಯ್ ಆದಿಹಳ್ಳಿ**
ಶಿವಶಕ್ತಿ ಸಂಗಮ, ಆದಿಹಳ್ಳಿ,
ಅರಸೀಕೆರೆ ತಾಲ್ಲೂಕು, ಹಾಸನ
ಮೊ : 9901209374

ಪರಿಣಾಮಗಳ ಸಮಗ್ರ ತಿಳುವಳಿಕೆಯನ್ನು ಹೊಂದಿವೆ. ಇತಿಹಾಸವು ಪೂರ್ವ ಇತಿಹಾಸವನ್ನು ಒಳಗೊಂಡಿರುವ ವಿಶಾಲ ವ್ಯಾಪ್ತಿಯನ್ನು ಹೊಂದಿದೆ, ಇದು ಹಲವಾರು ದಶಲಕ್ಷ ವರ್ಷಗಳ ಹಿಂದಿನ ಮಾನವ ಮೂಲದಿಂದ ಪ್ರಾರಂಭವಾಗುತ್ತದೆ.

ಇತಿಹಾಸವು ಎಲ್ಲ ಕ್ಷೇತ್ರಗಳನ್ನು ಒಳಗೊಂಡ ವಿಜ್ಞಾನವಾಗಿದೆ. ಇತಿಹಾಸದ ಉದ್ದೇಶ, ಮೌಲ್ಯದ ಬಗ್ಗೆ ವಿವಿಧ ಸಲಹೆಗಳನ್ನು ನೀಡಲಾಗಿದೆ. ಕೆಲವು ಇತಿಹಾಸಕಾರರು ಅದರ ಪ್ರಾಥಮಿಕ ಕಾರ್ಯವು ಹಿಂದಿನ ಬಗ್ಗೆ ಸತ್ಯದ ಶುದ್ಧ ಆವಿಷ್ಕಾರವಾಗಿದೆ. ಆದರೆ ಬಾಹ್ಯ ಉದ್ದೇಶಗಳು, ಸಿದ್ಧಾಂತ ಅಥವಾ ರಾಜಕೀಯದೊಂದಿಗೆ ಸಂಬಂಧ ಹೊಂದಿದ್ದು, ಹಿಂದಿನದನ್ನು ವಿರೂಪಗೊಳಿಸುವ ಮೂಲಕ ಐತಿಹಾಸಿಕ ಸಂಶೋಧನೆಯ ನಿಖರತೆಯನ್ನು ಹಾಳುಮಾಡುತ್ತದೆ. ಈ ಪಾತ್ರದಲ್ಲಿ, ಇತಿಹಾಸವು ವಾಸ್ತವಿಕ ಬೆಂಬಲವನ್ನು ಹೊಂದಿರದ ಸಾಂಪ್ರದಾಯಿಕ ಪುರಾಣಗಳಿಗೆ ಸವಾಲು ಹಾಕುತ್ತದೆ ಮತ್ತು ತರ್ಕಕ್ಕೆ ನಿಲುಕದ ಎಲ್ಲಾ ಕಟ್ಟು ಕಥೆಗಳನ್ನು ಸೋಲುಸುತ್ತದೆ.

ಇತಿಹಾಸವನ್ನು ಇತಿಹಾಸವಾಗಿ ನೋಡುವ ಮನಸ್ಸು ಬೇಕಾಗುತ್ತದೆ. ಆ ಮನಸ್ಸು ಪೂರ್ವಗ್ರಹ ಪೀಡಿತವಾಗದೆ ವಿಶ್ವ ಮಾನವವತೆ ಒಪ್ಪುವ ಮನಸ್ಸಾಗಿದ್ದರೆ ಮಾತ್ರ ಇತಿಹಾಸ ತಿಳಿಯಬಹುದು. ವಾಟ್ಸಾಪ್ ಯುನಿವರ್ಸಿಟಿಯನ್ನು ಧಿಕ್ಕರಿಸುವ ಗಟ್ಟಿತನ ಮೂಡುವುದು. ವರ್ತಮಾನದ ಪ್ರಜ್ಞೆ ಜಾಗರೂಕವಾಗಿ ಭವಿಷ್ಯದಲ್ಲಿ ಸುವ್ಯವಸ್ಥೆಯನ್ನು ಕಟ್ಟಿಕೊಳ್ಳಬಹುದಾಗಿದೆ.

---

ಬದುಕಬೇಕೆ ಹೀಗೆ, ಬಂದರಂತೆ ಹೋದರಂತೆ ಎಂಬಂತೆ ಯಾರೊಬ್ಬರಿಗೂ ತಿಳಿಯದಂತೆ ಬಂಧುಗಳು ಬಂದಂತೆ ಬಿಟ್ಟಿ ಉಪದೇಶಗಳ ಕೊಟ್ಟು ಹೋದಂತೆ, ದುಡ್ಡು ಮಾಡಿದವಂತೆ, ಮನೆಯೊಂದ ಕಟ್ಟಿದವಂತೆ ಕೊನೆಗೆ ಬಿಟ್ಟು ಹೋದವಂತೆ ಒಟ್ಟಾರೆ ಜಾಲಿ ಮರದಂತೆ ಯಾರೊಬ್ಬರಿಗೂ ನೇರಳಾಗದಂತೆ ಬದುಕಬೇಕು ಹೀಗೆ, ಇದ್ದರಂತೆ, ಸಾಧಿಸಿದರಂತೆ, ಗೆದ್ದರಂತೆ, ಗೆಲ್ಲಿಸಿದರಂತೆ ಎಂಬಂತೆ ಸೂರ್ಯನಂತೆ ಏನನ್ನು ಪಡೆಯದೆ ಬೆಳಕು ನೀಡಿದಂತೆ ಹರೀಶಡ್ವರ್ಗಗಳನ್ನು ನಿಗ್ರಹಿಸಿ ಸಾಧಿಸಿದ ಬಸವ ಶರಣರಂತೆ ಒಟ್ಟಾರೆ ಸ್ವಾರ್ಥಿಗಳ ಮಧ್ಯೆ ಬಡ ವಿದ್ಯಾರ್ಥಿಗಳ ಬದುಕು ಬೆಳಗಿಸಿದ ಕಂಬಿ ಸಿದ್ಧರಾಮರಂತೆ.

**– ಅಕ್ಷತ್‌ಕುಮಾರ್ ಮಲಗಲಕೆರೆ**
ಕಂಬಿ ಸಿದ್ಧರಾಮಣ್ಣ ವಿದ್ಯಾರ್ಥಿನಿಲಯ, ಮೈಸೂರು.

# ಶ್ರೀಮತಿ ಪುಷ್ಪ ಮೋಹನ್



ಶ್ರೀಮತಿ ಪುಷ್ಪರವರು 2020ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರಿಸರ ವಿಜ್ಞಾನ ವಿಭಾಗದಲ್ಲಿ ವಾಟರ್ ಕ್ವಾಲಿಟಿ ಅಂಡ್ ಇಟ್ಸ್ ಸೂಟಬಿಲಿಟಿ ಇನ್ ಅಗ್ರಿಕಲ್ಚರಲ್ ಲ್ಯಾಂಡ್ಸ್ ಆಫ್ ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಡಿಸ್ಟ್ರಿಕ್ಟ್, ಕರ್ನಾಟಕ ಎಂಬ ಶೀರ್ಷಿಕೆಯಲ್ಲಿ ಡಾ. ಕೆ.ಎಲ್.ಪ್ರಕಾಶ್‌ರವರ ಮಾರ್ಗದರ್ಶನದಲ್ಲಿ ಪ್ರಬಂಧವನ್ನು ಮಂಡಿಸಿ ಪಿ.ಎಚ್.ಡಿ. ಪದವಿಯನ್ನು 2025ರಲ್ಲಿ ಪಡೆದುಕೊಂಡಿದ್ದಾರೆ.

ಶ್ರೀಮತಿ ಪುಷ್ಪರವರು ನೊಳಂಬ ಲಿಂಗಾಯತ ಸಮಾಜದ ಶ್ರೀಮತಿ ಹೇಮಲತಾ ಶ್ರೀ ಲೋಕೇಶ್ ಕೆ.ಎಸ್,. ಇವರ ಪುತ್ರಿಯಾಗಿದ್ದು, ಕೊಡಲಾಗರ ಗ್ರಾಮ, ಚಿಕ್ಕನಾಯಕನ ಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆಯವರಾಗಿದ್ದಾರೆ.

ಶ್ರೀಮತಿ ಪುಷ್ಪರವರು 2011ರಲ್ಲಿ ಎಂ.ಎಸ್ಸಿ. ಬಯೋಕೆಮಿಸ್ಟ್ರಿ ಪದವಿ ಮುಗಿಸಿ ಖಾಸಗಿ ಕಂಪನಿ ಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇವರು 2014ರಲ್ಲಿ ದಾಸಿಹಳ್ಳಿ ಮೋಹನ್‌ರವರನ್ನು ವಿವಾಹವಾಗಿದ್ದು, ಮಗ ಹಿತಾರ್ಥನೊಂದಿಗೆ, ಸಂಸಾರದ ಜೊತೆ ಜೊತೆಗೆ ಸಂಶೋಧನೆ ಕೈಗೊಂಡು ಯಶಸ್ವಿಯಾಗಿ ಪೂರೈಸಿದ್ದಾರೆ ಮತ್ತು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ 2023ರಲ್ಲಿ ಶ್ರೀನಗರ, ಜಮ್ಮುಕಾಶ್ಮೀರದ ವಿಶ್ವವಿದ್ಯಾನಿಲಯ ದಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ 'ಅತ್ಯುತ್ತಮ ಸಂಶೋಧನಾ ವಿದ್ಯಾರ್ಥಿನಿ' ಎಂಬ ಪ್ರಶಸ್ತಿ ಲಭಿಸಿದೆ.

ಶ್ರೀಮತಿ ಪುಷ್ಪರವರಿಗೆ ನೊಳಂಬವಾಣಿ ಪತ್ರಿಕಾ ಬಳಗ ಮತ್ತು ನೊಳಂಬ ಲಿಂಗಾಯತ ಸಂಘದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.



# ಕನ್ನಡ ಚಿತ್ರರಂಗದ ಅದ್ಭುತ ಪ್ರತಿಭೆ ಮಂಜುಳಾ

ಕನ್ನಡ ಚಿತ್ರರಂಗವನ್ನು ಸುಮಾರು ಎರಡು ದಶಗಳ ಕಾಲ ತನ್ನ ಅಸಾಮಾನ್ಯ ವಾದ ಪ್ರತಿಭೆ, ಚಟ-ಪಟ ಮಾತಿನಿಂದ ಹಾಸ್ಯ ಮಾಡುತ್ತಾ, ಚುರುಕಿನ ಭಾವ ಲಹರಿಯಲ್ಲಿ ಕನ್ನಡಿಗರನ್ನು ಮಂತ್ರ ಮುಗ್ಧವಾಗಿಸಿದ ಮಂಜುಳಾ ಕನ್ನಡ ನಾಡಿನ ಹೆಮ್ಮೆ ಎಂದೇ ಹೇಳಬಹುದು. ಆಕೆ ಹುಟ್ಟಿ ಬೆಳೆದು ತನ್ನ ಓದು, ಕಲೆ, ನಾಟಕ, ನೃತ್ಯ ಕಲಿತು ಮುಂದಿನ ಯಶಸ್ಸಿನ ಪಯಣಕ್ಕೆ ಪ್ರಾರಂಭವಾಗಿದ್ದು ತುಮಕೂರು ಜಿಲ್ಲೆ ಹೊನ್ನೇನಹಳ್ಳಿ ಎಂಬ ಊರು. ತುಮಕೂರಿಗೆ ಕೆಲವೇ ಕಿ.ಲೋ. ಮೀಟರ್ ದೂರದಲ್ಲಿರುವ ಈ ಊರು ಈಗ ತುಮಕೂರಿನ ಒಂದು ಭಾಗವಾಗಿ ಬೆಳೆದಿದೆ.

ನೊಳಂಬ ಲಿಂಗಾಯತ ಸಮಾಜಕ್ಕೆ ಸೇರಿದ ಚಿತ್ರನಟಿ ಮಂಜುಳಾ ಅವರ ತಂದೆ ಎಂ.ಎಚ್.ಶಿವಣ್ಣ. ತಾಯಿ. ದೇವಮ್ಮ. ತಂದೆ ಪೊಲೀಸ್ ಇಲಾಖೆಯಲ್ಲಿ ಸಬ್ಇನ್ಸ್‌ಪೆಕ್ಟರ್ ಆಗಿದ್ದವರು. ಇವರಿಗೆ ಮೂರು ಹೆಣ್ಣು ಮಕ್ಕಳು. ಇಬ್ಬರು ಗಂಡು ಮಕ್ಕಳು. ಐವರು ಮಕ್ಕಳಲ್ಲಿ ಮಂಜುಳಾ ಮೊದಲನೆಯವರು. 1951 ನವೆಂಬರ್ 8ರಂದು ಜನಿಸಿದ ಈಕೆ ಬಾಲ್ಯದಿಂದಲೇ ನೃತ್ಯ, ನಾಟಕಗಳಲ್ಲಿ ಆಸಕ್ತಿ ಹೊಂದಿದ್ದವರು. ತಮ್ಮ ವಿದ್ಯಾಭ್ಯಾಸವನ್ನು ತುಮಕೂರಿನಲ್ಲಿ ಮುಗಿಸಿದರು. ಮಂಜುಳಾ ಬಾಲಕಿಯಾಗಿದ್ದಾಗಲೇ ಯಾರಿಗೂ ಹೆದರದೆ ತನಗೆ ಬೇಕೆಂದು ಅಪೇಕ್ಷಿಸಿದ್ದನ್ನು ತಾನೇ ಸಾಧಿಸಿಕೊಳ್ಳುವ, ಮಾತಿನಲ್ಲಿ ಯಾರಿಗೂ ಬಗ್ಗದ ದಿಟ್ಟತನ ಧೈರ್ಯದ ಸ್ವಭಾವ. ಅಂದಿನ ಕಾಲದಲ್ಲಿ ಹುಡುಗಿಯರಿಗೆ ಸೀಮಿತವಾಗಿದ್ದ ಕಟ್ಟುಪಾಡು ಗಳನ್ನು ಉಲ್ಲಂಘಿಸಿ ಹೊರಗಿನ ಪ್ರಪಂಚಕ್ಕೆ ತಮ್ಮ ಪಾದರ್ಪಣೆ ಮಾಡಿದರು. ವಿದ್ಯಾಭ್ಯಾಸದ ಅವಧಿಯಲ್ಲೇ ನಾಟಕ, ನೃತ್ಯ, ಸಿನಿಮಾ ಇವೆಲ್ಲಾ ಇವರ ಇಷ್ಟದ ಕ್ಷೇತ್ರವಾಯಿತು. ಅವರ ಮನಸ್ಸು ಅಷ್ಟೇ ಮೃದು. ಕಷ್ಟದಲ್ಲಿರುವವರಿಗೆ, ತನ್ನ ಸಂಸಾರಕ್ಕೆ ಬಹಳಷ್ಟು ಆರ್ಥಿಕ ಬೆಳವಣಿಗೆಗೆ ಇವರ ಸಹಕಾರ ಬಹಳವಾಗಿತ್ತು.

ಕನ್ನಡ ಚಿತ್ರರಂಗವನ್ನು 1966ರಲ್ಲಿ ಬಾಲ ನಟಿಯಾಗಿ ತಮ್ಮ 11ನೇ ವರ್ಷದಲ್ಲಿ ಬಣ್ಣ ಹಚ್ಚಿಕೊಂಡು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿ 'ಮನೆ ಕಟ್ಟಿನೋಡು' ಚಿತ್ರದಲ್ಲಿ ಮೊದಲಿಗೆ ಕಾಣಿಸಿಕೊಂಡರು. ನಂತರ 'ಪದವೀಧರ' ಜಯಂತಿಯವರ ಜೊತೆ 'ಎರಡು ಮುಖ' ಚಿತ್ರದಲ್ಲಿ ನಟಿಸಿದರು. ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ನಾಟಕ, ನೃತ್ಯ, ಭರತನಾಟ್ಯ, ಸಂಗೀತ ಕಲೆಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದು ಇವರು ರಂಗ ಪ್ರವೇಶ ಮಾಡಿ ವೇದಿಕೆಗಳಲ್ಲಿ ತಮ್ಮ ಅಭಿನಯವನ್ನು ಕೊಡುತ್ತಿದ್ದರು. ಭರತನಾಟ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ ಇವರು ಹಲವು ನೃತ್ಯ ರೂಪಕಗಳ ಪ್ರದರ್ಶನಗಳನ್ನು ನೀಡಿದ್ದರು. ಇದೆಲ್ಲ ಇವರು ಸಿನಿಮಾ ಜಗತ್ತಿನಲ್ಲಿ ಬಹಳಷ್ಟು ಹೆಸರು ಮಾಡುವುದಕ್ಕೆ ಪೂರ್ವ ತಳಹದಿ ಯಾಗಿತ್ತು. ನಂತರ 'ಮನುಷ್ಯ' ಎಂಬ ಚಿತ್ರದಲ್ಲಿ ಮೊದಲಿಗೆ ನಟಿಸಿ ತಮ್ಮ ಅಭಿನಯದಿಂದ ಜನರ ಮೆಚ್ಚುಗೆ ಗಳಿಸಿದರು. ಕನ್ನಡ ಚಿತ್ರರಂಗ ಪ್ರವೇಶಿಸುವುದಕ್ಕೂ ಮೊದಲು ಈಕೆ ಪ್ರಭಾತ್ ನಾಟಕತಂಡದಲ್ಲಿ ಸ್ಥಳೀಯ ನಾಟಕಗಳಲ್ಲಿ ತಮ್ಮ ನಟನಾಕಲೆಯನ್ನು ಪ್ರಾರಂಭ ಮಾಡಿದ ಇವರು ನಾಯಕ ನಟಿಯಾಗಿ ಕಾಣಿಸಿಕೊಂಡಿದ್ದು 1972ರಲ್ಲಿ 'ಯಾರ ಸಾಕ್ಷಿ' ಎಂಬ ಚಿತ್ರದಲ್ಲಿ ಆಗ ಅವರ ವಯಸ್ಸು 18 ಆಗಿತ್ತು. ಮಂಜುಳಾ ತಮ್ಮ ಸುಂದರ ಮುಗ್ಧಭಾವದ ಸೌಂದರ್ಯ, ಚಂಚಲ ಕಣ್ಣ್ ನೋಟದಿಂದ, ಚುರುಕಿನ ಹರಳು ಉರಿದಂತೆ ಮಾತಾಡುವ ತಮ್ಮ ದೇಸಿ ಸೊಬಗಿನ ಮಾತುಗಾರಿಕೆಯಿಂದ ಕನ್ನಡ ಚಿತ್ರರಂಗಕ್ಕೆ ಬಹು ಅಪೇಕ್ಷಿತ ಬೇಡಿಕೆಯ ನಟಿಯಾಗಿ ಬೆಳೆದರು.

ಕನ್ನಡ ಸಿನಿಮಾ ಜಗತ್ತಿನಲ್ಲಿ ತನ್ನ ಅಪ್ರತಿಮ ಅಭಿನಯದಿಂದ ಸು.70-80 ದಶಕದಲ್ಲಿ ಮಂಜುಳಾ ನಟಿಸಿದ ಚಿತ್ರಗಳಿಗೆ ಜನರನ್ನು ಹೆಚ್ಚು ಆಕರ್ಷಿಸುವ ಶಕ್ತಿ ಇತ್ತು. ತನ್ನ ಅಭಿನಯ ಕಲೆಯಿಂದ ಚಿಕ್ಕವಯಸ್ಸಿನಲ್ಲೇ ಕಡಿಮೆ ಅವಧಿಯಲ್ಲಿ ಅತಿಹೆಚ್ಚು ಸಿನಿಮಾಗಳಲ್ಲಿ ನಟಿಸಿದ ಅಪ್ರತಿಮ ಪ್ರತಿಭೆ ಎಂದೇ ಹೇಳಬಹುದು. ಬಹಳ ಬೇಗ ಸಿನಿಮಾದಲ್ಲಿ ನಾಯಕಿಯಾಗುವ ಪಾತ್ರಗಳು ಬಂದವು. ಸಿನಿಮಾದಲ್ಲಿ ಎರಡು ರೀತಿಯಲ್ಲಿ ನಾಯಕಿಯರು ಕಾಣಿಸಿಕೊಳ್ಳುತ್ತಾರೆ. ಒಂದು ನಾಯಕಿಯಾಗಿ ಪ್ರಧಾನ ಪಾತ್ರದಲ್ಲಿ ಕಾಣಿಸುವುದು ಮತ್ತೊಂದು ನಾಯಕರ ಜೊತೆಯಾಗಿ ಎರಡನೇ ಪಾತ್ರವಾಗಿ ಮಿಂಚುವುದು. ಅದರಲ್ಲಿ ಮಂಜುಳಾರವರು ನಾಯಕ ನಟರಿಗೆ



**ಸುಶೀಲಾ ಸದಾಶಿವಯ್ಯ**
'ಪ್ರಣವಂ' ಟೂಡಾಕಛೇರಿ ಹಿಂಭಾಗ
1ನೇ ಬ್ಲಾಕ್, 3ನೇ ಮೈನ್,
ಕುವೆಂಪುನಗರ, ತುಮಕೂರು.
ಮೊ : 7019843776

ಪ್ರಧಾನ್ಯತೆಗಳು ಇದ್ದ ಚಿತ್ರಗಳಲ್ಲೂ ಅವರಿಗೆ ಸರಿ ಸಮವಾಗಿ ಅಷ್ಟೇ ಸಮ ಮಹತ್ವದಲ್ಲಿ ನಟಿಸಿದ ಅಪರೂಪದ ನಟಿ ಮಂಜುಳಾ ಒಬ್ಬರೇ.

ಸಿನಿಮಾರಂಗಕ್ಕೂ ಬರುವ ಮೊದಲು ಪ್ರಭಾತ್ ನಾಟಕತಂಡದಲ್ಲಿ ಮಂಜುಳಾ ಅವರ ಅಭಿನಯ ಕಂಡ ಪಾರ್ವತಮ್ಮ ರಾಜ್‌ಕುಮಾರ್ ತಮ್ಮದೇ ಚಿತ್ರ ನಿರ್ಮಾಣದ 'ಮೂರೂವರೆ ವಜ್ರಗಳು' ಚಿತ್ರದಲ್ಲಿ ಮಂಜುಳಾಗೆ ನಾಯಕಿ ಪಾತ್ರದಲ್ಲಿ ನಟಿಸುವ ಅವಕಾಶ ಮಾಡಿಕೊಟ್ಟರು. 1973ರಲ್ಲಿ ತೆರೆಕಂಡು ಮಂಜುಳಾರವರ ಭಾಗ್ಯದ ಬಾಗಿಲನ್ನು ತರೆಯಿತು ಎಂದೇ ಹೇಳಬಹುದು. ರಾಜಕುಮಾರ್ ಜೊತೆಯಲ್ಲಿ ಮಾಡಿದ ಈ ಸಿನಿಮಾದಿಂದ ಕನ್ನಡ ಚಿತ್ರರಂಗದಲ್ಲಿ ಇವರಿಗೆ ಕೀರ್ತಿ, ಪ್ರಚಾರ ಉನ್ನತ ಸ್ಥಾನಮಾನ ಲಭ್ಯವಾಯಿತು. ನಂತರ ಬಹಳಷ್ಟು ಸಿನಿಮಾಗಳಲ್ಲಿ ಅಭಿನಯಿಸುವ ಅವಕಾಶ ಪಡೆದ ಮಂಜುಳಾ ಹೆಚ್ಚು ಹೆಚ್ಚು ಸಿನಿಮಾಗಳು ಇವರನ್ನು ಹುಡುಕಿಕೊಂಡು ಬಂದವು. ಬಹು ಬೇಡಿಕೆಯ ನಟಿಯಾಗಿ ಬೆಳೆದು ಅಂದಿನ ಚಿತ್ರರಂಗದ ಎಲ್ಲಾ ಪ್ರಮುಖ ನಟರ ಜೊತೆ ಮಾಡುವ ಅವಕಾಶಗಳು ಒದಗಿಬಂದವು. ಅವರಿಗೆ ಹೆಚ್ಚು ಹೆಸರು ತಂದುಕೊಟ್ಟ ಸಿನಿಮಾಗಳು 1974 ನಂತರದಲ್ಲಿ 'ಎರಡು ಕನಸು', 'ಸಂಪತ್ತಿಗೆ ಸವಾಲ್', 'ವಸಂತ ಲಕ್ಷ್ಮಿ', 'ಮಯೂರ', 'ಭಕ್ತಕುಂಬಾರ', 'ಶ್ರೀನಿವಾಸ ಕಲ್ಯಾಣ', 'ದಾರಿತಪ್ಪಿದ ಮಗ', 'ನಿನಗಾಗಿ ನಾನು', 'ಉಷಾಸ್ವಯಂವರ', 'ನಿರೀಕ್ಷೆ', 'ಭಲೇ ಹುಡುಗ', 'ಸೊಸೆ ತಂದ ಸೌಭಾಗ್ಯ', 'ರುದ್ರಿ', 'ಗಲಾಟೆ ಸಂಸಾರ', 'ಪಟ್ಟಣಕ್ಕೆ ಬಂದ ಪತ್ನಿಯರು' ಇನ್ನೂ ಮುಂತಾದವು. ರಾಜಕುಮಾರ್, ವಿಷ್ಣುವರ್ಧನ್, ಅಂಬರೀಷ್, ರಜನಿಕಾಂತ್, ರಾಜೇಶ್ ಅವರುಗಳ ಜೊತೆಯಲ್ಲಿ ಪ್ರಸಿದ್ಧ ಬ್ಯಾನರ್‌ಗಳ ಅಡಿಯಲ್ಲಿ, ಉತ್ತಮ ಕಥೆ, ಪ್ರಸಿದ್ಧ ನಿರ್ದೇಶಕರ ಸಿನಿಮಾಗಳಲ್ಲಿ ನಟಿಸಿ ತಮ್ಮ ಶ್ರೇಷ್ಠ ಅಭಿನಯದ ಛಾಪನ್ನು ಮೂಡಿಸಿದರು. ಶ್ರೀನಾಥ ಜೊತೆಯ ಮಂಜುಳಾ ಅಭಿನಯ ಅಂದು ಕನ್ನಡ ಚಿತ್ರರಂಗದ ಯಶಸ್ವಿ ಜೋಡಿಯಾಗಿತ್ತು. ಅತಿಹೆಚ್ಚು ಸಿನಿಮಾಗಳಲ್ಲಿ ಶ್ರೀನಾಥ್ ಜೊತೆ ಮಾಡಿರುವುದು ಮಂಜುಳಾ ಅವರ ವಿಶೇಷ. ಶಂಕರ್‌ನಾಗ್ ಅವರ ಜೊತೆ ಆಕ್ಷನ್ ಸಿನಿಮಾ 'ಸೀತಾರಾಮ' ಚಿತ್ರದ ಅವರ ನಟನೆ ಮರೆಯುವ ಹಾಗಿಲ್ಲ. ಸಂಪತ್ತಿಗೆ ಸವಾಲ್ ಚಿತ್ರದ ದುರ್ಗಿಯ ಪಾತ್ರ ಅವರಿಗೆ ಹೆಚ್ಚು ಯಶಸ್ಸನ್ನು ತಂದುಕೊಟ್ಟ ಪಾತ್ರ. ಅವರು ಬಜಾರಿ ಪಾತ್ರಗಳನ್ನು ನಿರ್ವಹಿಸುವಾಗಲೂ ಆ ಪಾತ್ರಗಳಲ್ಲಿ ಅವರು ಬೆರೆಸುತ್ತಿದ್ದ ಹಿತಮಿತವಾದ ಗಡಸುತನ, ಹಾಸ್ಯ ಪ್ರವೃತ್ತಿ, ಸೂಕ್ಷ್ಮ ಸ್ತ್ರೀ ಸಂವೇದನೆ, ಮುಗ್ಧತೆ, ಮುಖಭಾವದ ಅಭಿವ್ಯಕ್ತಿ ಇವೆಲ್ಲಾ ಒಂದಕ್ಕೊಂದು ಪೂರಕವಾಗಿ ಬೆರೆತ ಬಗೆ ವಿಶಿಷ್ಟವಾದದ್ದು. ಕನ್ನಡವನ್ನೂ ಸೇರಿ ಹಲವು ಭಾಷೆಗಳಲ್ಲಿ ಮಂಜುಳಾ ಅವರು ನಿರ್ವಹಿಸಿದ ಇಂತಹ ಪಾತ್ರಗಳ ಪುನರಾವರ್ತನೆಯ ಪ್ರಯತ್ನಗಳು ಅಲ್ಲಲ್ಲಿ ನಡೆದವಾದರೂ ಅದು ಇನ್ಯಾರಲ್ಲೂ ಇಷ್ಟು ಹದವಾದ ಸಂಮಿಶ್ರತೆಯಲ್ಲಿ ಅದು ಕಂಗೊಳಿಸಲಿಲ್ಲ.

ಸೊಬಗಿನ ಕಂಗಳ ಸುಂದರಿಯಾಗಿ, ವಿವಿಧ ಪಾತ್ರಗಳ ಅಭಿನಯವನ್ನು ಸುಲಲಿತವಾಗಿ ನಿರ್ವಹಿಸುವ ಚತುರತೆಯಿಂದ ಕಂಗೊಳಿಸಿದ ಮಂಜುಳಾ ಅವರು ಕಾದಂಬರಿ ಅಧಾರಿತ ಮತ್ತು ಭಾವಪೂರ್ಣ ಪಾತ್ರಗಳಲ್ಲಿ ಸಹಾ ಮನೋಜ್ಞ ಅಭಿನಯ ನೀಡಿ ಪ್ರಸಿದ್ಧರಾಗಿದ್ದರು. ಅವರ 'ಬೆಸುಗೆ', 'ಸವತಿಯ ನೆರಳು', 'ದೀಪಾ', 'ದೇವರಗುಡಿ', 'ಕುಂಕುಮ ರಕ್ಷೆ', 'ನಿನಗಾಗಿ ನಾನು', 'ಮಯೂರ' ಮುಂತಾದ ಚಿತ್ರಗಳು ಪ್ರೇಕ್ಷಕರು ಮತ್ತು ವಿಮರ್ಶಾ ವಲಯಗಳೆ ರಡರಿಂದಲೂ ಬಹು ಪ್ರಶಂಸೆಗೆ ಅಪಾರ ಮೆಚ್ಚುಗೆಗೆ ಒಳಪಟ್ಟಿತು ಎಂಬುದು ಗಮನಾರ್ಹವಾದ ಅಂಶವಾಗಿತ್ತು. 'ಭಕ್ತಕುಂಬಾರ', 'ದಾರಿತಪ್ಪಿದ ಮಗ', 'ಪ್ರೊಫೆಸರ್ ಹುಚ್ಚುರಾಯ', 'ಮಿಥುನ', 'ತಾಯಿಗಿಂತ ದೇವರಿಲ್ಲ', 'ಕಿಟ್ಟು ಪುಟ್ಟು', 'ಬಯಸದೆ ಬಂದ ಭಾಗ್ಯ' ಮುಂತಾದವು, ಎಂ.ಎಸ್. ಸತ್ಯು ಅವರ 'ಚಿತೆಗೂ ಚಿಂತೆ'ಯಂತಹ ಚಿಂತನಾ ಪ್ರಧಾನ ಕಲಾತ್ಮಕ ಚಿತ್ರದಲ್ಲೂ ನಟಿಸಿದ್ದರು. ಇವರಿಗೆ ತಮಿಳ್, ತೆಲುಗು ಚಿತ್ರರಂಗದಲ್ಲೂ ಅಭಿನಯಿಸುವ ಅವಕಾಶಗಳು ಬಂದು ಆ ಎರಡು ಭಾಷೆಗಳಲ್ಲೂ ತಮ್ಮ ಅಭಿನಯ ನೀಡಿದ್ದಾರೆ. ತಮಿಳು ನಿರ್ದೇಶಕ ಅಮೃತಂ ಅವರ 'ಹುಡುಗಾಟದ ಹುಡುಗಿ' ನಂತರದ 'ಕನಸು ನನಸು' ಚಿತ್ರದಲ್ಲಿ ನಟಿಸಿದರು. ಈ ಸಮಯದಲ್ಲಿ ಅಮೃತಂ ಅವರ ಜೊತೆಗಾದ ಸ್ನೇಹ ಪ್ರೀತಿಯಾಗಿ ಬದಲಾಗಿ ಅದು ಮದುವೆಯ ಹಂತಕ್ಕೆ ಬಂದು ನಿಂತಿತು. ಮನೆಯಲ್ಲಿ ಯಾರಿಗೂ ಇಷ್ಟವಿಲ್ಲ ಅದರೆ ಅವರ ಇಷ್ಟಕ್ಕೆ ಯಾರೂ ಅಡ್ಡಿ ಮಾಡಲಿಲ್ಲ. ಕೆಲವೇ ಆಪ್ತಜನರ ನಡುವೆ ಚಾಮುಂಡಿಬೆಟ್ಟದಲ್ಲಿ ನಡೆದ ಮದುವೆ ಒಂದು ರೀತಿಯಲ್ಲಿ ಚಿತ್ರರಂಗಕ್ಕೆ ಗುಟ್ಟಾಗಿಯೇ ಇತ್ತು. ಸುಮಾರು ದಿನಗಳ ನಂತರ ಆಕೆಯ ಕೊರಳಲ್ಲಿದ್ದ ಮಾಂಗಲ್ಯ ಸರವನ್ನು ಪ್ರಶ್ನಿಸಿದ ಪತ್ರಕರ್ತನಿಂದ ಮದುವೆಯಾಗಿರುವ ಸುದ್ದಿ ಹೊರಗಿನ ಪ್ರಪಂಚಕ್ಕೆ ಬಹಳ ಬೇಗ ತಲುಪಿತು. ನಂತರ ಅವರ ಬದುಕಿನ ದಿಕ್ಕೇ ಬದಲಾಯಿತು.

'ಜಗದೀಶ ಸರ್ವೇಶ, ಗೌರೀಶ ಮಲ್ಲೇಶ ನೂರಾರು ಹೆಸರು ಶಿವನೀಗೆ' 'ಎಂದೆಂದೂ ನಿನ್ನನು ಮರೆತು' 'ಬೆಳ್ಳಿಯ ತೆರೆಯ ಮೋಡದ ಮರೆಯಾ' 'ವಸಂತ ಬರೆದನು ಒಲವಿನ ಓಲೆ' 'ಬೆಸುಗೆ ಬೆಸುಗೆ' 'ಮುತ್ತಿನ ಹನಿಗಳು ಸುತ್ತಲೂ ಮುತ್ತಲೂ' 'ಅಂತಿಂಥ ಹೆಣ್ಣು ನಾನಲ್ಲ' 'ನಿಲ್ಲಯ್ಯ ನಿಲ್ಲೋ' 'ದಾರಿಕಾಣದಾಗಿದೆ ರಾಘವೇಂದ್ರನೆ' 'ಈ ಮೌನವ


ತಾಳೆನು' 'ಜೋಡಿ ಬೇಡೋ ಕಾಲವಮ್ಮ' 'ಶ್ರೀ ಕೃಷ್ಣ ಜನಿಸಿದ ಧರೆಯಲ್ಲಿ' ಹೀಗೆ ಹೆಚ್ಚು ಪ್ರಸಿದ್ಧವಾದ ಹಾಡುಗಳು ಇಂದಿಗೂ ಕಣ್ಣ ಮುಂದೆ ಬರುತ್ತವೆ.

ಅಪಾರ ಪ್ರತಿಭೆ, ಯಶಸ್ಸುಗಳ ಉತ್ತುಂಗದಲ್ಲಿ ಮಂಜುಳಾ ಹಗಲು ರಾತ್ರಿಯೆನ್ನದೆ ನಿರಂತರ ನಟನೆ ಮಾಡುತ್ತಾ ದಿನವೊಂದಕ್ಕೆ ಮೂರು ಅವಧಿಯಲ್ಲಿ ನಟಿಸಿ ಕೇವಲ ಮೂರು, ನಾಲ್ಕು ತಾಸುಗಳಷ್ಟೇ ಅವರಿಗೆ ವಿಶ್ರಾಂತಿಗೆ ಸಿಗುತ್ತಿದ್ದ ಸಮಯ. ತಮಗೆ ಬಂದ ಅವಕಾಶಗಳನ್ನು ಸಮಯಾನುಕೂಲದ ಒಪ್ಪಂದದ ಮೇರೆಗೆ ತಮ್ಮ ನಟನೆಗೆ ಒಂದಿಷ್ಟು ಲೋಪ ಬಾರದ ಹಾಗೆ ಅಯಾಯ ಪಾತ್ರಗಳಿಗೆ ತಕ್ಕಂತೆ ಜೀವ ತುಂಬಿಸಿ ನಟಿಸಿದರು. ಮಂಜುಳಾ ಸೆಟ್‌ನಲ್ಲಿ ಎಲ್ಲರಿಗೂ ತಂಗಿಯಾಗಿ ಎಲ್ಲರ ಪ್ರೀತಿ, ವಿಶ್ವಾಸ ಸಂಪಾದಿಸಿದ ಸರಳ ನಡೆ-ನುಡಿಯ ಸಜ್ಜನಿಕೆ, ಗೌರವದ ವ್ಯಕ್ತಿತ್ವ. ವರ್ಷಕ್ಕೆ ಎಂಟು, ಒಂಬತ್ತು ಚಿತ್ರಗಳಲ್ಲಿ ನಟಿಸಿದ ಮಂಜುಳಾ ಅವರದು ಸಹಜ, ಮುಗ್ಧ ಅಭಿನಯದಿಂದ ಮನೆ ಮಾತಾದರು. ಹಳ್ಳಿಯ ಹುಡುಗಿಯ ಪಾತ್ರವಾಗಲಿ, ರಾಜಕುಮಾರಿಯ ಪಾತ್ರ, ಸಾಮಾನ್ಯ ಕುಟುಂಬದ ಗೃಹಿಣಿಯಾಗಿ, ಬಜಾರಿ ಹುಡುಗಿಯಾಗಿ, ಆಕ್ಷನ್ ಸಿನಿಮಾಗಳಲ್ಲಿ, ತುಂಟತನದ ಪಾತ್ರಗಳಲ್ಲಿ, ಹೀಗೆ ವಿಭಿನ್ನ ಪಾತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಎರಕಹೊಯ್ದು ಕನ್ನಡ ಚಿತ್ರರಂಗ ಮರೆಯಲಾರದ ನಟಿಯಾಗಿ ಉಳಿದರು. ಸು.100 ಚಿತ್ರಗಳಲ್ಲಿ ನಟಿಸಿ ತಮ್ಮ ಅಭಿನಯದ ಮೂಲಕ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯಾದರು. ಕನ್ನಡ ಚಿತ್ರರಂಗ ಅವರನ್ನು 'ಚಿನಕುರುಳಿ' ಮಂಜುಳಾ ಎಂದೇ ಗುರುತಿಸುತ್ತದೆ. ಕನ್ನಡ ಚಿತ್ರರಂಗದ ಮಧುರ ನಟಿಯಾಗಿ. ಮುಗ್ಧಭಾವ ತುಂಬಿದ ನಟನೆಯಿಂದ, ಚಂಚಲ ಸ್ವಭಾವದ ಹುಡುಗಿಯಾಗಿ ಪಾತ್ರ ಯಾವುದೇ ಆಗಿರಲಿ ಅದಕ್ಕೆ ತಕ್ಕಂತೆ ಭಾವತುಂಬಿ ತಮ್ಮ ವಿಶಿಷ್ಟ ಪ್ರತಿಭೆಯಲ್ಲಿ ಆಪಾತ್ರಕ್ಕೆ ಸಮರ್ಥ ಜೀವ ತುಂಬಿ ಅಭಿನಯಿಸಿದ ಮಂಜುಳಾ ಬಹುಬೇಡಿಕೆಯ ನಟಿಯಾಗಿ ನಟಿಸಿದ ಕನ್ನಡ ಚಿತ್ರರಂಗದ ಅದ್ಭುತ ಚಿತ್ರತಾರೆ. ಮಂಜುಳಾ ಚಿಕ್ಕವಯಸ್ಸಿನಲ್ಲಿ ಅತಿಹೆಚ್ಚು ಪಾತ್ರಗಳಲ್ಲಿ, ದಾಖಲೆಯ ಚಿತ್ರಗಳಲ್ಲಿ ನಟಿಸಿ ಕನ್ನಡ ಚಿತ್ರಲೋಕ ಮರೆಯದ ಮಾಣಿಕ್ಯದಂತೆ ಮಿಂಚಿ ದಂತಕಥೆಯಾದರು. ಇವರ ಅಭಿನಯಕ್ಕೆ ಕಲಶವಿಟ್ಟಂತೆ ಕನ್ನಡ ಚಿತ್ರರಂಗದ ಅತ್ಯುನ್ನತ ಪ್ರಶಸ್ತಿ 'ಫಿಲ್ಮಂಫೇರ್' ಪ್ರಶಸ್ತಿ ಪಡೆದರು. ಹಲವರು ಸಾಂಸ್ಕೃತಿಕ ಸಂಘಟನೆಗಳಿಂದ ಸನ್ಮಾನಿಸಲಾಯಿತು. ಚಲನ ಚಿತ್ರೋತ್ಸವಗಳಲ್ಲಿ ಸನ್ಮಾನ. ಅತ್ಯುತ್ತಮ ನಟಿ ಪ್ರಶಸ್ತಿ, ಜನಪ್ರಿಯ ನಟಿ ಪ್ರಶಸ್ತಿ ಪಡೆದ ಅವರ ಬಹಳಷ್ಟು ಚಿತ್ರಗಳು ವ್ಯಾಪಾರಿಕವಾಗಿ ಅತ್ಯಂತ ಯಶಸ್ವಿಯಾಗಿದ್ದರಿಂದ ಅವರನ್ನು 'ಬಾಕ್ಸ್ ಆಫೀಸ್ ಕ್ವೀನ್' ಎಂದು ಕರೆಯುತ್ತಿದ್ದರು. ಅವರ ಸೊಗಸಾದ ಅಭಿನಯ, ನೃತ್ಯಕೌಶಲ್ಯ, ಸೌಂದರ್ಯದಿಂದ ಪ್ರೇಕ್ಷಕರ ಮನ ಸೂರೆಗೊಂಡಿದ್ದ ಮಂಜುಳಾ ಅವರನ್ನು 1985ರಲ್ಲಿ 'ನೊಳಂಬ ಲಿಂಗಾಯತ ಸಂಘ'ದಿಂದ ತುರುವೇಕೆರೆಯಲ್ಲಿ ನಡೆದ 812ನೇ ಶ್ರೀಗುರು ಸಿದ್ಧರಾಮೇಶ್ವರ ಜಯಂತ್ಯೋತ್ಸವದಲ್ಲಿ ಅವರನ್ನು ಕರೆಸಿ ಸನ್ಮಾನಿಸಲಾಯಿತು. ಅಂದು ವೇದಿಕೆಯಲ್ಲಿ ಮಂಜುಳಾ ಪಕ್ಕ ಕುಳಿತು ವೇದಿಕೆ ಹಂಚಿಕೊಳ್ಳುವ ಅವಕಾಶ ನನ್ನದಾಗಿತ್ತು. ನಾನು ಆಗಿನ್ನೂ ಎಂ.ಎ. ಮುಗಿಸಿಕೊಂಡು ಬಂದಿದ್ದೆ. ಅಂದು ಅವರು ಕಾರ್ಯಕ್ರಮಕ್ಕೆ ಕೆಲವೇ ತಿಂಗಳ ಪುಟ್ಟ ಮಗುವನ್ನು ಬಿಟ್ಟು ತಡವಾಗಿ ಬಂದಿದ್ದರು. 30 ನಿಮಿಷ ಕಳೆದ ನಂತರ ಅವರಿಗೆ ಒಂದು ರೀತಿಯ ಚಡಪಡಿಕೆ ಶುರುವಾಯಿತು. ನಾನು ಬೇಗ ಹೋಗಬೇಕು ಪುಟ್ಟಮಗು ಬಿಟ್ಟು ಬಂದಿದ್ದೇನೆ ಮಗುವಿಗೆ ಹಾಲು ಕೊಡಬೇಕು ಅಂತೆಲ್ಲಾ ನಮ್ಮೊಂದಿಗೆ ಹೇಳುತ್ತಿದ್ದ ಆಕೆಯಲ್ಲಿದ್ದ ಮಾತೃ ಹೃದಯ ಕಂಡು ವೇದಿಕೆಯ ಹಿರಿಯರ ಗಮನಕ್ಕೆ ತಂದುಬೇಗ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಮಂಜುಳಾ ಅವರ ಮಗ ಅಭಿಷೇಕ್ ಹುಟ್ಟಿದ್ದು 1984ರಲ್ಲಿ. ನಂತರದ ಸೆಪ್ಟೆಂಬರ್12 1986ರಲ್ಲಿ ಅವರ ಬದುಕು ಅಸ್ತಂಗತವಾಯಿತು. ತಮ್ಮ35ನೇ ವರ್ಷದ ಅಲ್ಪಾಯುಷ್ಯದಲ್ಲೇ ಬದುಕಿಗೆ ತಾವೇ ಮಾಡಿಕೊಂಡ ಮೋಸದಿಂದ ಚಿತ್ರರಂಗಕ್ಕೆ ಮತ್ತು ಮಂಜುಳಾಗೆ ಬಹು ದೊಡ್ಡ ನಷ್ಟವೆಂದೇ ಹೇಳಬಹುದು. ಗ್ಯಾಸ್ ಸೋರಿಕೆಯ ಅಚಾತುರ್ಯದಿಂದ ಸಂಭವಿಸಿದ ಅವಘಡ ಭವಿಷ್ಯದ ಎಲ್ಲಾ ಜನಪ್ರಿಯತೆ, ಸಾಧನೆ, ಆಕೆ ಚಿತ್ರರಂಗಕ್ಕೆ, ಸಮಾಜಕ್ಕೆ ಕೊಡಬೇಕಾಗಿದ್ದ ಸರ್ವಸ್ವವನ್ನು ನಾಶ ಮಾಡಿತು. ಆಕೆ ಸಾಯುವ ಮುಂಚೆ ನನ್ನನ್ನು ಬದುಕಿಸಿಕೊಳ್ಳಿ ಎಂದು ಅವರನ್ನು ನೋಡಲು ಹೋದ ಚಿತ್ರನಟ ಶ್ರೀನಾಥ ಬಳಿ ಅಂಗಲಾಚಿದ ಜನಪ್ರಿಯ ನಟಿಯ ಸಾವು ಒಂದು ದುರಂತಮಯವಾದ ಅಂತ್ಯವಾಯಿತು. ಬಹು ಕಡಿಮೆ ಸಮಯದಲ್ಲೇ ಚಿತ್ರರಂಗಕ್ಕೆ ಅಚ್ಚಳಿಯದ ಛಾಪು ಬಿಟ್ಟು ಹೋಗಿದ್ದಾರೆ. ಚಲನಚಿತ್ರ ನಿರ್ಮಾಪಕ ಅಮೃತಂ ಅವರ ಎರಡನೆ ಹೆಂಡತಿಯಾಗಿ ವಿವಾಹವಾದರು. ನಂತರ ಅವರ ದಾಂಪತ್ಯ ಅಷ್ಟು ಸುಖಮಯವಾಗಿರಲಿಲ್ಲ. ಆಕೆಯ ದುರಂತ ಸಾವಿಗೆ ಅದು ಕಾರಣವೆಂದು ಹೇಳಲಾಯಿತು. ಮಂಜುಳಾ ಚಿಕ್ಕಂದಿನಿಂದಲೂ ಧೈರ್ಯ, ಚಾಲಕಿತನ, ಜಗಳಗಂಟಿಯಾಗಿ, ಚುರುಕಿನ ಮಾತುಗಾರಳಾಗಿ ಗೆಲುವನ್ನು ಸಾಧಿಸುತ್ತಿದ್ದ ಅವರು ಯಾವುದಕ್ಕೂ ಯಾರಿಗೂ ಹೆದರದೆ ಬದುಕಿದ ಮಂಜುಳಾ ಸಾವಿನ ಮುಂದೆ ತನ್ನ ಸೋಲನ್ನು ಒಪ್ಪಿಕೊಳ್ಳುವಂತಾಯಿತು. ಅದನ್ನು ತಡೆದು ನಿಲ್ಲಿಸುವುದು ಯಾರಿಗೂ ಆಗದು ಎಂಬ ಸತ್ಯವನ್ನು ಜಗತ್ತಿಗೆ ಉಳಿಸಿಹೋದ ಮಂಜುಳಾ ಇನ್ನೂ ಎಷ್ಟೋ ಕನಸುಗಳನ್ನು ನಮಗೆ ಬಿಟ್ಟು ಹೋಗಿದ್ದಾರೆ.

# ಜೀವಾಮೃತ

ಹಿಂದಿನ ಸಂಚಿಕೆಯಿಂದ.....

ಸಜ್ಜನರೊಬ್ಬರು ತಮ್ಮ ಮೊಮ್ಮಗನೊಂದಿಗೆ ನಿಧಾನವಾಗಿ ನಡೆಯುತ್ತಾ ಹೊರಟಿದ್ದರು. ದಾರಿಯಲ್ಲಿ ಹೋಗುವಾಗ ಇಬ್ಬರು ಪೊಲೀಸರು ಒಬ್ಬ ಕಳ್ಳನನ್ನು ಹಿಡಿದುಕೊಂಡು ಹೋಗುತ್ತಿದ್ದರು. ಆ ಮೊಮ್ಮಗು ಕೇಳಿತು 'ಅವನು ಯಾರು ಅಜ್ಜಿ?' ಅಜ್ಜಿ ಹೇಳಿದರು 'ಅವನು ಕಳ್ಳ', 'ಇವರು ಯಾರು?' ಮೊಮ್ಮಗ ಕೇಳಿದ. ಇವರು ಪೊಲೀಸರು. 'ಇವರಿಗೆ ಏಕೆ ಇಂತಹ ಬಟ್ಟೆ?' ಖಾಕಿ ಬಟ್ಟೆಯನ್ನು ತೋರಿಸಿ ಕೇಳಿದ ಚಿತ್ರ ಮೊಮ್ಮಗ. ಅದಕ್ಕೆ ಅಜ್ಜ ಇದು ಪೊಲೀಸರ ಸಮವಸ್ತ್ರ (Uniform) ಎಂದರು. 'ಅವನನ್ನು ಏಕೆ ಎಳೆದುಕೊಂಡು ಹೋಗುತ್ತಿದ್ದಾರೆ?' 'ಅವನು ಏನೋ ಕಳ್ಳತನ ಮಾಡಿರಬೇಕು' ಎಂದರು ಅಜ್ಜ. ಆ ಮಗುವಿನ ಮನಸ್ಸಿನಲ್ಲಿ ಖಾಕಿ ಬಟ್ಟೆ ಹಾಕಿರುವವರು ಪೊಲೀಸರು ಅವರ ಜೊತೆ ಇರುವವರು ಕಳ್ಳರು ಎಂದು ಉಳಿದುಕೊಂಡಿತು. ಮತ್ತೊಂದು ದಿನ ಪಕ್ಕದ ಪಟ್ಟಣಕ್ಕೆ ಮುಖ್ಯಮಂತ್ರಿಗಳು ಬರುವ ಕಾರ್ಯಕ್ರಮವಿತ್ತು. ಆ ಸಜ್ಜನರು ಆ ಕಾರ್ಯಕ್ರಮವನ್ನು ತಾವು ಹೋಗುವುದಲ್ಲದೇ ಆ ಮೊಮ್ಮಗನನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ಆ ಮಗು ಅಲ್ಲಿ ನಡೆಯುವ ಎಲ್ಲವನ್ನೂ ಕುತೂಹಲದಿಂದ ಬಿಟ್ಟ ಕಣ್ಣು ಬಿಟ್ಟ ಬಾಯಿಯವನಾಗಿ ಅಜ್ಜನ ಹೆಗಲ ಮೇಲೆ ಕುಳಿತುಕೊಂಡು ನೋಡುತ್ತಿತ್ತು. ಎಲ್ಲೆಲ್ಲೂ ಖಾಕಿ ಬಟ್ಟೆ ಧರಿಸಿದ್ದ ಪೊಲೀಸರೇ ಓಡಾಡುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೇ ಮುಖ್ಯಮಂತ್ರಿಗಳು ವೇದಿಕೆಗೆ ಆಗಮಿಸತೊಡಗಿದರು. ಹಿಂದೆ–ಮುಂದೆ ಅಕ್ಕ–ಪಕ್ಕ ಎಲ್ಲೆಡೆಯಲ್ಲಿಯೂ ಪೊಲೀಸರೇ ಪೊಲೀಸರು. ಮುಖ್ಯಮಂತ್ರಿಗಳು ವೇದಿಕೆ ಏರಿ ಎಲ್ಲರಿಗೂ ನಮಸ್ಕಾರ ಎನ್ನುವಷ್ಟರಲ್ಲಿ ಆ ಪುಟ್ಟ ಬಾಲಕ ಭಯವಿಲ್ಲದೇ ಹೇಳಿದ. 'ಅಜ್ಜ ನೋಡಲ್ಲಿ ದೊಡ್ಡ ಕಳ್ಳ ದೊಡ್ಡ ಕಳ್ಳ!' ಅಜ್ಜನಿಗೆ ಭಯವಾಯಿತು. ಆ ಸಜ್ಜನರು ಬಾಲಕನನ್ನು ಗದರಿಸಿ 'ಹೇಯ್ ದಡ್ಡ ಅವರು ಕಳ್ಳರಲ್ಲ ಮುಖ್ಯಮಂತ್ರಿಗಳು' ಅದಕ್ಕೆ ಆ ಮೊಮ್ಮಗನೆಂದ 'ಆವತ್ತು ಆ ಕಳ್ಳನನ್ನು ಇಬ್ಬರೇ ಎಳ್ಕೊಂಡು ಹೋಗ್ತಾ ಇದ್ರು ಇವತ್ತು ಇವನ್ಗೆ ಎಷ್ಟೊಂದು ಜನ ಮುತ್ಕಂಡಿದ್ದಾರೆ ನೋಡು' ಎಂದ. ಅದಕ್ಕೆ ಅಜ್ಜ ಅದು ಹಾಗಲ್ಲಪ್ಪಾ ಅವತ್ತು ಇಬ್ರೆ ಇದ್ರು. ಆ ಕಳ್ಳ ಅವರಿಬ್ಬರ ಮಾತನ್ನು ಕೇಳ್ಬೇಕಾಗಿತ್ತು. ಇವತ್ತು ಇಷ್ಟೊಂಜನ ಪೊಲೀಸಿದ್ರೂ ಇವೆಲ್ಲಾ ಮುಖ್ಯಮಂತ್ರಿಗಳು ಹೇಳ್ದಂಗೆ ಕೇಳ್ಬೇಕು'. ಇವ್ರು ನಮ್ಮ ರಾಜ್ಯಕ್ಕೆಲ್ಲಾ ದೊಡ್ಡವ್ರು ಇವ್ರನ್ನ ಮುಖ್ಯಮಂತ್ರಿಗಳು ಅಂತಾರೆ ಗೊತ್ತಾಯ್ತ ಮಗು' ಅದಕ್ಕೆ ಆ ಮಗು ಆಶ್ಚರ್ಯ ಆನಂದಗಳಿಂದ 'ಹೌದ ಅಜ್ಜ ಅವ್ರು ಮುಖ್ಯಮಂತ್ರಿನಾ!?' ಎಂದು ಅಗಲವಾದ ಬಾಯಿ ತೆಗೆದು ನಕ್ಕಿತಂತೆ. ಈ ಕಥೆ ಒಂದು ದೃಷ್ಟಾಂತವಷ್ಟೆ. ಇದರ ಹಿಂದೆ ಅಡಗಿರುವ ತತ್ವವೇನೆಂದರೆ ನಮ್ಮೆಲ್ಲರಿಗೂ ಪರಮಾತ್ಮ ಪಂಚೇಂದ್ರಿಯಗಳೆಂಬ ಪೊಲೀಸರನ್ನು ಅಂತಃಕರಣಗಳೆಂಬ (ಮನ ಬುದ್ಧಿ, ಚಿತ್ರ ಅಹಂಕಾರ) ಉನ್ನತ ಪೊಲೀಸ್ ಅಧಿಕಾರಿಗಳನ್ನು ನಮಗೆ ನೆರವಾಗಲೆಂದು ನಮ್ಮ ದೇಹದಲ್ಲಿಯೇ ಇಟ್ಟಿದ್ದಾನೆ. ಇಂದ್ರಿಯಗಳು ಹೇಳಿದಂತೆ ಕೇಳುತ್ತಾ ವಿಕಾರವಶವಾಗಿ ಬದುಕಿದರೆ ನಾವು ಕಳ್ಳರಾಗುತ್ತೇವೆ. ಉಪಾಯದಿಂದ ಇಂದ್ರಿಯಗಳನ್ನು ನಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡು ವಿವೇಕವನ್ನು Chief Secretaryಯನ್ನು ಜಾಗೃತಗೊಳಿಸಿ ಇಂದ್ರಿಯಗಳನ್ನು ಪಳಗಿಸಿ ಜೀವನದಲ್ಲಿ ಗೆಲುವನ್ನು ಸಾಧಿಸಿ ಯಶಸ್ವಿಯಾದರೆ ನಿಮ್ಮ ಬದುಕಿಗೆ ನೀವು ಮುಖ್ಯಮಂತ್ರಿಯಾಗಬಹುದು; ಕರ್ನಾಟಕ ರಾಜ್ಯಕ್ಕಲ್ಲ.



ಶ್ರೀ ಶ್ರೀ ಬಸವಾನಂದಸ್ವಾಮಿಗಳವರು
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

ನಮ್ಮನ್ನು ನಮ್ಮ ಇಂದ್ರಿಯಗಳನ್ನು ಗೆದ್ದರೆ ಮುಖ್ಯಮಂತ್ರಿಗಳಿಗಿಂತಲೂ ಸುಖವಾಗಿ ಆನಂದವಾಗಿ ಬದುಕಲು ಸಾಧ್ಯವಿರುವಾಗ ಆ ಪದವಿಯ ಆಸೆಯಾದರೂ ಏಕೆ? ಒಂದು ವೇಳೆ ಆ ಆಸೆ ನಿಮಗಿದ್ದರೆ ಪ್ರಯತ್ನದಿಂದ ಅದೃಷ್ಟವೂ ಕೈಗೂಡಿದರೆ ಒಂದು ದಿನ ಮುಖ್ಯಮಂತ್ರಿಯೂ ಆಗಿಬಿಡಬಹುದೇನೋ? ಆದರೆ ಇಂದ್ರಿಯಗಳನ್ನು ನಮ್ಮ ಹತೋಟಿಯಲ್ಲಿಟ್ಟುಕೊಳ್ಳುವುದು ಅದಕ್ಕಿಂತ ಕಷ್ಟ ಹಾಗಾದರೆ

ಇಂದ್ರಿಯಗಳನ್ನು ಗೆಲ್ಲಲು ಸಾಧ್ಯವೇ ಇಲ್ಲವೇ? ಕಡೆಯ ತನಕ ಇಂದ್ರಿಯಗಳಿಗೆ ದಾಸರಾಗಿಯೇ ಬದುಕಬೇಕೇ? ರೋಗಗಳಿಂದ ಬಳಲಿ ಸಾಯುವುದೇ ನಮ್ಮ ಪ್ರಾರಬ್ಧವೇ? ಖಂಡಿತ ಇಲ್ಲ. ಮಾನವನನ್ನು ವಿಕಾರಗಳು ಭಾದಿಸುವುದು ಸಹಜವೇ ಆದರೆ ಬೇರೆ ಪ್ರಾಣಿಗಳಂತೆ ನಿಸರ್ಗದತ್ತ ವಿಕಾರಗಳಲ್ಲಿಯೇ ಬದುಕಿ ಸಾಯುವುದು ಇವನ ಅಂತಿಮ ಗುರಿಯಲ್ಲ, ಈ ವಿಕಾರಗಳನ್ನು ಗೆದ್ದು ಸುಸಂಸ್ಕೃತ ದೈವೀ ಜೀವನವನ್ನು ಬದುಕಿ ತನ್ನ ಬದುಕನ್ನು ದಿವ್ಯಗೊಳಿಸಿಕೊಳ್ಳುವ ಶಕ್ತಿಯನ್ನು ನಿಸರ್ಗವೇ ಮಾನವನಲ್ಲಿ ಇಟ್ಟಿದೆ. ಬೇರೆ ಪ್ರಾಣಿಗಳಿಗೆ ಈ ಸಾಧ್ಯತೆ ಇಲ್ಲ, ಕೆಲವು ಪುರಾಣಗಳಲ್ಲಿ ಪ್ರಾಣಿಗಳೂ ಪರಮಾತ್ಮನನ್ನು ಪ್ರಾರ್ಥಿಸಿ ಕೂಗಿ ಕರೆದು ಮೋಕ್ಷ ಪಡೆದವೆಂದು ಹೇಳಬಹುದು. ರಾಮಾಯಣದಲ್ಲಿ ಪ್ರಾಣಿ-ಪಕ್ಷಿಗಳು ರಾಮನಿಗೆ ನೆರವಾದವೆಂದೂ ಅವನ ಆಶೀರ್ವಾದದಿಂದ ಜಿತೇಂದ್ರಿಯತ್ವವನ್ನು ಪಡೆದವೆಂದು ಕೇಳುತ್ತೇವೆ. ಇದು ಕವಿಸಮಯವೇ ಹೊರತು ಕಟು ವಾಸ್ತವವಲ್ಲ.

ಗಜೇಂದ್ರನನ್ನು ಮೊಸಳೆ ಹಿಡಿದಾಗ ಅದು ಆದಿಮೂಲ ಎಂದು ಕರೆಯಲು ನರಹರಿಯು ಬಂದು ಬಿಡಿಸಿದನೆಂದು ಕನಕದಾಸರು ಭಕ್ತಿಪರವಶರಾಗಿ ಹಾಡಿಕೊಂಡಿದ್ದಾರೆ. ಈಗಿನ ಆನೆಗಳ ದುಃಸ್ಥಿತಿ ಅವುಗಳು ಆಹಾರ ನೀರಿಗಾಗಿ ಪಡುತ್ತಿರುವ ಪರಿತಾಪ ರಾಕ್ಷಸೀ ಪ್ರವೃತ್ತಿಯ ಕಾಡುಗಳ್ಳರಿಂದ, ಭ್ರಷ್ಟ ರಾಜಕಾರಣಿಗಳಿಂದ ಆಗುತ್ತಿರುವ ಮಾರಣಹೋಮ. ಒಂದೇ ಎರಡೇ ವಿನಾಶದ ಅಂಚಿನಲ್ಲಿರುವ ಈ ಮುಗ್ಧ ಪ್ರಾಣಿಗಳನ್ನು ಉಳಿಸಿಕೊಳ್ಳಲು ಅವುಗಳಿಗೆ ಹೊಟ್ಟೆ ತುಂಬಾ ಆಹಾರ ಸಿಗುವಂತೆ ಮಾಡಲು ಆ ಹರಿಯ ಹನ್ನೊಂದನೆಯ ಅವತಾರದಿಂದಲೂ ಸಾಧ್ಯವಿದೆಯೋ ಇಲ್ಲವೋ ಗೊತ್ತಿಲ್ಲ. ಏಕೆ ಈ ವಿಷಯಾಂತರ? ಇಂದ್ರಿಯ ನಿಯಂತ್ರಣದ ವಿಷಯದ ನಡುವೆ ಈ ಪುರಾಣಗಳ ವಿಮರ್ಶೆ ಏಕೆ? ಎಂದು ಕೇಳುತ್ತೀರಾ?

ಇದರ ಉದ್ದೇಶ ಇಷ್ಟೆ ಇತರೆ ಜೀವಿಗಳು ಹೇಗೆ ಜನಿಸುತ್ತವೆಯೋ ಹಾಗೆಯೇ ಲಯ ಹೊಂದುತ್ತವೆ. ಅವುಗಳ ಅಂತರಂಗದಲ್ಲಿ ಪ್ರಕೃತಿಯು ವಿಶೇಷ ಸಾಧ್ಯತೆಗಳನ್ನು ಇಟ್ಟಿಲ್ಲ. ಆದರೆ ಮಾನವನಲ್ಲಿ ಅನೇಕ ಸಾಧ್ಯತೆಗಳಿವೆ.

1. ಮಾನವ ಸಾಮಾನ್ಯವಾಗಿ ಪ್ರಕೃತಿ ಗುಣಗಳಲ್ಲಿಯೇ ಬದುಕಿ ಹಾಗೆಯೇ ಸಾಯಬಹುದು.
2. ಅತೀ ವಿಕಾರಿಯಾಗಿ ದುಷ್ಟ ಬಾಳನ್ನೂ ಬಾಳಬಹುದು.
3. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು, ಕೇವಲ ಹತೋಟಿಯಲ್ಲಿಡುವುದಿಲ್ಲ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಉದಾತ್ತೀಕರಿಸಿ ಲಿಂಗೇಂದ್ರಿಯಗಳನ್ನಾಗಿ ಮಾರ್ಪಡಿಸಬಹುದು. ತಾಳ್ಮೆಯಿದೆಯೇ? ಅಥವಾ ಬೇಸರವಾಯಿತೇ? ಬೇಸರಪಟ್ಟುಕೊಳ್ಳಬೇಡಿ; ಹಾಗೆ ಬೇಸರದಿಂದ ಪುಸ್ತಕವನ್ನು ಮುಚ್ಚಿಟ್ಟರೆ ಒಂದು ದಿವ್ಯ ಪಥದ, ಸಾಧನಾಪಥದ ಪರಿಚಯದಿಂದ ದೂರವೇ ಉಳಿಯುತ್ತೀರಿ. ಪುಸ್ತಕವನ್ನಂತೂ ಕೊಂಡುಕೊಂಡಿದ್ದೀರಿ. ತಾಳ್ಮೆಯಿಂದ ಓದಿಯೇ ಬಿಡಿ, ಬೇಸರವಾದರೆ ಕೊನೆಯಲ್ಲಿ ಬೈದುಕೊಳ್ಳಬಹುದು.

**ಉದಾತ್ತೀಕರಣದ ಉನ್ನತ ಮಾರ್ಗ**

ಇಂದ್ರಿಯಗಳ ಉಪಟಳದ ಬಗ್ಗೆ ಸಾಮಾನ್ಯವಾಗಿ ಎಲ್ಲಾ ಅಧ್ಯಾತ್ಮ ಸಾಧಕರು ವಿಧವಿಧ ಪರಿಯಲ್ಲಿ ಗೋಳಿಟ್ಟಿದ್ದಾರೆ. ಕೆಲವರ ತೀರ್ಮಾನವೇನೆಂದರೆ ದೇಹ ಪ್ರಾಣಗಳಿರುವವರೆಗೂ ಈ ಇಂದ್ರಿಯ ಉಪಟಳ ತಪ್ಪಿದ್ದಲ್ಲ. ಶರಣರ ಕೆಲವು ವಚನಗಳಲ್ಲೂ ಕೂಡ ಈ ಭಾವ ಕಾಣಸಿಗುತ್ತದೆ. ಈ ಸ್ಥಿತಿಗೆ ಶರಣರು 'ಸಂಸಾರ ಹೇಯಸ್ಥಳ' ಎಂದು ಕರೆದಿದ್ದಾರೆ. ಸಂಸಾರ ಹೇಯಸ್ಥಲದ ನಂತರ ಗುರು ಕಾರುಣ್ಯ ಸ್ಥಳ ಬರುತ್ತದೆ. ಸದ್ಗುರುವಿನಿಂದ ಅನುಗ್ರಹ ಪಡೆದು ಅಂತರಂಗದಲ್ಲಿ ಆ ಗುರುವಿನ ಸ್ವರೂಪವಾದ ಅರಿವನ್ನು ಜಾಗೃತ ಮಾಡಿಕೊಂಡು ನಡೆಯುತ್ತಾ ನಿರಂತರ ಹರಿಯುವ ನದಿಯಂತೆ ಸತತವಾಗಿ ಸಾಧನೆ ಮಾಡಿ ಅಂಗೇಂದ್ರಿಯುಗಳನ್ನು ಲಿಂಗೇಂದ್ರಿಯುಗಳನ್ನಾಗಿ ಪರಿವರ್ತಿಸುವ ಉನ್ನತ ಮಾರ್ಗವನ್ನು ಸಂಶೋಧಿಸಿದ್ದಾರೆ ಶರಣರು, ಆ ಶಿವಯೋಗ ಮಾರ್ಗವನ್ನು ಅರಿತು ಸಾಧಿಸಿ ಆನಂದವನ್ನು ಪಡೆಯಲು ಸಿದ್ಧರಿದ್ದೀರಾ? ಶರಣರ ದಿವ್ಯಮಾರ್ಗವನ್ನು ಪ್ರವೇಶಿಸುವ ಸಾಹಸವನ್ನು ಮಾಡೋಣವೇ? ಇಂದ್ರಿಯಗಳನ್ನು ಬಳಸಿ ಪ್ರಸಾದದ ಪ್ರಸನ್ನತೆಯುನ್ನು ಅನುಭವಿ ಸಲು ಬಯುಸುವ ಪ್ರತಿಯೊಬ್ಬರೂ ಜಾತಿ, ಮತ, ಪಂಥ, ಧರ್ಮಗಳ ಭೇದವಿಲ್ಲದೇ ಎಲ್ಲರೂ ತಿಳಿದುಕೊಂಡು ಈ ಮಹಾಮಾರ್ಗವನ್ನು ಅನುಸರಿಸಬಹುದು.

ಇಂದ್ರಿಯಗಳನ್ನು ಉದಾತ್ತೀಕರಣ ಮಾಡುವ ಈ ಸಾಧನಾಪಥವನ್ನ ಮೂರು ಘಟ್ಟಗಳಾಗಿ ವಿಭಾಗಿಸಿದ್ದಾರೆ ಶರಣರು. ಅವು ಯಾವುವೆಂದರೆ;

1) ತ್ಯಾಗಾಂಗ
2) ಭೋಗಾಂಗ
3) ಯೋಗಾಂಗ

**ಮುಂದುವರೆಯುವುದು........**

# ಆರೋಗ್ಯಕ್ಕಾಗಿ ಆಯುರ್ವೇದ ಲೈಫು ಹೀಗಿರಲಿ :ಸಂಚಿಕೆ–3

**ನಾಲಿಗೆ ಸ್ವಚ್ಛಗೊಳಿಸಿದ ನಂತರ ಗಂಡೂಷ ಅಂದರೆ ಬಾಯಿ ಮುಕ್ಕಳಿಕೆ**

ಹಲ್ಲು, ವಸಡು, ನಾಲಿಗೆಗಳನ್ನು ಸ್ವಚ್ಛಗೊಳಿಸಿದರೆ ಸಾಲದು ಅವನ್ನು ಬಾಯಿಯ ಒಳಕುಹರವನ್ನು ಸ್ವಚ್ಛವಾಗಿಡಲು, ದೃಢಗೊಳಿಸಿ ಹಗುರಾಗಿಸಲು ಗಂಡೂಷ ಮಾಡಬೇಕು. ಸಾದಾ ನೀರನ್ನು ಬಾಯಿಗೆ ತುಂಬಿಕೊಂಡು ಗಳಗಳ ಮಾಡಿ (ನೂರು ಎಣಿಸುವವರೆಗೆ ) ಉಗಿಯಬೇಕು. ಬೆಚ್ಚಗಿನ ನೀರಿನಿಂದಲೂ ಗಂಡೂಷ ಮಾಡಬಹುದು. ಇದರಿಂದ ಮುಖದ ಮಾಂಸಪೇಶಿಗಳಿಗೆ ವ್ಯಾಯಾಮವಾಗಿ ಮುಖದ ಚರ್ಮ ಸುಕ್ಕುಗಟ್ಟುವುದು ಕಡಿಮೆಯಾಗಿ ಸೌಂದರ್ಯ ಇಮ್ಮಡಿಸುವುದು. ಕೆಲವು ಬಾಯಿಯ ರೋಗಗಳಲ್ಲಿ ಔಷಧಿಸಿದ್ಧ ಎಣ್ಣೆಗಳ ಗಂಡೂಷದ ಮೂಲ ಸಿದ್ಧಾಂತದಂತೆ ಪ್ರತಿನಿತ್ಯ ಸ್ವಸ್ಥರೂ ಎಣ್ಣೆಯಿಂದ ಗಂಡೂಷ ಮಾಡಬಹುದು. ಮನೆಯಲ್ಲಿಯೇ ಸಿಗುವ ಎಳ್ಳೆಣ್ಣೆ / ಸೂರ್ಯಕಾಂತಿ ಎಣ್ಣೆಯನ್ನು ಬೆಚ್ಚಗೆ ಮಾಡಿ ಬಾಯಿ ತುಂಬ ತುಂಬಿಕೊಂಡು ಕನಿಷ್ಠ ನೂರು ಎಣಿಸುವವರೆಗೆ ಇದ್ದು ಅದನ್ನು ಗಳಗಳಿಸಿ ಉಗಿಯಬೇಕು. ನಂತರ ಬೆಚ್ಚಗಿನ ನೀರಿನಿಂದ ಬಾಯಿ ಮುಕ್ಕಳಿಸಿ. ಯಾವುದೇ ರೀತಿಯ ರಾಸಾಯನಿಕ ಬಾಯಿ ಮುಕ್ಕಳಿಸುವ, ಮೌತ್‌ಫ್ರೆಷ್‌ನರ್ ದ್ರವಗಳ ಉಪಯೋಗ ಬೇಡ.

**ಮುಖ ಮಾರ್ಜನ / ಮುಖ ತೊಳೆಯುವುದು**

ಗಂಡೂಷದ ನಂತರ ಮುಖಮಾರ್ಜನ, ತಣ್ಣೀರನ್ನು ತೆರೆದ ಕಣ್ಣುಗಳಿಗೆ ಮೃದುವಾಗಿ ಸಿಂಪಡಿಸಬೇಕು. ಅಲ್ಲದೆ ಇಡೀ ಮುಖವನ್ನು ತೊಳೆಯುವುದರಿಂದ ಕಣ್ಣಿನ ದೃಷ್ಟಿ ಬಲಗೊಂಡು ಮುಖದ ಸುಕ್ಕು, ಕಲೆಗಳು ಹೋಗಿ ಅದರ ಸೌಂದರ್ಯ ಹೆಚ್ಚುವುದು. ಬೆಚ್ಚಗಿನ ನೀರಿನಲ್ಲಿ ಮುಖ ತೊಳೆದರೆ ಕಫವಾತ ದೋಷಗಳು ನಿವಾರಣೆ ಯಾಗಿ ಮುಖದಮೇಲೆ ಸ್ನಿಗ್ಧತೆ ಮೂಡುವುದು. ಮುಖವನ್ನು ಆಗಾಗ್ಗೆ ಅತಿಯಾಗಿ ತೊಳೆಯಬಾರದು.ಮುಖ ಮಾರ್ಜನಗಳು/ಸೋಪ್/ಫೇಸ್ ವಾಶ್‌ಗಳನ್ನು ಅತಿಯಾಗಿ ಉಪಯೋಗಿಸಬಾರದು.


**ನಸ್ಯವಿಧಿ /ಮೂಗಿಗೆ ಎಣ್ಣೆ ಬಿಡುವುದು**

'ನಾಸಾಹಿ ಶಿರಸೋ ದ್ವಾರಂ' ತಲೆಯೊಳಕ್ಕಿನ ದ್ವಾರವೆಂದರೆ ಅದು ಮೂಗಿನ ಹೊಳ್ಳೆಗಳು. ಇವುಗಳಿಗೆ ಎಣ್ಣೆ ಹಾಕುವ ವಿಧಿ ವಿಶೇಷವಾದ್ದು. ಎಳ್ಳೆಣ್ಣೆ, ಸಾಸಿವೆ ಎಣ್ಣೆ ಮುಂತಾದ ಎಣ್ಣೆಯನ್ನು ಬೆಚ್ಚಗೆ ಮಾಡಿ, ಮಲಗಿಕೊಂಡು ಮೂಗಿನ ಎರಡೂ ಹೊಳ್ಳೆಗಳಿಗೆ 3–6 ಹನಿಗಳಷ್ಟು ಹಾಕಿಕೊಂಡು ಹಾಗೇ ಇದ್ದರೆ ಎಣ್ಣೆಯು ಮೂಗಿನಿಂದ ಗಂಟಲಿಗೆ ಇಳಿಯುವುದು ಅದನ್ನು ಉಗಿದು ಬಿಸಿನೀರಿನಲ್ಲಿ ಮುಕ್ಕಳಿಸಿ ಉಗಿಯಬೇಕು. ಮಕ್ಕಳಿಗಾದರೆ ಹನಿಗಳನ್ನು ಹನಿಸುವ ಬದಲು ಹೊಳ್ಳೆಗಳಿಗೆ ಎಣ್ಣೆಯನ್ನು ಬೆರಳಿನಿಂದ ಸವರಬಹುದು. ನಸ್ಯ ಮಾಡುವುದರಿಂದ ತಲೆಗೂದಲು ಉದುರದು, ಬೆಳ್ಳಗಾಗದು. ಮುಖದ ಚರ್ಮ ಸುಕ್ಕುಗಟ್ಟದು. ಇಂದ್ರಿಯಗಳು ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲವು. ಉಸಿರಾಟದಿಂದ ಹರಡುವ ಕಾಯಿಲೆಗಳಿಂದ ದೂರವಿರ ಬಹುದು. ಅದರಲ್ಲೂ ಕ್ರಿಮಿಸೋಂಕು, ಧೂಳುಗಳನ್ನು ಮೂಗಿನ ಹೊಳ್ಳೆಯಲ್ಲೆ ಹಿಡಿದು ಮುಂದೆ ಸಾಗಿ ರೋಗ ಹರಡದಂತೆ ಆಗುವುದು ಎಂದು ಹೇಳಲಾಗಿದೆ. ನಸ್ಯ ಪದ ಮೂಲದ ನಶ್ಯದ ಹೆಸರಿನಲ್ಲಿ ತಂಬಾಕು ಪುಡಿಯನ್ನು ಮೂಗಿಗೇರಿಸಿ ಕೊಂಡು ನಶೆ ಪಡೆಯುವುದು ಸರ್ವಥಾ ಬೇಡ. ಅದು ಚಟವಾಗಿ ದೊಡ್ಡ ರೋಗಗಳಿಗೆ ಕಾರಣವಾಗುವುದು.

**ಅಂಜನವಿಧಿ / ಕಣ್ಣಿಗೆ ಕಾಡಿಗೆ ಹಚ್ಚುವುದು**

ಕಣ್ಣಿನ ಆರೋಗ್ಯಕ್ಕಾಗಿ ಹಚ್ಚುವ ಒಂದು ವಿಧದ ಔಷಧ ಅಂಜನ. ಕಣ್ಣಿನ ಕೆಳ ರೆಪ್ಪೆಯ ಒಳಭಾಗಕ್ಕೆ ಅಂಜನ ಹಚ್ಚಬೇಕು. ಮಾರುಕಟ್ಟೆಯಲ್ಲಿ ಅಂಜನ, ಹನಿರೂಪದ ಅಂಜನ ಲಭ್ಯವಿದೆ. ಮನೆಯಲ್ಲೂ ನಂದಿಬಟ್ಟಲ ಹೂವಿನ ರಸದಿಂದ ಅಂಜನ ತಯಾರಿಸಿ ಉಪಯೋಗಿಸಬಹುದು.

ಇದರಿಂದ ಕಣ್ಣುಗಳು ಸ್ನಿಗ್ಧವಾಗಿ, ಕಣ್ಣು ರೆಪ್ಪೆಗಳು ಕೂಡ ದೃಢಗೊಳ್ಳುತ್ತವೆ. ಕಣ್ಣಿನ ಸಂದುಗಳಲ್ಲಿ ಮಲಸಂಚಯವಾಗುವುದಿಲ್ಲ. ಕಣ್ಣು ಸುಂದರಗೊಂಡು ಸೂಕ್ಷ್ಮ ವಸ್ತುಗಳನ್ನೂ ನೋಡಬಹುದು. ಕನ್ನಡಕದಿಂದ ದೂರ ಉಳಿಯಬಹುದು. ಕಣ್ಣುಗಳು ಮನದ ಕಿಂಡಿಗಳು ಅವನ್ನು ಅತಿಯಾಗಿ, ಮಿಥ್ಯವಾಗಿ ಉಪಯೋಗಿಸುತ್ತಿರುವ ಪ್ರಸ್ತುತ ಜನಸಮುದಾಯದ ಎಲ್ಲರೂ ಅಂಜನ ಬಳಸಿ ಕಣ್ಣಿನ ಆರೋಗ್ಯ ಹೆಚ್ಚಿಸಿಕೊಳ್ಳಿ.



**ಡಾ. ಶ್ರೀಪ್ರಸಾದ್ ಎಚ್.ಎಸ್.**
ಬಿಎಎಂಎಸ್ (ಆಯುರ್ವೇದ), ಬಿಎಎಂಎಸ್ (ಇಂಟಿಗ್ರೇಟೆಡ್)
ಶ್ರೀಪ್ರಸಾದ್ ಆಯುರ್ವೇದ # 9, ಮನುವನ,
ವಿಜಯನಗರ. ಬೆಂಗಳೂರು 560040
ಸ್ಥಿರ ದೂರವಾಣಿ : 080 23301090

# ಒಂದು ಊರಿನ ಕಥೆ : ವ್ಯಥೆ

ಆ ಒಂದು ಕಾಲದಲ್ಲಿ ಅಂದರೆ 1950ರ ಆಸುಪಾಸಿನಲ್ಲಿ ಸಾಂಪ್ರದಾಯಿಕವಾಗಿ ಬೆಳೆಯುತ್ತಿದ್ದ ಕಪ್ಪುಜಮೀನಿನಲ್ಲಿ ದೊಡ್ಡಜೋಳ, ಮರಳು ಜಮೀನಿನಲ್ಲಿ ಗೆಜ್ಜೆತೆನೆರಾಗಿ ಇವುಗಳನ್ನು ಮುಖ್ಯಬೆಳೆಯಾಗಿ ಬೆಳೆಯುತ್ತಾ ವರ್ಷಪೂರ್ತಿ ಊಟಕ್ಕೂಗತಿಯಿಲ್ಲದಾಗಿ ಬದುಕು ಸಾಗಿಸುವಕಾಲ ಅದಾಗಿತ್ತು. ಇನ್ನ ಉಡಲು ಬಟ್ಟೆಗೆ ಹಬ್ಬಹರಿದಿನದ ಖರ್ಚಿಗೆ ಕರಾವುವಾಡಿ ಬೆಣ್ಣೆ ಮಾರಾಟದಲ್ಲಿ ಸರಿದೂಗಿಸಬೇಕಿತ್ತು. ಅದು ಭೂಮಿ ಹಾಗು ಕರಾವು ಕರೆಯುವ ಎಮ್ಮೆ ಆಕಳು ಇದ್ದವರ ಪಡಿಪಾಟಲು. ಅದು ಇಲ್ಲದವರ ಗತಿ ಸಾಲತಂದು ತುಪ್ಪತಿಂದು ಅವರ ಮನೆಯಲ್ಲಿ ಜೀವನ ಪೂರ್ತಿ ಜೀತದಾಳಾಗಿ ದುಡಿಯುವುದೇ ಗತಿಯಾಗಿತ್ತು. ಈ ರೀತಿ ಜೀತದಾಳಾಗಿ ದುಡಿವ ಕುಟುಂಬಗಳು ನಮ್ಮೂರಲ್ಲಿ ನೂರಾರು. ನಮ್ಮ ಮನೆಯಲ್ಲಿ ನಮ್ಮಚಿಕ್ಕಪ್ಪಾರು ಇಬ್ಬರು ಶಿಕಾರಿಪುರ ತಾಲೂಕಿನ ಹಿತ್ತಲಗ್ರಾಮದ ಸಂಗಜ್ಜ ಎಂಬುವವರ ಮನೆಯಲ್ಲಿ ಜೀತಕ್ಕೆ ಇದ್ದರು. ಅವರು ಕೊಡುತ್ತಿದ್ದ ಭತ್ತಕ್ಕಾಗಿ. ನಾನು ಹಿತ್ತಲದಲ್ಲಿ ಶಿಕ್ಷಕನಾಗಿ ಹೋದಾಗಲೇ ಈ ವಿಚಾರ ಆ ಊರಲ್ಲಿ ಕೇಳಿದ್ದು. ಅದು ಅಲ್ಲದೆ ಊಟಕ್ಕೆ ಇಲ್ಲದಾಗ ಸವಳಂಗದ ಹತ್ತಿರದ ಮಲ್ಲಾಪುರದಲ್ಲಿ ದನಗಳ ಕಾಯಲು ಮೂರು ತಿಂಗಳು ಮನೆಬಿಟ್ಟು ಹೋಗಿದ್ದು ನಡೆದ ಸಂಗತಿ.

ಇದು ಒಂದು ಮನೆಯ ಕಥೆಯಲ್ಲ ಬಹುತೇಕ ಎಲ್ಲರ ಮನೆಯ ಕಥೆಯು ಹೌದು. ಊರಾಗಿನ ನಾಲ್ಕೈದು ಮನೆಗಳನ್ನು ಬಿಟ್ಟು. ಇಂಥಹ ಸ್ಥಿತಿಯಿಂದ ಹೊರಬರಲು ಊರ ಕೆಲವು ಕುಟುಂಬಗಳು ತಮ್ಮ ಸಾಂಪ್ರದಾಯಕ ಬೆಳೆಯಿಂದ ಹೊರಬಂದು ಎಕರೆಗೆ ನಾಲ್ಕುಚೀಲ ಇಳವರಿ ಬರುತ್ತಿದ್ದ ದೊಡ್ಡಜೋಳ ಬಿಟ್ಟು ಎಕರೆಗೆ ಹತ್ತುಚೀಲ ಇಳುವರಿ ಬರುತ್ತಿದ್ದ ಹೈಬ್ರಿಡ್ ಜೋಳ ಬೆಳೆಯಲು ಆರಂಭಿಸಿದರು. ಅದೇರೀತಿ ಎಕರೆಗೆ ಹತ್ತು ಹನ್ನೆರಡು ಚೀಲ ಬರುತ್ತಿದ್ದ ರಾಗಿ ಬೆಳೆಯಲು ಆರಂಭಿಸಿದರು. ಅದೇ ಸಂದರ್ಭಲ್ಲಿ ಕೆಮಿಕಲ್ ಗೊಬ್ಬರ ಯೂರಿಯ (ಉಪ್ಪಿನಂತ್ತಾದ್ದು+ ಬೂದಿತರದ್ದು) ಬಂದು ಬೆಳೆಯ ಇಳುವರಿ ಹೆಚ್ಚಾಗಿ ಊರ ಕೆಲವು ಕುಟುಂಬಗಳ ಕೈಯಲ್ಲಿ ಹಣ ಓಡಾಡತೊಡಗಿತು. ಆ ಕುಟುಂಬಗಳು ತಮ್ಮ ಅಕ್ಕಪಕ್ಕದವರ ಜಾಮೀನು ಖರೀದಿಸಿ ದೃಢಗೊಳ್ಳತೊಡಗಿದಾಗ ಉಳಿದ ಕುಟುಂಬಗಳು ದುಡುಮೆಗೆ ಕೈಹಚ್ಚಿ ತಾವು ತಲೆಎತ್ತಿ ನಿಲ್ಲತೊಡಗಲು ಪ್ರಯತ್ನದಲ್ಲಿರುವಾಗ ಮತ್ತೆ ಹೊಸ ಆರ್ಥಿಕ ಬಳೆಗಾಗಿ ಹುಡುಕಾಟದಲ್ಲಿದ್ದಾಗ ನಮ್ಮೂರ ರೈತರಿಗೆ ಆಧಾರವಾಗಿ ಬಂದ್ದದ್ದೇ 'ಸೇಂಗಾ'. 1960ರಿಂದ 1970ರ ಅವಧಿಯಲ್ಲಿ ನಮ್ಮೂರ ಜನರ ಆರ್ಥಿಕ ಪರಿಸ್ಥಿಯನ್ನು ಸುದಾರಿಸಿ ಇಡೀ ತಾಲ್ಲೂಕಿನಲ್ಲಿ 'ದುಡಿಮಸ್ಥ ಊರು' 'ದುಡಿಮಸ್ಥಜನ' ಎಂಬ ಹೆಸರನ್ನೂ ನಮ್ಮೂರಿಗೆ ತಂದಿದ್ದೇ ಈ ಸೇಂಗಾ ಬೆಳೆ. ಈ ಸೇಂಗಾಬೆಳೆ ಜೊತೆಗೆ ಮತ್ತೊಂದು ಬೆಳೆ 'ಈರುಳ್ಳಿ' ಇದು ಕೂಡ ನಮ್ಮೂರ ಜನರ ಆರ್ಥಿಕ ದೃಢತೆಗೆ ಬಹುಮುಖ್ಯ ಕಾರಣ. ಆವತ್ತಿನ ದಿನಮಾನದಲ್ಲಿ ಈಗಿನಷ್ಟು ನಾವು ಬೆಳೆಯುತ್ತಿದ್ದ ಸೇಂಗಾಕ್ಕಾಗಲಿ, ಈರುಳ್ಳಿ ಬೆಳೆಗಾಗಲಿ ಕೆಮಿಕಲ್ ಗೊಬ್ಬರ ಬಳಸುತ್ತಿದ್ದಿಲ್ಲ. ಅಪರೂಪಕ್ಕೆ ಏನೋ ಅಲ್ಪಸ್ವಲ್ಪ ಈರುಳ್ಳಿ ಬೆಳೆಗೆ ಬಳಸುತ್ತಿದ್ದರು.

ಆದರೆ ಕೊಟ್ಟಿಗೆ ಗೊಬ್ಬರ ಹೆಚ್ಚಾಗಿ ಬಳಸುತ್ತಿದ್ದರು. ಆಗ ಬೆಳೆ ಚೆನ್ನಾಗಿಯೇ ಬರುತ್ತಿದ್ದವು. ಪ್ರತಿ ಮನೆಯಲ್ಲು ದನಕರ ಇದ್ದಿದ್ದರಿಂದ ಕೊಟ್ಟಿಗೆ ಗೊಬ್ಬರಕ್ಕೇನು ಬರ ಇರಲಿಲ್ಲ. ಹಾಗಾಗಿ ಈಗಿನಂತೆ ಗೊಬ್ಬರಕ್ಕಾಗಿ ಹಾಕುವ ಹಣ ಉಳಿತಾಯವಾಗುತ್ತಿತ್ತು. ಅದಲ್ಲದೆ ಪ್ರತಿಯೊಬ್ಬರು ತಮ್ಮ ಬಿತ್ತನೆಗೆ ಬೇಕಾದ ಬೀಜಗಳನ್ನು ತಾವು ಬೆಳೆದ ಸೇಂಗಾದಿಂದಲೆ ಆರಿಸಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು ಹಾಗಾಗಿ ಬೀಜದ ಖರ್ಚು ಉಳಿಯುತ್ತಿತ್ತು. ಈಗಿನಂತೆ ಟ್ರಾಕ್ಟರ್ ಇರಲಿಲ್ಲ ಎಲ್ಲಾ ಸ್ವಂತ ಕಮತ ಮಾಡುತ್ತಿದ್ದರು. ಸ್ವಂತ ಬೇಸಾಯದಿಂದ ತಮ್ಮ ಜಮೀನಿನ ಲಕ್ಷಣ ಅರಿತು ಎರಡು ಮೂರು ಸಲ ಉಳುಮೆ ಮಾಡಿ ಜಮೀನು ಹದಗೊಳಿಸಿ ಇಟ್ಟುಕೊಂಡು ಸಜ್ಜಾಗಿರುತ್ತಿದ್ದರು. ಇದರಿಂದ ಕಳೆಯು ಇರುತ್ತಿರಲಿಲ್ಲ. ಏನೊ ಇದ್ದಬದ್ದ ಕಳೆಯನ್ನು ತಾವೇ ಮನೆಯವರೆ ತೆಗೆಯುತ್ತಿದ್ದರು. ಸೇಂಗಾ, ಕಪ್ಪು ಮತ್ತು ಮಳ್ಳು ಜಮೀನಿನಲ್ಲಿ ಚನ್ನಾಗಿ ಬರುತ್ತಿದ್ದರಿಂದ ನಮ್ಮೂರಿನಲ್ಲಿ ಕಪ್ಪು, ಮರಳು, ಕೆಂಗಲು ಹೊಲಗಳಲ್ಲಿ ಸೇಂಗಾ ಬೆಳೆಯತೊಡಗಿದರು ಇದರ ಜೊತೆಗೆ ಒಂದು ಎಕರೆ, ಅರ್ಧ ಎಕರೆ ಈರುಳ್ಳಿಯನ್ನು ಅವರ ಶ್ರಮಕ್ಕೆ ತಕ್ಕಂತೆ ಬೆಳೆಯತೊಡಗಿದರು. ಈ ಎರಡು ಆರ್ಥಿಕ ಬೆಳೆಗಳು ನಮ್ಮೂರಿನ ಜಮೀನಿನಲ್ಲಿ ಸಂಮೃದ್ಧವಾಗಿ ಬರುತ್ತಿದ್ದವು.

ಇವು ಕಟಾವಿಗೆ ಬಂದಾಗಲೆ ತುಂಬ ಖರ್ಚು ಹಾಗು ರೈತನಿಗೆ ದಗದು. ಬೆಳೆದ



**ಡಿ.ಬಿ.ಶಂಕರಪ್ಪ**
ಹುತ್ತೇಶ ಕೃಪ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಸವಳಂಗ ರಸ್ತೆ, ಶಿವಮೊಗ್ಗ. ಮೊ : 9448516344

ಬೆಳೆಯನ್ನು ಮನೆಗೆ ತರುವವರೆಗೂ ಊರ ಯಾವ ರೈತಕುಟುಂಬ ಹಗಲು ರಾತ್ರಿಯನ್ನದೆ, ಊಟ ನಿದ್ರೆ ಬಿಟ್ಟು ಕೆಲಸದಲ್ಲಿ ತೊಡಗಬೇಕಾಗುತ್ತಿತ್ತು. ಈ ಸಂದರ್ಭದಲ್ಲಿ ಪ್ರತಿರೈತರು ಕೂಲಿಯವರಿಗಾಗಿ ನಿತ್ಯ ಪರದಾಡಬೇಕಾಗಿರುತ್ತಿತ್ತು. ಈ ದಿನಗಳಲ್ಲಿ ಅಂದರೆ ಸೆಪ್ಟೆಂಬರ್‌ನಿಂದ ನವಂಬರ್‌ವರೆಗೆ ನಮ್ಮೂರಿನಲ್ಲಿ ಪರಊರಿನಿಂದ ಕೂಲಿ ಕೆಲಸಕ್ಕಾಗಿ ಬಂದಿರುತ್ತಿದ್ದ ಜನ ನಮ್ಮೂರಿನ ಜನಸಂಖ್ಯೆಗಿಂತ ಹೆಚ್ಚಿರುತ್ತಿತ್ತು. ಆದರು ಪರದಾಟ ತಪ್ಪುತ್ತಿದ್ದಿಲ್ಲ. ಹೊರಗಿನಿಂದ ಬಂದ ಕೂಲಿಯುವರು ಕೂಡ ತಮ್ಮ ವರ್ಷದ ಸಂಪಾದನೆಯನ್ನು ಮಾಡಿಕೊಂಡು ತೃಪ್ತಿಯಿಂದ ಕೆಲಸ ಮುಗಿದ ನಂತರದಲ್ಲಿ ತಮ್ಮ ಊರುಗಳಿಗೆ ಮರಳುತ್ತಿದ್ದರು. ಇಂತಹ ಸಂತೃಪ್ತಿಯ ಆ ದಿನಗಳಲ್ಲಿ ಈಗಿನಂತೆ ಹೊಲದಿಂದಲೆ ಸೇಂಗಾನ್ನಾಗಲಿ, ಈರುಳ್ಳಿಯನ್ನಾಗಲಿ ಮಾರ್ಕೇಟ್‌ಗೆ ಸಾಗಿಸುತ್ತಿದ್ದಿಲ್ಲ. ಮನೆಗೆ ತಂದು ಅನಂತರವೇ ಮಾರ್ಕೇಟ್‌ಗೆ ಸಾಗಿಸುತ್ತಿದ್ದರು. ಸೇಂಗಾನಂತು ಮೂರ್ನಾಲ್ಕು ತಿಂಗಳು ಇಟ್ಟುಕೊಂಡು ಅನಂತರ ಒಂದು ಮಾರ್ಕೇಟ್‌ಗೆ ಬಿಡುತ್ತಿದ್ದರು.

ನ್ಯಾಮತಿಯಲ್ಲಿ ಎರಡು ಸೇಂಗಾ ಎಣ್ಣೆಮಿಲ್ಲುಗಳು ಇದ್ದವು. ಇವಲ್ಲದೆ ದಾವಣಗರೆಯೇ ಸೇಂಗಾ ಖರೀದಿಗೆ ದೊಡ್ಡಮಾರ್ಕೇಟ್. ಈ ದಿನಮಾನದಲ್ಲಿ ನಮ್ಮೂರಿನ ರೈತಕುಟುಂಬಗಳ ಮನೆ ಖರ್ಚನ್ನೆಲ್ಲ ಹಾಲು ಹೈನು, ತರಕಾರಿ (ಹೊಲಗಳ ಬದು ಅಕ್ಕಡಿಯಲ್ಲಿ)ಯಂತ ಉಪಬೆಳೆಗಳಿಂದಲೇ ಮನೆತನ ಸರಿದೂಗಿಸಿಕೊಂಡು ಹೋಗುತ್ತಿದ್ದರಿಂದ ಮುಖ್ಯಬೆಳೆಗಳಾದ ಸೇಂಗಾ ಈರುಳ್ಳಿಯಿಂದ ಬಂದಂತ ಹಣ ಹಾಗೆ ಊಳಿದು ಸದಾ ಊರಜನರ ಕೈಯಲ್ಲಿ ಇಡಿಗಂಟಾಗಿ ಉಳಿಯುತ್ತಿತ್ತು. ನಮ್ಮೂರಿನ ಅನೇಕ ರೈತಕುಟುಂಬಗಳು ತಾವು ಮಾರಟ ಮಾಡಿದ ಸೇಂಗಾದ ಹಣವನ್ನು ಮಂಡಿಗಳಲ್ಲೇ ಬಿಟ್ಟು ತಮಗೆ ಬೇಕೆಂದಾಗ ಹಣಪಡೆಯುತ್ತಿದ್ದು ಉಂಟು. ಇಂತಹ ಸಮೃದ್ಧ ದಿನದಲ್ಲಿ ನಾನು ತಿಂಗಳಿಗೆ ನೂರಾಮುವತ್ತು ರೂಪಾಯಿ ಸಂಬಳದ ಶಿಕ್ಷಕ ವೃತ್ತಿಗೆ ಸೇರಿದಾಗ ನನ್ನ ಜೊತೆಗೆ ಓದಿ, ಓದು ನಿಲ್ಲಿಸಿ, ಮನೆಯಲ್ಲಿದ್ದ ಅನೇಕ ನನ್ನ ಜೊತೆಗಾರರು ಬಾಗಿಲಿಗೆ ಬಂದ ಸರ್ಕಾರಿ ನೌಕರಿಯನ್ನು ತಿರಸ್ಕರಿಸಿದ್ದ ಸ್ನೇಹಿತರು ನನ್ನ ಕಂಡು ನಕ್ಕಿದ್ದರು. ಕಾರಣ ಅವರೆಲ್ಲ ತಮ್ಮ ಮನೆಯ ಕೆಲಸದಾಳಿಗೆ ತಿಂಗಳಿಗೆ ಸಾವಿರದ ಆರುನೂರರಿಂದ ಎರಡುಸಾವಿರ ಕೊಡುತ್ತಿದ್ದರು. ಅಂತಹ ಸಂಪತ್ತು ತುಂಬಿದ್ದ ನಮ್ಮೂರು ಸುತ್ತಲ ಹಳ್ಳಿಗಳಿಗೇ ಹೆಸರಾಗಿತ್ತು. ಈ ದಿನಗಳು ಬಹುವರ್ಷ ಉಳಿಯಲಿಲ್ಲ ಹತ್ತು ಹನ್ನೆರಡು ವರ್ಷವಷ್ಟೇ. ಮರೆದದ್ದು ಅಕಾಲಿಕ ಮಳೆಯಿಂದ ಮಳೆಗಾಲದ ಬೆಳೆ ಹಾಳಾದರು ಚಳಿಗಾಲದ ಬೆಳೆ ಗೋಧಿ, ಬಿಳಿಜೋಳ, ಕಡಲೆ, ಕೆಕ್ಕರಿಕೆ ಹಣ್ಣು ಕೈಹಿಡಿಯುವ ಭರವಸೆಯ ಮೇಲೆ ಬದುಕು ನಿಲ್ಲುತ್ತಿತ್ತು.

ಇಂತಹ ನಂಬಿಕೆಯ ಕಾಲದಲ್ಲಿ ನಮ್ಮೂರ ಸಂಪತ್ತಿಗೆ ಬಲವಾದ ಆಘಾತ ಉಂಟಾಗಿದ್ದು ವರ್ಷಂಪ್ರತಿ ಸೆಪ್ಟೆಂಬರ್ ತಿಂಗಳಿಗೆ ಬರುತ್ತಿದ್ದ ಕೂಲಿ ಕೆಸಗಾರರ ಸಮಸ್ಯೆ. ಬೇರೆಬೇರೆ ತಾಲ್ಲೂಕುಗಳಿಂದ ಬರುತ್ತಿದ್ದ ಕೆಲಸಗಾರರು ಬರುವುದು ಕಡಿಮೆಯಾಗುತ್ತಾ ನಿಂತೇಹೋದಾಗ ಹೊಲಗಳಲ್ಲಿ ಬೆಳೆದ ಸೇಂಗಾ ಈರುಳ್ಳಿ ಮನೆಗಳಿಗೆ ತರುವುದು ತಡವಾಗಿ ಹೊಲಗಳಲ್ಲೇ ಹಾಳಾಗಿ ಕೈಸೇರದಂತಾಗ ತೊಡಗಿದವು. ಇದರಿಂದ ತುಂಬಾ ನಷ್ಟ ಅನುಭವಿಸ ತೊಡಗಿದರು. ಈ ಸಂದರ್ಭದಲ್ಲಿ ಲೋಕಲ್ಲಾಗಿ ಸಿಗುತ್ತಿದ್ದ ಕೂಲಿಯವರು ತುಂಬಾ ಡಿಮೆಂಡಾಗಿದ್ದರು. ಅವರಿಗಾಗಿ ಅವರ ಮನೆ ಬಾಗಿಲು ಕಾಯುವಂತಾಗಿತ್ತು. ಇದೇ ಸಂದರ್ಭ ಬಳಸಿಕೊಂಡ ಕೂಲಿಯವರು ತಂಡ ಕಟ್ಟಿಕೊಂಡು ಎಕರೆ ಗಟ್ಟಲೆ ಸೇಂಗಾ ಕಿತ್ತುತರೆಯಲು ಹತ್ತರಿಂದ ಹದಿನೈದು ಸಾವಿರ ರೂಪಾಯಿಗೆ ಏರಿಸಿದ್ದರಿಂದ ಬೆಳೆದ ಬೆಳೆಗಾರ ತುಂಬಾ ನಷ್ಟಕ್ಕೆ ಒಳಗಾಗತೊಡಗಿದ. ಹಿಂದೆ ಪರ ಊರಿನಿಂದ ಬರುತ್ತಿದ್ದ ಕೂಲಿಯವರ ಕಾಲದಲ್ಲಿ ಹೆಚ್ಚೆಂದರೆ ಎಕರೆಗೆ ಐದುಸಾವಿರ ಖರ್ಚುಬರುತ್ತಿತ್ತು.

ಮಾರ್ಕೇಟ್‌ನಲ್ಲಿ ಒಂದು ಎಕರೆ ಸೇಂಗಾಕ್ಕೆ ಎಂತಕೆಟ್ಟು ಬಂದರು ಹದಿನೈದು ಸಾವಿರಕ್ಕೆ ಮಾರಾಟವಾಗುತ್ತಿತ್ತು. ಆಗ ಕನಿಷ್ಟ ಹತ್ತುಸಾವಿರವಾದರು ಕೈಗೆ ಹತ್ತುತ್ತಿತ್ತು. ಈಗ ಹತ್ತುಸಾವಿರವಲ್ಲ ತಾವು ಒಂದು ಎಕರೆ ಸೇಂಗಾ ಬೆಳೆಯಲು ಖರ್ಚುಮಾಡಿದ ಹಣವು ಕೈಗೆ ಬರದಂತಾಗಿ ನಮ್ಮ ಊರ ರೈತನಿಗೆ ರೈತಾಪಿ ಕೆಲಸಕ್ಕಿಂತ ಎಂತಾದ್ದಾದರು ನೌಕರಿ ಸಿಕ್ಕರೆ ಸಾಕಪ್ಪಾ ಎನ್ನುವಂತಾಗಿದ್ದರು. ಈ ಸಂದರ್ಭದಲ್ಲಿ ನಮ್ಮೂರಿನಲ್ಲಿ ಹೈಸ್ಕೂಲ ಮುಗಿಯುತ್ತಿದ್ದಂತೆ ಅನೇಕರು ಶಿಕ್ಷಕವೃತ್ತಿಯಕಡೆ ಮುಖಮಾಡಿದ್ದುಂಟು. ಕೂಲಿಕಾರರ ಸಮಸ್ಯೆಯಿಂದ ದಿಕ್ಕೆಡುತ್ತಿದ್ದ ನಮ್ಮೂರ ಕೃಷಿ ಚಟುವಟಿಕೆಯ ಈ ಸಂದರ್ಭದಲ್ಲಿ ಆಂಧ್ರದ ತಂಬಾಕು ಕಂಪೆನಿಯವರು ನಮ್ಮೂರುಗಳನ್ನು ಪ್ರವೇಶಮಾಡಿ ಕಂಪನಿಯವರೆ ತಂಬಾಕು ಬ್ಯಾರನ್ನ ಕಟ್ಟಿಸಿ, ತಂಬಾಕು ಸಸಿಗಳನ್ನು ಅವರೆ ನರ್ಸರಿಗಳಲ್ಲಿ ಬೆಳೆಸಿ, ಹೊಲಗಳಿಗೆ ತಂದು ನಾಟಿಮಾಡಿ ತಂಬಾಕು ಬೇಯಿಸಿ ಗ್ರೇಡಿಂಗೆ ಆಂಧ್ರದಿಂದಲೆ ಕೂಲಿಯವರನ್ನು ಕರೆತಂದು ಮನೆಬಾಗಿಲಲ್ಲೆ ತಂಬಾಕನ್ನು ತೂಕಮಾಡಿಕೊಂಡು ಖರೀದಿಸಿ ನಿಯತ್ತಿನಿಂದ ರೈತರ ಕೈಗೆ ಹಣಕೊಟ್ಟು ಹೋಗುತ್ತಿದ್ದರು. ಆರಂಭದಲ್ಲಿ

ನಮ್ಮ ಊರ ರೈತರು ಹಿಂದೇಟು ಹಾಕಿದರು ಬರುಬರುತ್ತಾ ಇಡೀ ಊರಿನ ಎಲ್ಲ ಕುಟುಂಬಗಳು ತಂಬಾಕು ಬೆಳೆವ ಕುಟುಂಬಗಳಾದವು. ಹಾಗೆ ತಂಬಾಕು ಬೆಳೆಯುವ ಹಾಗು ಪಿಕ್ಕಿಂಗ್ ಗ್ರೇಡಿಂಗ್ ಎಲ್ಲಾ ಇಲ್ಲಿಯವರೆ ಕಲಿತು ಕರಗತ ಮಾಡಿಕೊಂಡು ನಮ್ಮೂರಜನ ಸೇಂಗಾ ಈರುಳ್ಳಿ ಬೆಳೆಗಳಿಂದ ಸ್ವಲ್ಪ ಅಂತರ ಕಾದುಕೊಂಡರು. ತಂಬಾಕು ಕಪ್ಪುಮಣ್ಣಿನಲ್ಲಿ ಬೆಳೆಯಲು ಸೂಕ್ತ ಅಲ್ಲದ ಪ್ರಯುಕ್ತ ಇನ್ನು ಸೇಂಗಾ ಈರುಳ್ಳಿ ಕುಂಟುತ್ತಾ ಉಳಿದುಕೊಂಡಿದ್ದವು.

ತಂಬಾಕು ಬೆಳೆ ಲಾಭದಾಯಕ ಆದರೆ ಯಾವಾಗ ಬ್ಯಾನ್ ಆಗುತ್ತದೆ ಎಂಬ ಆತಂಕ. ಇದರಿಂದಾಗಿ ನಮ್ಮೂರಿನ ಜನಸಾಮಾನ್ಯನು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಯೋಚಸತೊಡಗಿ, ಮಕ್ಕಳನ್ನು ಓದಿಸಿ ಎಂತಾದ್ದಾದರು ನೌಕರಿ ಸಿಗುವಂತಾದರೆ ಸಾಕು ಎಂಬಂತ್ತೆ ಚಿಂತಿಸತೊಡಗು ವಂತಾಗಿತ್ತು. ಮಕ್ಕಳನ್ನು ದೊಡ್ಡ ಪೇಟೆ ಪಟ್ಟಣಗಳಿಗೆ ಕಳಿಸಿ ಓದಿಗೆ ಹಚ್ಚಲಾಗದಿದ್ದರು, ನ್ಯಾಮತಿಯಲ್ಲಿರುವ ಐ.ಟಿ.ಐ.ನಂತ ಶಿಕ್ಷಣ ಕೊಡಿಸುವಲ್ಲಿ ಆಸಕ್ತರಾದರು. ಅಲ್ಲಿ ಶಿಕ್ಷಣ ಪಡೆದು ಬೆಂಗಳೂರು ಮೈಸೂರುಗಳಲ್ಲಿ ಕೆಲಸಕ್ಕೆ ಸೇರಿ ಉತ್ತಮ ಜೀವನ ನಡೆಸುತ್ತಿದ್ದ ನಮ್ಮ ಊರಿನ ಕೆಲವು ಹುಡುಗರನ್ನು ಕಂಡ ಆನೇಕ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಐ.ಟಿ.ಐ. ಮಾಡಿಸಿ ಬೆಂಗಳೂರಿನಲ್ಲಿ ಒಂದು ನೌಕರಿ ಹಿಡಿದರೆ ಸಾಕು. ಈ ಹೊಲದ ಕೆಲಸ ಸಾಕು. 'ಅದೇ ತಮ್ಮ ಬದುಕಿನ ಗುರಿ' ಎಂದು ತಿಳಿದು ಊರಿನ ಬಹುಜನ ತಮ್ಮ ಮಕ್ಕಳ ಓದಿನಕಡೆ ಹೆಚ್ಚುಹೆಚ್ಚು ನಿಗವಹಿಸುತ್ತಾ, ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಊರಾಗಿನ ಸರ್ಕಾರಿ ಶಾಲೆಗೆ ಸೇರಿಸದೆ ನ್ಯಾಮತಿ ಹೊನ್ನಾಳಿಯಲ್ಲಿನ ಕಾನ್ವೆಂಟ್ ಶಾಲೆಗೆ ಸೇರಿಸಿ ಶಿಕ್ಷಣ ಕೊಡಿಸುವಷ್ಟು ಎಚ್ಚರಹೊಂದಿ, ಮನೆಯಲ್ಲಿ ಮಗು ಹುಟ್ಟುತ್ತಿದ್ದಂತೆ ಆ ಮಗುವನ್ನು ಎಂತಹ ಶಾಲೆಗೆ ಸೇರಿಸಬೇಕೆಂದು ಚಿಂತಿಸತೊಡಗುವಂತಾಗಿದ್ದರು ನಮ್ಮೂರ ಜನ. ಇದಕ್ಕೂ ಹಿಂದಿನ ವರ್ಷಗಳಲ್ಲಿ ಹಣ ಕೂಡಿಟ್ಟುಕೊಂಡು ಗಂಡು ಮಗನಿಗಾಗೆ ಜಮೀನು ಕೊಳ್ಳಲು ಮುಂದಾಗುತ್ತಿದ್ದರು. ಹೆಣ್ಣು ಮಗಳಾಗಿದ್ದರೆ ಆಕೆ ಮದುವೆಗಾಗಿ ಹಣ ಕೂಡಿಟ್ಟುಕೊಂಡು ಎಷ್ಟು ಖರ್ಚಾದರು ಸೈ, ನೌಕರಿ ಮಾಡುವ ಗಂಡು ಹುಡುಕಲು ಪ್ರಯತ್ನಿಸುತ್ತಿದ್ದರು. ಹೀಗಿತ್ತು ಒಂದು ಕಾಲದಲ್ಲಿ ನಮ್ಮೂರ ಜನರ ಮನಸ್ಥಿತಿ.

ತಂಬಾಕು ಬೆಳೆಯಿಂದ ಆರ್ಥಿಕ ಸ್ಥಿತಿ ಅಲ್ಪ ಸುಧಾರಿಸಿ ಬದುಕು ಗರಿಫಟ್ಟಿಕೊಳ್ಳುತ್ತಿರುವಾಗಲೆ ತಂಬಾಕು ಬ್ಯಾನಾಗಿ ನಮ್ಮೂರ ರೈತ ಕುಟುಂಬಗಳು ಕಂಗಾಲಾಗಿ ಮತ್ತೆ ಸೇಂಗಾ ಈರುಳ್ಳಿ ಕಡೆ ಮುಖಮಾಡಿ ಬೆಳೆಗೆ ಕೈಹಾಕಿದರು. ಬೆಳೆ ಕಟಾವಿಗೆ ಬಂದಾಗ ಕೂಲಿಯವರು ಸಿಗದೆ ಹಾಗೆ ಅಪರೂಪಕ್ಕೆ ಸಾಹಸಪಟ್ಟು ಅವರ ಕೈ ಕಾಲು ಹಿಡಿದು ಹೊಲಗಳಿಗೆ ಕರೆತಂದರು ಅವರು ಕೇಳುವ ಕೂಲಿಯಿಂದ ಬೆಳೆ ಬೆಳೆದ ರೈತನಿಗೆ ದಮ್ಮಡಿ ಕಾಸು ಉಳಿಯದಂತ ಸ್ಥಿತಿ ತಲುಪಿತ್ತು 'ಬೆಲೆ'. ಇಂತಹ ಕಾಲದಲ್ಲಿ 'ಅತಿ ಸುಲಭದ ಕಷ್ಟವಿಲ್ಲದ ಬೆಳೆ' ಮೆಕ್ಕೆಜೋಳ ನಮ್ಮೂರ ರೈತರ ಹೊಲಗಳಲ್ಲಿ ಗರಿಬಿಚ್ಚಿ ನಳನಳಿಸಿ ತಲೆಎತ್ತಿ ಕಂಗೊಳಿಸತೊಡಗಿತ್ತು. ಮೆಕ್ಕೆಜೋಳ ಎಷ್ಟೇ ಚನ್ನಾಗಿ ಬಂದರು ಅದು ಅವನ ಖರ್ಚಿಗೆ ಸಾಕಾಗುತ್ತಿದ್ದಲ್ಲ. ಒಮ್ಮೆ ಮಗಳಿಗೋ ಹೆಂಡತಿಗೋ ಸೀತಾಗಿದೆಯೆಂದು ಶಿವಮೊಗ್ಗ ಡಾಕ್ಟರ್ ಹತ್ತಿರ ಹೋಗಿ ಬರಲು ಒಂದು ಎಕ್ಕರೆಯಲ್ಲಿನ ಮೆಕ್ಕೆಜೋಳ ಮಾರಿದರು ಹಣ ಸಾಕಾಗುತ್ತಿದ್ದಿಲ್ಲ. ಹೀಗಿತ್ತು ನಮ್ಮ ರೈತನ ಕಿಮ್ಮತ್ತು.

ಇನ್ನು ಯಾವ ಕಾರಣಕ್ಕೂ ತಮ್ಮ ಮಕ್ಕಳನ್ನು ಈ ಜಮೀನಿನ ಕೆಲಸಕ್ಕೆ ಹಚ್ಚಲೇಬಾರದೆಂದು ಪ್ರತಿ ರೈತಕುಟುಂಬ ಸ್ವಯಂನಿರ್ಧಾರ ಮಾಡಿದ ಸ್ಥಿತಿಗೆ ಬಂದಂತಾಗಿವೆ. ಹೆಣ್ಣಾಗಲಿ ಗಂಡಾಗಲಿ ರೈತಾಪಿ ಕೆಲಸದಿಂದ ಮುಕ್ತರಾಗಬೇಕೆಂಬ ಬಯಕೆ ಊರ ಕೇರಿ ತುಂಬಿದೆ. ಇದಕ್ಕೆ ಸಾಕ್ಷಿಯಾಗಿ ಈಗಾಗಲೇ ಐ.ಟಿ.ಐ.ಮಾಡಿಕೊಂಡ ಕೆಲಹುಡುಗರು ಬೆಂಗಳೂರಿನಲ್ಲಿ ನೌಕರಿ ಮಾಡುತ್ತಿದ್ದು ಅವರ ತಂದೆತಾಯಂದಿರು ಆಗಾಗ ಬೆಂಗಳೂರಿಗೆ ಹೋಗಿಬರುತ್ತಿದ್ದು ಬೆಂಗಳೂರಿನಲ್ಲಿ ತಮ್ಮ ಮಗ ಮನೆ ಕಟ್ಟಿರುವುದು ಹಾಗು ಮೊಮ್ಮಕ್ಕಳ ಓದು ಮತ್ತೆಲ್ಲ ವಿಚಾರವನ್ನು ರಂಗುರಂಗಾಗಿ ಹೇಳುತ್ತಿದ್ದನ್ನು ಕೇಳಿದ ಜನ, ತಮ್ಮ ಮಕ್ಕಳು ಬೆಂಗಳೂರಿನಲ್ಲಿ ನೌಕರಿ ಮಾಡುವ ಕನಸು ಕಟ್ಟಿಕೊಳ್ಳತೊಡಗಿ ಏನಾದರಾಗಲಿ ತನ್ನ ಪಿತ್ರಾರ್ಜಿತ ಸ್ವತ್ತು ಹೊಲಮನೆ ಮಾರಿಯಾದರು ಮಕ್ಕಳನ್ನು ಓದಿಸಲು ಸಿದ್ದವಾಗಿ ನಿಂತಿರುವುದು ಊರತುಂಬೆಲ್ಲಾ ಕಾಣಬರುತ್ತಿತ್ತು. ಹಳ್ಳಿಹಳ್ಳಿಗೆ 'ಪಿ.ಯು ಕಾಲೇಜು' 'ಡಿಗ್ರಿ ಕಾಲೇಜು'ಗಳು ಬಂದಿರುವುದರಿಂದ ಎಂತಹ ಬಡ ರೈತನ ಮಕ್ಕಳಲ್ಲಿ, ಹೆಣ್ಣಾಗಲಿ ಗಂಡಾಗಲಿ ಸ್ಪರ್ಧಾತ್ಮಕವಾಗಿ ಓದುವ ಹಟತುಂಬಿ ಕಾಲೇಜು ಮೆಟ್ಟಲು ಹತ್ತಿ ಓದಲು ತೊಡಗಿದ್ದರು. ಆದರೆ ಅವರ ಹಟದ ಓದಿಗೆ ಹಾಗು ಅವರ ಓದಿನ ಉಮೇದಿಗೆ ತಕ್ಕದಾದ ಶಿಕ್ಷಣ ಈ ಹಳ್ಳಿ ಕಾಲೇಜುಗಳಲ್ಲಿ ಸರಿಯಾಗಿ ದೊರೆಯುತ್ತಿದ್ದಿಲ್ಲ. ಹಾಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ಇಲ್ಲದೆ ನಮ್ಮ ಊರಿನ ಪ್ರತಿಭಾವಂತ ಮಕ್ಕಳು ಒಳ್ಳೆಯ ನೌಕರಿ ಹಿಡಿಯುವಲ್ಲಿ ವಿಫಲವಾಗುತ್ತಿರು ವುದು ನೋವಿನ ಸಂಗತಿಯಾಗಿತ್ತು. ಈಗ ಬಹುಪಾಲು ಕುಟುಂಬಗಳ ಒಬ್ಬ ಸದಸ್ಯರಾದರೂ (ಹೆಣ್ಣಾಗಲಿ

ಗಂಡಾಗಲಿ) ಸ್ಪರ್ಧೆಗಿಳಿದವರಂತೆ ಊರು ಬಿಟ್ಟು ನಾಡಿನ ಯಾವ ಮೂಲೆಯಲ್ಲಾದರು ಸರಿ ನೌಕರಿಗೆ ಹೋಗಲು ಸಿದ್ದರಾಗಿ ನಿಂತು ನೌಕರಿಯ ಹುಡುಕಾಟದಲ್ಲಿದ್ದಾರೆ.

ಈಗ ಹತ್ತು ವರ್ಷಗಳ ಹಿಂದೆ ನಮ್ಮೂರ ಸುತ್ತ ಬೋರ್ ಹಾಕಿಸಿದರೆ ಒಂದೋ, ಎರಡು ಇಂಚು ನೀರು ಬೀಳುತ್ತಿತ್ತು. ಹಾಗೆ ಬಿದ್ದ ನೀರನ್ನು ಬಳಸಿಕೊಂಡು ಎರಡು ವರ್ಷ ಬೆಳೆ ತೆಗೆಯುವುದರಲ್ಲಿ ಬೋರುಗಳು ಬತ್ತಿಹೋಗುತ್ತಿದ್ದವು. ಇಂಥಹ ಸಂಕಷ್ಟಗಳನ್ನು ನಮ್ಮೂರ ರೈತರು ಸಾಲುಸಾಲು ಅನುಭವಿಸಿ ಕೈಸುಟ್ಟುಕೊಂಡಿದ್ದೇ ಹೆಚ್ಚು. ಈಗ ಎರಡು ವರ್ಷದಿಂದ ನಮ್ಮೂರ ಸುತ್ತಲಿನ ಕರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತಂದು ಕೆರೆ ತುಂಬಿಸುವ ಯೋಜನೆಯ ಕಾರ್ಯಗತದಿಂದಾಗಿ ಬತ್ತಿದ ಬೋರುಗಳು ಛಾಲನೆಗೊಂಡಿದ್ದರಿಂದ ರೈತರೆಲ್ಲ ಅಡಿಕೆ ಕೂರಿಸುತ್ತಿದ್ದಾರೆ. ರೈತರೆಲ್ಲ ಹೊಸದಾಗಿ ಬೋರುಗಳನ್ನು ಹಾಕಿಸುತ್ತ ಅಡಿಕೆಯ ಬೆಳೆಯಲ್ಲಿ ಖುಷಿಯ ಕನಸು ಹೆಣೆಯುತ್ತಿದ್ದಾರೆ. ಈ ಕನಸಿನ ಮಧ್ಯೆಯು ತಮ್ಮ ಮಕ್ಕಳನ್ನು ಓದಿಸಬೇಕೆಂಬ ಹಂಬಲದಿಂದ ಹಿಂದೆ ಸರಿದಿಲ್ಲ. ಇದೊಂದು ಶುಭ ಸೂಚನೆ.

ನಮ್ಮೂರಿನ ರೈತರು ಅಡಿಕೆ ಹಾಕುವ ಉಮೇದಿಗೆ ಕೆಲವು ಕೈಲಾಗದ ಕಿಡಿಗೇಡಿಗಳ ಅಪಸ್ವರದ ಮಾತಿನಿಂದ ತೆಲೆ ಕೆಟ್ಟಂತಾಗಿ ಅಳುಕಿನ ಮನಸ್ಥಿತಿಯಲ್ಲಿದ್ದಂತೆ, ಅಡಿಕೆ ಕೂರಿಸಲೋ ಬಿಡಲೋ ಎಂಬ ಅಲಾಜೋಲಿಯಲ್ಲಿದ್ದಾರೆ. ಈ ಅಲಾಜೋಲಿಗೆ ಕಾರಣವೇ ಇಲ್ಲ. ಧೈರ್ಯವಾಗಿ ತಡಮಾಡದೆ ಒಂದು ಕುಟುಂಬಕ್ಕೆ ಕನಿಷ್ಟ ಒಂದು ಎಕರೆ ಅಡಕೆ ಕೂರಿಸಿದರೂ ಅದನ್ನು ಎಂತಹ ಕಾಲದಲ್ಲಾದರು ಕಾಪಾಡಿಕೊಳ್ಳಬಹುದು. ಅದಲ್ಲದೆ ಸೀಮೆಲ್ಲಾ ಅಡಿಕೆ ಹಚ್ಚಾಕೆ ಸುರುವಾಗಿ ಅಡಿಕೆಬೆಲೆ ಬಿದ್ದೋಗುತ್ತದೆ ಎಂಬ ಆತಂಕದ ಮಾತು. ಅಡಿಕೆ ಬ್ಯಾನಾಗುತ್ತದೆ ಎಂದು ಹೆದರಿಸುವವರು ಎಲ್ಲಾ ಕಾಲದಲ್ಲೂ ಇದ್ದೇಇದ್ದರು ಅದಕ್ಕೆ ಅಂಜಬೇಕಿಲ್ಲ. ನಮ್ಮೂರ ಮಳ್ಳು ಹಾಗು ಕೆಂಗಲು ಹೊಲಗಳಲ್ಲಿ ಸಂಮೃದ್ಧ ಅಡಿಕೆ ಬೆಳೆ ಬರುತ್ತದೆ. ಅಡಿಕೆಯಲ್ಲಿ ಯಾಲಕ್ಕಿ ಮೆಣಸು, ಜಾಯಿಕಾಯಿ, ಲವಂಗ ಇತರೆ ಉಪಬೆಳೆಗಳು ಚನ್ನಾಗಿ ಬರುತ್ತವೆ. ಅದ್ದರಿಂದ ಹೆದರುವುದು ಅವಶ್ಯವಿಲ್ಲ. ಅಡಿಕೆ ಬೆಳೆಯಿಂದಲಾದರು ನಮ್ಮೂರ ಹೊಲಗಳು ನಳನಳಿಸಲಿ ಹಾಗು ರೈತರ ಮುಖದಲ್ಲಿ ನಗುಚಲ್ಲಲಿ. ಆ ಒಂದು ಕಾಲದಲ್ಲಿ ಹೊಲಗಳು ತುಂಬಿ ಬೆಳೆದು ನಿಂತಾಗ ಹರವುಹರವು ತುಂಬಾ ನಮ್ಮೂರ ಜನರ ಖುಷಿ ನಗು ತುಂಬಿ ಕೂಲಿಯವರ ಸಹಕಾರದಿಂದ ಕೊಯಿಲು ಒಕ್ಕಲು ನೆಡೆಯುತ್ತಿದ್ದ ಆ ದಿನದಲ್ಲಿ ಊರಕೇರಿಗಿಂತ ಹೊಲಗಳಲ್ಲಿ ಎಲ್ಲೆಂದರಲ್ಲಿ ಕರ್ತವ್ಯ ನಿರತ ಜನವೋ ಜನ. ಈಗ ಇಡೀ ದಿನ ಹರವು ಹರವು ತಿರುಗಿದರು ಒಂದು ನರಪಿಳ್ಳೆಯು ಕಣ್ಣಿಗೆ ಬಿದ್ದರೆ ಅದು ನಮ್ಮ ಪುಣ್ಯ. ಏನಚ್ಚರಿ ಊರ ಜನರೆಲ್ಲಾ ಎತ್ತಹೋದರು ಹೊಲಗಳನ್ನು ಮರೆತುಬಿಟ್ಟರೆ! ಅದೆಷ್ಟು ಕಷ್ಟದಿಂದ ಹೋರಾಡಿ ಉಳಿಸಿಕೊಂಡು ಕಾಪಾಡಿಕೊಂಡು ಬಿತ್ತಿ ಬೆಳೆದ ಹೊಲ. ಮನೆತನದ ಗೌರವವನ್ನು ಸರೀಕರ ಎದುರು ತೆಲೆಎತ್ತಿ ನಿಲ್ಲಲು ಸಹಕರಿಸಿದ ಹೊಲ. ತಮ್ಮ ಮೈಯ ಬೆವರನ್ನು ಹರಿಸಿ ಹದಗೊಳಿಸಿದ ಈ ಹೊಲ. ತನ್ನ ಒಡೆಯನ ಆಗಮನಕ್ಕೆ ಕಾದುಕೂತಿದೆ. ಮನೆಯ ಒಡೆಯ ಮನೆಯ ಒಳಗಿರುವನೋ ಇಲ್ಲವೋ! ಈಗೀಗ ಊರಹಬ್ಬಗಳು ಬಲು ಜೋರು ಜೋರು!

ಒಂದು ಕಾಲದಲ್ಲಿ ಹಬ್ಬಗಳು ಬಂದರೆ ಯಾಕಾದರು ಈ ಹಬ್ಬಗಳು ಬರುತ್ತಿವೆ. ಹಬ್ಬದ ಖರ್ಚಿಗೆ ಯಾರ ಕಾಲು ಹಿಡಿಯಬೇಕೆಂದು ಚಿಂತಿಸಿ ಚಿಂತಿಸಿ ಕೊನೆಗೆ ತಮ್ಮ ಆತ್ಮಾಭಿಮಾನವನ್ನು ಬಿಟ್ಟು ನ್ಯಾಮತಿ ಪೇಟೆಯಲ್ಲಿ ತಮ್ಮ ಆತ್ಮಾಭಿಮಾನವನ್ನು ಹರಾಜಿಗಿಟ್ಟು ಗೋಗೆರೆದು ಕಣ್ಣೀರಿಟ್ಟು ಹಳೆಯ ಬಾಕಿ ಇರಲಿ, ಮುಂದೆ ಮಳೆಬೆಳೆ ಆದರೆ ಮುಂದೆ ತೀರಿಸೇನಂತೆ, ಈ ಬಾರಿ ಬಂದಿರುವ ಹಬ್ಬ ನಡೆಸಿಕೊಡು ನನತಂದೆ ಎಂದು ಕಣ್ಣೀರಿಟ್ಟು. ದಿನಸಿ ಅಂಗಡಿ, ಬಟ್ಟೆ ಅಂಗಡಿಯವರ ಕರುಣೆಯಿಲ್ಲದ ಕೃಪಾಕಟಾಕ್ಷದ ಬಾರಿಬಡ್ಡಿ ಚಕ್ರಬಡ್ಡಿಯ ಸಾಲದ ಹೊರೆಹೊತ್ತ ಆ ಹಬ್ಬಾ, ಮನೆಯ ಒಡೆಯನ ನೀರಿಳಿಯದ ಗಂಟಲಲ್ಲಿ ಹಬ್ಬದ ಹೋಳಿಗೆ ತುರುಕುವ ಬಲತ್ಕಾರದ ಹಬ್ಬಗಳ ಸಂಭ್ರಮ ಕೇರಿಕೇರಿ ತುಬಿರುತ್ತಿತ್ತು. ಆದರೀವತ್ತು ಹಬ್ಬಗಳ ಸಂಭ್ರಮವೋ ಸಂಭ್ರಮದ ಸ್ಪರ್ಧೆ ನಡೆದಂತೆ, ನಡೆಯುತ್ತಿವೆ ಒಂದಕ್ಕಿಂತ ಒಂದರ ಮೇಲಾಟದಲ್ಲಿ. ದಸರ, ದೀಪಾವಳಿ, ತೇರಬ್ಬ, ಸಿಡಿಹಬ್ಬ, ಗುಡಿಹಬ್ಬ, ಹೋರಿ ಬೆದರಿಸುವ ಒಂದಕ್ಕಿಂತ ಒಂದು ಭವ್ಯವಾಗಿ ನೋಡಿ ಕಣ್ಣುತುಂಬಿಕೊಳ್ಳಬೇಕು ಹಾಗೆ ನಡೆಯುತ್ತವೆ. ಈ ಹಬ್ಬಗಳೆಲ್ಲ ನಮ್ಮೂರ ಹುಡುಗರು ಪರ ಊರಲ್ಲಿ ನೌಕರಿ ಹಿಡಿದು ಹಬ್ಬಕ್ಕೆಂದು ಊರಿಗೆ ಬಂದು ಖುಷಿಪಡುವ ಸಂಭ್ರಮಿಸುವುದರ ಸಂಕೇತ ಎನ್ನಬಹುದೆ?

ಹಬ್ಬಾದ ಮರುದಿನವೇ ಊರು ಕೇರಿಗಳೆಲ್ಲ ಬಣಗುಟ್ಟುತ್ತವೆ ಬಣಗುಟ್ಟುತ್ತಿವೆ ಊರುಕೇರಿಗಳು ! ಕೇರಿತುಂಬಾ. ಆಟ ಆಡುವ ಹುಡುಗರಿಲ್ಲ! ಕೂಗುಕೇಕೆ ಮೊದಲೇ ಇಲ್ಲ! ಎಲ್ಲಿ ಹೋದರು ಗೋಲಿ ಆಡುವ, ಚಿಣ್ಣಿ

**42ನೇ ಪುಟಕ್ಕೆ....**

# ಅನಂತದೆಡೆಗೆ ನಡೆದ ಸಂತ
# ಡಾ. ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರು

90 ವರ್ಷಗಳ ಹಿಂದೆ ಸನ್ಯಾಸದೀಕ್ಷೆ ಪಡೆದ ಸಂದರ್ಭದಲ್ಲಿ ಡಾ. ಶ್ರೀ ಶ್ರೀ ಶಿವಕುಮಾರಸ್ವಾಮೀಜಿಯವರು ನೀವು ನನ್ನನ್ನು ಈ ಲೋಕಕ್ಕೆ ತಂದಿದ್ದೀರಿ ಲೋಕದ ಸೇವೆ ಮಾಡಲು ನನ್ನನ್ನು ಕಳುಹಿಸಿಕೊಡಿ ಎಂದು ತಮ್ಮ ತಂದೆ–ತಾಯಿಗಳಿಗೆ ಹೇಳಿದ್ದ ಮಾತಿದು. ತಮ್ಮ ಗುರುಗಳಿಗೆ ಹಾಗು ತಂದೆಗೆ ಕೊಟ್ಟ ಮಾತಿನಂತೆಯೇ ತಮ್ಮ ಇಡೀ ಜೀವನವನ್ನು ಸಮಾಜ ಸುಧಾರಣೆಗಾಗಿ ಹಾಗೂ ಸಮಾಜ ಸೇವಾ ಕಾರ್ಯಗಳಿಗೆ ಸಮರ್ಪಿಸಿಕೊಂಡ ಶಿವಕುಮಾರ ಸ್ವಾಮೀಜಿಯವರು ನಾಡು ಮತ್ತು ರಾಷ್ಟ್ರ ಕಂಡ ಮಹಾನ್ ಚೇತನ. ಹೇಗೆ ದೀಪ ತಾನುರಿದು ಜಗತ್ತಿಗೆ ಬೆಳಕು ನೀಡುತ್ತದೆಯೋ ಹಾಗೆ ಶ್ರೀಗಳವರು ತಮ್ಮ 111 ವರ್ಷಗಳ ಕಾಲ ಸಮಾಜ ಸೇವೆಗಳಾದ ಶಿಕ್ಷಣ, ದಾಸೋಹ, ಕಾಯಕ, ಧರ್ಮಬೋಧನೆ ಮುಂತಾದ ಸಾಮಾಜಿಕ ಸೇವಾಕಾರ್ಯಗಳಿಗಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದರು. ಇಂತಹ ಮಹಾತ್ಮರ ಬದುಕು ನಿಜಕ್ಕೂ ಸಾರ್ಥಕ. ಇಂತಹ ಮಹಾತ್ಮರಿಗೆ ಜನ್ಮನೀಡಿದ ತಂದೆ–ತಾಯಿಗಳೇ ಪುಣ್ಯವಂತರು. 8 ದಶಕಗಳ ಕಾಲ ಮಠದ ಅಧಿಕಾರಾವಧಿಯಲ್ಲಿ ಶಿಕ್ಷಣ, ಅನ್ನದಾಸೋಹ, ಜಪ–ತಪ, ಇಷ್ಟಲಿಂಗಪೂಜೆ, ಭಕ್ತರ ಯೋಗಕ್ಷೇಮ, ಮಠದ ವಿದ್ಯಾರ್ಥಿಗಳ ಮೇಲೆ ಕಾಳಜಿ ಮುಂತಾದ ಕಾಯಕಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಲೋಕಸೇವೆಗಾಗಿಯೆ ಬದುಕನ್ನು ಧಾರೆಯೆರೆದು ಭಕ್ತರ ಮತ್ತು ಮಠದ ವಿದ್ಯಾರ್ಥಿಗಳ ಪಾಲಿಗೆ ನಡೆದಾಡುವ ದೇವರಾಗಿದ್ದರು.

ಬಸವಣ್ಣನವರ 'ಕಾಯಕವೇ ಕೈಲಾಸ'ವೆಂಬ ಆದರ್ಶವನ್ನ ಸಂಪೂರ್ಣವಾಗಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಇನ್ನೊಬ್ಬರ ಯೋಗಕ್ಷೇಮಕ್ಕಾಗಿ ಕಾಯಕ ಮಾಡುತ್ತ ಮಠವನ್ನು ಬಹು ಎತ್ತರಕ್ಕೆ ಕೊಂಡೊಯ್ದ ಏಕೈಕ ಸ್ವಾಮೀಜಿ ಎಂದರೆ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು. ಪೂಜ್ಯ ಶ್ರೀಗಳವರು ತಮ್ಮ ದಿನನಿತ್ಯದ ಕಾಯಕದ ಫಲವಾಗಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವುದರ ಮೂಲಕ 8 ದಶಕಗಳ ಕಾಲ ಲಕ್ಷಾಂತರ ವಿದ್ಯಾರ್ಥಿಗಳು ಶ್ರೀಗಳವರು ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದು ಶ್ರೀಗಳವರ ಆಶೀರ್ವಾದದಿಂದ ಮತ್ತು ಮಾರ್ಗದರ್ಶನದಿಂದ ಅಧಿಕಾರಿಗಳಾಗಿ, ಶಿಕ್ಷಕರುಗಳಾಗಿ, ವಕೀಲರಾಗಿ, ಇಂಜಿನಿಯರುಗಳಾಗಿ ಮತ್ತು ಜನ ಪ್ರತಿನಿಧಿಗಳಾಗಿ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಇಂದಿಗೂ 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶ್ರೀಗಳವರ ಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸಾವಿರಾರು ನೌಕರರು ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಗಳವರಲ್ಲಿದ್ದ ಕಾಯಕನಿಷ್ಠೆ, ಪೂಜಾನಿಷ್ಠೆ, ಅನ್ನದಾಸೋಹ ಮುಂತಾದ ಸೇವಾಕಾರ್ಯಗಳು ಪೂಜ್ಯರು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಇಂದಿಗೂ ಮುನ್ನಡೆಯುತ್ತಿವೆ. ಪೂಜ್ಯ ಶ್ರೀಗಳವರು ಶ್ರೀಮಠದ ಉತ್ತರಾಧಿಕಾರಿ ಯಾದದ್ದು ಆಕಸ್ಮಿಕ. ತಮ್ಮ ಗುರುಗಳಾದ ಶ್ರೀಉದ್ದಾನ ಶಿವಯೋಗಿಗಳು ತಮ್ಮ ಶಿಷ್ಯರಿಗೆ ಹಸಿದ ಹೊಟ್ಟೆಗೆ ಅನ್ನ ನೀಡುವುದಕ್ಕಿಂತ ದೊಡ್ಡ ಸೇವೆ ಮತ್ತೊಂದಿಲ್ಲ ಇಂತಹ ಸೇವೆಯನ್ನು ನೀವು ಮಾಡಬೇಕು ಎಂದು ಸಲಹೆ ನೀಡಿ ಯಾರ ಅನುಮತಿಯನ್ನೂ ಪಡೆಯದೆ ದೀಕ್ಷೆ ನೀಡಿದರು. ತಮ್ಮ ಗುರುಗಳು ನೀಡಿದ ದೀಕ್ಷೆಯನ್ನು ಸಂತೋಷವಾಗಿ ಸ್ವೀಕರಿಸಿ ಗುರುಗಳ ಆಸೆಯಂತೆ ಬಹು ದೊಡ್ಡ ಮಟ್ಟದಲ್ಲಿ ಶಿಕ್ಷಣ ಮತ್ತು ಅನ್ನದಾಸೋಹಕ್ಕೆ ಶ್ರೀಮಠವನ್ನು ಅನ್ವರ್ಥನಾಮವಾಗಿಸಿದರು. ಶಾಲಾ ಮಕ್ಕಳ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ರೂಪಿಸುವುದರೊಂದಿಗೆ ಸರ್ಕಾರಕ್ಕೂ ಮಾದರಿಯಾದರು.



ಆರ್. ರಂಗನಾಥ್
ಬೆಂಗಳೂರು.
ಮೊ : 7829999060

ಪೂಜ್ಯರು ಸದಾ ಮಠದ ಕಾಯಕತತ್ವದ ಪರಿಪಾಲಕರಾಗಿದ್ದರು. ಅವರೆಂದಿಗೂ ಈಗಿನ ಕೆಲವು ಸ್ವಾಮೀಜಿಗಳಂತೆ ದಂತಗೋಪುರದಲ್ಲಿ ಕುಳಿತು ಇತರರಿಂದ ಕೆಲಸ ಮಾಡಿಸಿದವರಲ್ಲ, ಇತರರ ಜೊತೆಯಲ್ಲೆ ನಿಂತು ದುಡಿದವರು. ಮಠದ ಅಡಿಗೆಮನೆಯಲ್ಲಿ ಮಕ್ಕಳಿಗಾಗಿ ಮತ್ತು ಮಠಕ್ಕೆ ಬರುವ ಭಕ್ತರಿಗಾಗಿ ಮುದ್ದೆ ತಿರುವಿದ್ದರು. ಅನ್ನ ಬಸಿದಿದ್ದರು. ಹೊಲ ಗದ್ದೆಗಳಲ್ಲಿ ಕೆಲಸ ಮಾಡಿದ್ದರು. ಕಟ್ಟಡ ನಿರ್ಮಾಣಕ್ಕೆ ಕಲ್ಲುಮಣ್ಣು ಹೊತ್ತಿದ್ದರು. ಕಸವನ್ನೂ ಗುಡಿಸಿದ್ದರು. ಮಕ್ಕಳಿಗೆ ಪಾಠದ

ಜೊತೆಗೆ ಶಿಕ್ಷಣದ ಮಹತ್ವ ಮತ್ತು ಒಳ್ಳೆಯ ಸಂಸ್ಕಾರವನ್ನು ಹೇಳಿಕೊಡುತ್ತಿದ್ದರು. ಆದಕಾರಣ ಶ್ರೀಮಠದಲ್ಲಿರುವ ಪ್ರತಿಯೊಂದು ಕಲ್ಲುಗಳು ಪೂಜ್ಯ ಶ್ರೀಗಳವರ ಹೆಸರನ್ನು ಇಂದಿಗೂ ಹೇಳುತ್ತವೆ. ಶ್ರೀಮಠ ಮತ್ತು ಮಕ್ಕಳೆಂದರೆ ಅವರಿಗೆ ಅಪಾರವಾದ ಪ್ರೀತಿ. ಮಠವೆಂದರೆ ಸ್ವಾಮೀಜಿ, ಸ್ವಾಮೀಜಿ ಎಂದರೆ ಮಠ ಎಂಬಂತೆ ಬದುಕಿದ್ದರು.

ಪೂಜ್ಯರು ಮಠಕ್ಕೆ ಬರುವ ಸರ್ಕಾರದ ಅಧಿಕಾರಿಗಳನ್ನಾಗಲಿ, ರಾಜಕಾರಣಿಗಳನ್ನಾಗಲಿ ಮಠವನ್ನು ನಡೆಸುವುದು ಕಷ್ಟ. ಮಠಕ್ಕೆ ಧನಸಹಾಯ ಕೊಡಿ ಎಂದು ಕೇಳಿದವರಲ್ಲ. ಮಠದ ಭಕ್ತರೇ ಶ್ರೀಮಠವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಭಕ್ತರೇ ಮಠದ ಆಸ್ತಿ. ನಮ್ಮ ಸೇವೆ ನಿಮಿತ್ತ ಮಾತ್ರ ಎಂದು ಹೇಳುತ್ತಿದ್ದರು. ಪೂಜ್ಯರು ಅಪಾರವಾದ ಜ್ಞಾನಶಕ್ತಿ, ತಾಳ್ಮೆ ಮತ್ತು ಸಹಾನುಭೂತಿಯನ್ನು ಹೊಂದಿದ್ದರು. ಪೂಜ್ಯರು ಯಾವುದೇ ಜಾತಿ, ಮತ, ಭೇದವನ್ನು ಎಣಿಸದೆ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ನಾನು ತುಮಕೂರು ಜಿಲ್ಲೆಯವನೇ ಆಗಿದ್ದರಿಂದ ಮತ್ತು ಜೆ.ಎಸ್.ಎಸ್ ಶಿಕ್ಷಣ ಸಂಸ್ಥೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದಲ್ಲಿ 15 ವರ್ಷಗಳ ಕಾಲ ಸೇವೆ ಮಾಡಿದ ಅನುಭವ ಹೊಂದಿದ್ದರಿಂದ 2016ರಲ್ಲಿ ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯಲ್ಲಿ ಒಂದು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವನ್ನು ಪ್ರಾರಂಭಿಸಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ತುಮಕೂರು ಜಿಲ್ಲೆಯಿಂದಲೂ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು IAS, IPS, IFS ಮತ್ತು KAS ಮುಂತಾದ ಹುದ್ದೆಗಳಿಗೆ ಇಲ್ಲಿ ತರಬೇತಿ ಪಡೆದು ಆಯ್ಕೆಯಾಗಲಿ ಎಂಬ ಉದ್ದೇಶ ನನ್ನದಾಗಿತ್ತು. ಪೂಜ್ಯ ಶ್ರೀಗಳವರೂ ಸಹ ಇಂತಹ ಒಂದು ಆಲೋಚನೆಯನ್ನು ಹೊಂದಿದ್ದಾರೆ ಎಂಬ ಸಂಗತಿ ತಿಳಿದಿತ್ತು. ಆದಕಾರಣ ನಾನು ಮಠಕ್ಕೆ ಹೋಗಿ ಪೂಜ್ಯ ಶ್ರೀಗಳವರ ಪಾದಾರವಿಂದಗಳಿಗೆ ನಮಸ್ಕರಿಸಿ ಸುಮಾರು 3–4 ಪುಟಗಳಷ್ಟು ಬರವಣಿಗೆಯುಳ್ಳ ಪತ್ರವನ್ನು ನೀಡಿದಾಗ ಪೂಜ್ಯ ಶ್ರೀಗಳು ನನ್ನ ಪತ್ರವನ್ನು ನಿಧಾನವಾಗಿ ಪ್ರತಿಯೊಂದು ವಾಕ್ಯವನ್ನು ಸಹಾನುಭೂತಿಯಿಂದ ಓದಿದರು. ತಕ್ಷಣ ಅದರ ಸಾರಾಂಶ ಅರ್ಥಮಾಡಿಕೊಂಡು ಆಗಲಿ ನಮ್ಮ ಸಂಸ್ಥೆಯಲ್ಲೂ ಒಂದು ತರಬೇತಿ ಕೇಂದ್ರವನ್ನು ಪ್ರಾರಂಭಿಸೋಣ ಇದು ಒಳ್ಳೆಯ ಸಲಹೆ ಈ ನಿಮ್ಮ ಪತ್ರವನ್ನು ಆಡಳಿತ ಮಂಡಳಿಗೆ ಕಳುಹಿಸಿಕೊಡುತ್ತೇವೆ. ಸಭೆಯಲ್ಲಿ ಚರ್ಚಿಸಿ ಇದರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇವೆ ಎಂದು ಹೇಳಿದ್ದರು. ಆದರೆ ಆಡಳಿತ ಮಂಡಳಿಯಲ್ಲಿರುವ ಕೆಲವರ ಆಕ್ಷೇಪಣೆಗಳಿಂದ ಅದು ಸಾಧ್ಯವಾಗಲಿಲ್ಲ. ಈಗಿನ ಕೆಲವು ಸ್ವಾಮೀಜಿಗಳಿಗೆ ಒಂದು ಮನವಿ ಪತ್ರವನ್ನು ನೀಡಿದರೆ ಅದನ್ನು ಓದುವಷ್ಟು ಸಮಯವಾಗಲೀ ಅಥವಾ ಕೇಳಿಸಿಕೊಳ್ಳುವಷ್ಟು ವ್ಯವಧಾನವಾಗಲಿ ಇಲ್ಲದೇ ಇರುವುದು ದುರ್ದೈವದ ಸಂಗತಿ.

---

**40ನೇ ಪುಟದಿಂದ........**

ಆಡುವ, ಚಂಡಾಡುವ, ಕುಂಟೇಬಿಲ್ಲಿಯಾಡುವ ಆ ಹುಡುಗರು ಎಲ್ಲಿ ಹೋದರು? ಎಲ್ಲಿ ಹೋದವು ನಾಟಕ ಆಡುತ್ತಿದ್ದ ಮೂರನಾಲ್ಕು ತಂಡಗಳು! ಹಾರ್ಮೋನಿಯಮ್ ಸದ್ದು ಅಡಗಿ ಹೋಯಿತೆಲ್ಲಿಗೆ! ನಾಟಕ ಕಟ್ಟಿ ನಾಟಕ ಆಡುತ್ತಾ, ಊರ ಕೇರಿಯ ವನಿತೆಯರ ನೆಚ್ಚಿನ ನಟನಾರಾಗಿ, ಮೆಚ್ಚಿಗೆ ಪಡೆದ ಪಾತ್ರದಾರಿಗಳು, ಎಲ್ಲಿ ಅಡಗಿ ಹೋದರೆಲ್ಲಿ? ಸದಾ ಕೇರಿ ತುಂಬಿರುತ್ತಿದ್ದ ಹರೆಯದಾ ಹುಡುಗ ಹುಡುಗಿಯರು ನಕ್ಕುನಲಿವ ಪ್ರೀತಿಯ ಮಾತು ನಗುಗಳು ಕಳೆದು ಹೋದುವೆಲ್ಲಿಗೆ? ಜಗಲಿ ಹಿಡಿದು ಕೂತು ಸದಾ ಸದ್ದು ಮಾಡುತ್ತಾ ಕಣ್ಗಾವಲಾಗಿ ಮನೆ, ಕೇರಿವಾರೆಂತೆ ಹದ್ದಗಣ್ಣಿಟ್ಟು ಕಾಯುತ್ತ ಕೂತಿರುತ್ತಿದ್ದ ಅಜ್ಜಿಅಜ್ಜ ಕಣ್ಮರೆಯಾದರೆಲ್ಲಿ? ಯಾರೊಬ್ಬರೂ ಕಾಣರಿಲ್ಲ! ಬಣಗುಡುತ್ತಿರುವ ಕೇರಿಗಳಲ್ಲಿ ಕಾಯುತ್ತಿವೆ, ನಮ್ಮ ಪೂರ್ವಿಕರ ಹೆಜ್ಜೆಗುರುತುಗಳು ಮನೆ ಒಡೆಯುನಿಗಾಗಿ, ಮನೆಯ ಒಳಗಡೆ ಮನೆಯ ಒಡೆಯನಿದ್ದಾನೋ ಇಲ್ಲವೋ................


**ಕೃಷಿಕೃತ್ಯ ಕಾಯಕವಾದೊಡೇನು**
**ತನುವ ಬಳಲಿಸಿ ತಂದು ದಾಸೋಹ ಮಾಡುವ**
**ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ**
**ಅದೆಂತೆಂದಡೆ ಆತನ ತನು ಶುದ್ಧಿ, ಆತನ ಮನ ಶುದ್ಧಿ**
**ಆತನ ಭಾವ ಶುದ್ಧಿ, ನುಡಿಯಲ್ಲಿ ಪಾವನವು**
**ಆತಂಗೆ ಉಪದೇಶ ಮಾಡಿದಾತನೇ ಪರಮ ಸದ್ಗುರು**
**ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು**
**ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮನೆ**
**ಜಗತ್ಪಾವನ ಇಂತಪ್ಪವರ ನಾನು ನೆರೆನಂಬಿ**
**ನಮೋ ನಮೋ ಎಂಬೆನಯ್ಯಾ ಕೂಡಲಸಂಗಮದೇವಾ**

**– ಬಸವಣ್ಣ**

# ಸೇವೆ

"ಮನವಿಟ್ಟು ಮಾಡುವುದು, ನಿಜದಿಂದ ನೀಡುವುದು" ಸೇವೆ. ಭಾರತೀಯ ಸಂಸ್ಕೃತಿಯಲ್ಲಿ 'ಸೇವೆ' ಒಂದು ಪವಿತ್ರ ಸ್ಥಾನ ಪಡೆದಿದೆ. ಶರಣರು 'ದಾಸೋಹ'ವನ್ನು ಸೇವೆ ಎಂದು ಭಾವಿಸಿದ್ದಾರೆ. ಮಾತಾಪಿತೃಗಳ ಸೇವೆ, ಪೂಜ್ಯ ಗುರುಸೇವೆ, ಅತಿಥಿ ಸೇವೆ, ವೃದ್ಧರ ಸೇವೆ, ರೋಗಿಗಳ ಸೇವೆ, ದೀನ-ದಲಿತರ ಸೇವೆ, ಅನಾಥ ಮಕ್ಕಳ ಸೇವೆ, ಅಂಧರ ಸೇವೆ, ಅಂಗವಿಕಲರ ಸೇವೆ, ಅಕ್ಷರಾಭ್ಯಾಸ ಇಲ್ಲದವರಿಗೆ ಅಕ್ಷರಗಳನ್ನು ಕಲಿಸುವುದು ಇತ್ಯಾದಿ. ಈ ರೀತಿಯಗಿ ಮನುಕುಲ ಉದ್ಧಾರಕ್ಕಾಗಿ ಸೇವೆ ಮಾಡುವುದರಲ್ಲಿ ಸಕ್ರಿಯವಾಗಿ ನಿರತರಾದರೆ ಅದುವೇ ಮಾನವ ಸೇವೆ. ಆಗ ಜನಸೇವೆ ಜನಾರ್ಧನ ಸೇವೆಯಾಗುತ್ತದೆ. ಸೇವೆಯನ್ನು ನಿಷ್ಕಲ್ಮಶವಾಗಿ ಕಾಯ, ವಾಚ, ಮನಸ್ಸಿನಿಂದ ಸೇವೆಯನ್ನು ನಿರ್ವಹಿಸಬೇಕು. ಕಾಯಕದಲ್ಲಿ ನಿರತನಾದರೆ, ಗುರುದರ್ಶನವಾದಡೂ ಮರೆಯಬೇಕು. ಲಿಂಗ ಪೂಜೆಯಾದಡೂ ಮರೆಯಬೇಕು. ಅಂದರೆ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಸೇವೆಯಲ್ಲಿ ತಲ್ಲೀನರಾಗಬೇಕು. ಪರಮ ಪೂಜ್ಯ ಶಿವಸ್ವರೂಪಿ ಶ್ರೀ ಸಿದ್ಧಗಂಗಾ ಶ್ರೀ ಶಿವಕುಮಾರ ಮಹಾಸ್ವಾಮಿಗಳು 'ಮಕ್ಕಳೇ ದೇವರೆಂದು' ಭಾವಿಸಿ ತ್ರಿವಿಧ ದಾಸೋಹಿಗಳಾಗಿ ಸೇವೆ ಸಲ್ಲಿಸಿ ಮಕ್ಕಳಲ್ಲಿ ಶಿವನನ್ನು ಕಂಡ ಮಹಾತ್ಮರಾದರು.

ಸೇವೆಯನ್ನು ಉಸಿರಾಗಿಸಿ ಪ್ರತಿಫಲಾಪೇಕ್ಷೆಯಿಲ್ಲದೆ ಸಮಾಜ ಸೇವೆಯಲ್ಲಿ ನಿರತರಾಗಿರುವ ಮಹಾ ಕಾಯಕಯೋಗಿಯಾಗಿದ್ದರು. ಇದೇ ರೀತಿ ಹಲವಾರು ಶರಣರು, ರಸ-ಋಷಿಗಳು, ಪೂಜ್ಯ ಗುರುಗಳು, ಮಠ-ಮಂದಿರ, ಸೇವಾಶ್ರಮಗಳನ್ನು ನಿರ್ಮಿಸಿ ಮನುಕುಲದ ಉದ್ಧಾರಕ್ಕಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ಸಲ್ಲಿಸುತ್ತಿದ್ದಾರೆ. 'ಮಾನವೀಯತೆ' ಅವರ ಬದುಕಿನ ದಿವ್ಯ ಮಾರ್ಗ, ಕಾಯಕ ಅವರ ಜೀವನ ಮಂತ್ರ. ಕರ್ಮಯೋಗ ನಿಂತಿರುವುದೇ, ಪ್ರೀತಿ. ಕರುಣೆ, ತಾಳ್ಮೆ, ಮುಗ್ದತೆ, ಸರಳತೆ, ಕಾಯಕ, ದಾಸೋಹ ಮತ್ತು ಸಮಾಜೋದ್ಧಾರದ ತಳಹದಿ ಮೇಲೆ 'ನಾನು' ಮಾಡಿದೆ ಎಂಬ 'ಅಹಂ' ಭಾವದಿಂದ ಗರ್ವಪಟ್ಟು ಸೇವೆ ಮಾಡಿದವರಿಲ್ಲ. ಮನುಜರಲ್ಲಿ ಭಕ್ತಿಯಿಂದ ಮಹಾದೇವನನ್ನು ಕಂಡು ಸೇವೆ ಸಲ್ಲಿಸಿ ಮಹಾತ್ಮರಾದವರು.



**ಆರ್. ರಾಜಯ್ಯ**
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

ಸೇವೆಯನ್ನು ಹಣದಿಂದಲೇ ಮಾಡಬೇಕು ಎಂದೇನಿಲ್ಲ ದೈಹಿಕ, ಮಾನಸಿಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕವಾಗಿಯೂ ಸೇವೆ ಸಲ್ಲಿಸಬಹುದು. ಉದಾ: ಒಬ್ಬ ಗುರು ವಿದ್ಯಾರ್ಥಿಗೆ ಬರವಣಿಗೆ ಕಲಿಸುವುದು ದೈಹಿಕ, ಓದು ಕಲಿಸುವುದು ಮಾನಸಿಕ, ನೀನು ಚೆನ್ನಾಗಿ ಓದು, ಬರಹ ಕಲಿತಿದ್ದಿ, ಮುಂದೆ ಚೆನ್ನಾಗಿ ಕಲಿಯಲು ಮಾರ್ಗದರ್ಶನ ಮಾಡಿದರೆ ಬೌದ್ಧಿಕ, ಇನ್ನೇನು ಪರವಾಗಿಲ್ಲ ನೀನೇ ಸ್ವತಃ ಓದಿ, ಬರೆದು ಪ್ರತಿಭಾವಂತನಾಗಬಹುದು ಎಂದು ಹೇಳುವ ಧೈರ್ಯ, ನೈತಿಕವಾಗಿ ಚೆನ್ನಾಗಿ ಕಲಿತ ಮೇಲೆ ಹಿರಿಯರ, ಮಹಾತ್ಮರ ಸಂತರ ಸತ್ಸಂಗ ಮಾಡಿದರೆ ಆಧ್ಯಾತ್ಮಿಕ ಜಾಗೃತವಾಗುತ್ತದೆ.

ಗುಡಿ-ಗೋಪುರಗಳನ್ನು ನಿರ್ಮಿಸಿ ಸುಂದರವಾದ ವಿಗ್ರಹವನ್ನು ಕೆತ್ತಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿ, ಮತ್ತೆ ಅದರ ಮುಂದೆ ನಿಂತು ನಮ್ಮ ಬದುಕನ್ನು ಸುಂದರವಾಗಿಸು ಎನ್ನುವ ಸಂಸ್ಕೃತಿ ಶರಣರದಾಗಿರಲಿಲ್ಲ. ತಮ್ಮಲ್ಲೇ ದೇವರನ್ನು ಕಂಡವರಾಗಿದ್ದರು. ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರು ದೇಹವನ್ನೇ ದೇಗುಲವನ್ನಾಗಿಸಿ ಶರಣು ಎಂದವರು. ಉಣ್ಣುವ ಜಂಗಮ ಮನೆಗೆ ಬಂದರೆ ನಡೆ-ನಡೆ ಎಂಬರು, ಉಣ್ಣದ ಲಿಂಗಕ್ಕೆ ಬೋನವ ನೀಡುವರು, ದಿಟದನಾಗರ ಕಂಡರೆ ಕೊಲ್ಲೆಂಬರು, ಕಲ್ಲ ನಾಗರ ಕಂಡರೆ ಹಾಲ ನೆರೆಯುವರು, ಗುಡಿಯಲ್ಲಿನ ಕಲ್ಲು ದೇವರಿಗೆ ವಿವಿಧ ಬಗೆಯ ಆಹಾರ ಪದಾರ್ಥಗಳ ನೈವೇದ್ಯ ಮಾಡುವರು. ಇದರ ಬದಲಾಗಿ ಅವಶ್ಯಕ ಇರುವವರಿಗೆ, ಸತ್ಪಾತ್ರರಿಗೆ, ಹಸಿದವರಿಗೆ, ಉಣ್ಣುವ ಜಂಗಮರಿಗೆ ಉಣಬಡಿಸಿ ಸೇವೆ ಮಾಡಿದರೆ ಪುಣ್ಯ ಬರುತ್ತದೆ ಎಂದರು ಶರಣರು. ಹಣ ಗಳಿಸುವ ಮಾರ್ಗ ಮತ್ತು ಅದನ್ನು ವಿನಿಯೋಗಿಸುವ ರೀತಿ ಎರಡೂ ತ್ಯಾಗ ಮೂಲವಾಗಿ ಶುದ್ಧವಾದುವುಗಳಾಗಿರ ಬೇಕು.

**ಪಾಪಿಯ ಧನ, ಪ್ರಾಯಶ್ಚಿತ್ತಕಲ್ಲದೆ**
**ಸತ್ಪಾತ್ರಕ್ಕೆ ಸಲ್ಲದಯ್ಯಾ,**
**ನಾಯ ಹಾಲು ನಾಯಿಗಲ್ಲದೆ**
**ಪಂಚಾಮೃತಕ್ಕೆ ಸಲ್ಲದಯ್ಯಾ,**
**ನಮ್ಮ ಕೂಡಲಸಂಗನ ಶರಣರಿಗಲ್ಲದೆ,**
**ಮಾಡುವ ಅರ್ಥ ವ್ಯರ್ಥ ಕಂಡಯ್ಯಾ,**
**ಎನ್ನುತ್ತಾರೆ ಬಸವಣ್ಣನವರು.**

ಸನ್ಮಾರ್ಗದಲ್ಲಿ ಧನವನ್ನು ಗಳಿಸಿ ಸತ್ಪಾತ್ರಕ್ಕಾಗಿ, ಸತ್ಕಾರ್ಯಗಳಿಗೆ, ಅಗತ್ಯವಿರುವವರಿಗೆ, ಹಣವನ್ನು ವಿನಿಯೋಗಿಸಬೇಕು. ತನು-ಮನ

ಬಳಲಿಸಿ ಗಳಿಸಿದ ಹಣ ಮಾತ್ರ ಗುರು, ಲಿಂಗ, ಜಂಗಮ, ದಾಸೋಹಕ್ಕೆ ಯೋಗ್ಯವಾಗಿರುತ್ತದೆ. ಕಾಯಕವೆಂದು ಕಾಯ ಬಳಲಿಸದೆ ತನು ಕರಗದೆ, ಮನ ನೋಯಿಸಿ ಬೇಡಿ ಕಾಡಿ ತಂದು ದಾಸೋಹ ಮಾಡಿದರೆ, ಪ್ರಯೋಜನವಿಲ್ಲ. ಗಳಿಸಿದ್ದನೆಲ್ಲಾ ಸೇವೆಗಾಗಿ ಖರ್ಚು ಮಾಡಿ ಬಿಕಾರಿಗಳಾಗುವುದಲ್ಲ, ಎಲ್ಲವನ್ನು ದಾನ ಮಾಡಿ ದರಿದ್ರರಾಗುವುದಲ್ಲ, ಗಳಿಸಿದ್ದರಲ್ಲಿ ಒಂದು ಭಾಗವನ್ನಾರದೂ ಸತ್ಪಾತ್ರರಿಗೆ ನೀಡಿದರೆ ಅದು ಸೇವೆಯಾಗುತ್ತದೆ.

ಪೂಜ್ಯ ಗುರುಗಳನ್ನು, ಹಿರಿಯರನ್ನು, ಸ್ತ್ರೀಯರನ್ನು, ಮಕ್ಕಳನ್ನು, ಅಂಗವಿಕಲರನ್ನು, ರೋಗಿಗಳನ್ನು ಹೃದಯವಂತಿಕೆಯಿಂದ ಕಾಣುವುದು ಮುಖ್ಯ ಉಳ್ಳವರು ಅವರ ಅಗತ್ಯಗನುಸಾರವಾಗಿ ಸಹಾಯ, ಸಹಕಾರ, ಸೌಲಭ್ಯಗಳನ್ನು ನೀಡಿ ಸಧೃಢರನ್ನಾಗಿ ಮಾಡಿ ಅವರ ಕಾಲ ಮೇಲೆ ಅವರು ನಿಂತುಕೊಳ್ಳುವ ಹಾಗೆ ಮಾಡುವುದು ಒಂದು ಸೇವೆಯೇ. ಸೇವೆಗಾಗಿ ವ್ಯಯಿಸುವ ಹಣ ಸತ್ಯ ಶುದ್ಧ ಕಾಯಕದಿಂದ ಗಳಿಸಿದ್ದಾಗಿರಬೇಕು. ಒಬ್ಬರ ಮನವ ನೋಯಿಸಿ ಒಬ್ಬರ ಮನವ ಘಾತವ ಮಾಡಿ ಗಳಿಸಿದ ಹಣದಿಂದ ಸೇವೆ ಮಾಡಿದರೆ, ಪುಣ್ಯ ಲಭಿಸುವುದಿಲ್ಲ. ಅದು ಪರಮಾತ್ಮನ ಪೂಜೆಯಾಗುವುದಿಲ್ಲ. ಸೇವೆ ಮಾಡಿ ಪ್ರತಿಫಲ ಬಯಸಿದರೆ, ಅದು ಸೇವೆಯಾಗುವುದಿಲ್ಲ. ಪ್ರತಿಫಲಾಪೇಕ್ಷೆಯಿಲ್ಲದೆ ಕರ್ಮ ಮಾಡಬೇಕು. "ಕರ್ಮಣ್ಯೇವಾಧಿಕಾರಸ್ತೆ ಮಾಫಲೇಷು ಕದಾಚನ" ಎಂದು ಗೀತೆ ಸಾರಿದೆ. ಸೇವೆಯನ್ನು ಗರ್ವವಿಲ್ಲದೆ ಮಾಡಬೇಕು. ಫಲಾ–ಫಲಗಳನ್ನು ದೇವರಿಗೆ ಬಿಡಬೇಕು.

**"ಮಾಡಿದೆನೆಂಬುದು ಮನದಲ್ಲಿ ಉಳಿದರೆ, ಏಡಿಸಿಕಾಡಿತ್ತು ಶಿವನ ಡಂಗುರು, ಮಾಡಿದೆನೆನ್ನದಿರ ಜಂಗಮಕ್ಕೆ, ಮಾಡಿದೆನೆನ್ನದಿರ ಲಿಂಗಕ್ಕೆ, ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ ಬೇಡಿದ ಪದವೀಯ ಕೊಡುವ ಕೂಡಲ ಸಂಗಮದೇವ"**

ಈ ರೀತಿಯಾಗಿ ಕ್ರಿಯಾಶೀಲವಾಗಿ, ನಿರಾಡಂಬರವಾಗಿ, ಶುದ್ಧ ಮನಸ್ಸಿನಿಂದ ಅಂತರಂಗ ಬಹಿರಂಗಗಳಲ್ಲಿ ನಿರ್ಮಲವಾಗಿ ಸೇವೆ ಸಲ್ಲಿಸಿದರೆ ಸಾಮಾನ್ಯ ಮಾನವ ದೇವ ಮಾನವನಾಗಿ ಕಂಗೊಳಿಸುತ್ತಾನೆ. ಇಂದು ಎಲ್ಲೆಲ್ಲಿಯೂ ಸೇವೆಯೆಂಬ ಮಾತು ಜನಪ್ರಿಯವಾದ ಸವಿ ಮಾತಾಗಿದೆ. ಆದರೆ, 'ಸೇವೆ' ಎಂಬುದು ಪ್ರಚಾರದ ಸರಕಲ್ಲ. ಅದು ಗುಪ್ತ ಶಕ್ತಿ, ವ್ಯಕ್ತಿಯನ್ನು ಆರೋಗ್ಯವಂತನ್ನಾಗಿಡುವ ಸಂಜೀವಿನಿ, ಸೇವೆ, ತ್ಯಾಗ, ಮಾನವೀಯತೆಗಳನ್ನು ಬಿತ್ತಿದ ಸತ್ಪುರುಷರು ಪ್ರಾತಃಸ್ಮರಣೀಯರು. ಸೇವಾ ತತ್ಪರತೆ ಮಾನವತ್ವದಿಂದ ದೈವತ್ವದ ಕಡೆಗೆ ಸಾಗಿಸುತ್ತದೆ. ನನ್ನಿಂದಲೇ ದೇಶೋದ್ಧಾರ ನಾನೇ ಉದ್ಧರ ಮಾಡಿ ಬಿಡುತ್ತೇನೆ ಎಂಬ ಭಾವನೆ ಇಟ್ಟುಕೊಳ್ಳದೆ, ಸಕಲ ಜೀವರಿಗೂ ಲೇಸನ್ನೇ ಬಯಸುತ್ತಾ "ಸಮಾಜ ಸೇವೆಯೇ ಈಶ ಸೇವೆ" ಎಂದು ತಿಳಿದು ಸೇವೆಯನ್ನೇ ಜೀವನದ ಊರುಗೋಲನ್ನಾಗಿಸಿ ಕೊಳ್ಳಬೇಕು. ಧಾನ, ಭಕ್ತಿಗಳಲ್ಲಿ 'ನಾ' ಎಂಬುದು ಇರಬಾರದು, 'ನಾನು' ಎಂಬ ರೋಗ ಮರೆಯಾದರೆ ಶಿವ ಕೃಪೆ ತಾನಗಿಯೇ ಫಲಿಸುತ್ತದೆ. ಇದನ್ನೇ ಕನಕದಾಸರು 'ನಾ' ಹೋದರೆ ಹೋದೇನು ಎಂದು ಹೇಳಿದ್ದಾರೆ. ಆಗ ಪ್ರತಿ ವ್ಯಕ್ತಿಯು ಸಾಧಕನೆನಿಸಿಕೊಳ್ಳುತ್ತಾನೆ. ಸುದ್ದಿಗಾಗಿ ಸೇವೆ ಮಾಡಬಾರದು, ಸೇವೆ ಮಾಡಿ ಸುದ್ದಿಯಾಗಬೇಕು. ಎಲ್ಲರೂ ಮನೋಭಾವವನ್ನು ಬೆಳೆಸಿಕೊಳ್ಳುವುದು ಉತ್ತಮ.

**ನಿರ್ಮಲ ಕರ್ಮವದು ಸದ್ಗತಿಗೆ ಸಾಧನ ನೋಡ**
**ನಿರ್ಮಲ ಕರ್ಮವದು ಜ್ಞಾನವರ್ಧನ ನೋಡಾ**
**ನಿರ್ಮಲ ಕರ್ಮವದು ಕಪಿಲ ಸಿದ್ಧ ಮಲ್ಲಿಕಾರ್ಜುನ**
**ಕೊಡುವ ಕೂಟ ನೋಡಾ.**

## ನೊಳಂಬವಾಣಿ ಪತ್ರಿಕೆಯ ಚಂದದಾರರಲ್ಲಿ ಮನವಿ

**ಪ್ರೀತಿಯ ಚಂದದಾರ ಬಂಧುಗಳೇ,**

**ನೊಳಂಬವಾಣಿ ಪತ್ರಿಕೆಯು 15ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು ಈ ಸಂದರ್ಭದಲ್ಲಿ ನೊಳಂಬವಾಣಿ ಚಂದಾ ಹಣವನ್ನು 5 ವರ್ಷ, 10 ವರ್ಷಗಳಿಗೆ ಮಾಡಿಸಿರುತ್ತೀರಿ, ತಮ್ಮಗಳ ಅವಧಿಯು ಮುಗಿದಿದ್ದು 2000 ರೂಗಳನ್ನು ನೀಡಿ ಆಜೀವ ಸದಸ್ಯತ್ವವನ್ನು ನವೀಕರಿಸಬೇಕೆಂದು ಎಲ್ಲರಿಗೂ ಪ್ರೀತಿಪೂರ್ವಕವಾಗಿ ಸಂಪಾದಕ ಮಂಡಳಿ ಮತ್ತು ನೊಳಂಬ ಲಿಂಗಾಯಿತ ಸಂಘ (ರಿ.) ಬೆಂಗಳೂರಿನ ಪರವಾಗಿ ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ. ವಿಳಾಸ ಬದಲಾವಣೆ, ಪತ್ರಿಕೆ ಬಾರದಿದ್ದಲ್ಲಿ ಪಿನ್‌ಕೋಡ್ ಮತ್ತು ಫೋನ್ ನಂಬರ್ ಪೂರ್ಣ ಮಾಹಿತಿ ಸಹಿತ ಈ ಕೆಳಗಿನ ವಾಟ್ಸಪ್ ಸಂಖ್ಯೆಗೆ ಕಳುಹಿಸಿ. ಮೊ : 9481910181**

**–ಸಂಪಾದಕ**

# ನೊಳಂಬರ ಕೆರೆಕಟ್ಟೆ ಬಾವಿಗಳು

ಹಿಂದಿನ ಸಂಚಿಕೆಯಿಂದ.......

"ಭೂಮಿತಾಯಿ"ಯು ಮಾನವ ಕುಲದಿಂದಾಗುವ ಉಪಚಾರ ಅಪಚಾರಗಳೆಲ್ಲವನ್ನು ಸಮನಾಗಿ ಸ್ವೀಕರಿಸಿ, ಅನುಭವಿಸಿ, ಸಹನಾಮಯಿಯಾಗಿ ಸಕಲ ಜೀವರಾಶಿಗೆ ಮೂಲಸೌಕರ್ಯಗಳನ್ನು ನೀಡಿ ರಕ್ಷಿಸುತ್ತಾಳೆ. ಇದು ಪೃಥ್ವಿಯ ಸಹನಾ ಸದ್ಗುಣ, ವಾಯು, ಬೆಳಕು, ನೀರು, ಮೂಲ ಅಗತ್ಯಗಳಲ್ಲಿ ಪ್ರಮುಖವಾದವು. ಇಳೆಗೆ ಮಳೆಯೇ ಆಧಾರ ಆದರೂ ಸದಾಕಾಲ ಮಳೆ ಆಶ್ರಯದಲ್ಲೇ ನೀರಿನ ಸೌಕರ್ಯ ಪಡೆಯಲಾಗುವುದಿಲ್ಲ. ಇದನ್ನು ಕೊರತೆಯಾಗದಂತೆ ತಡೆಯಲು ಮಾರ್ಗೋಪಾಯ ಅನುಸರಿಸಿ ಪರಿಹಾರ ಕಂಡುಕೊಂಡ ನೊಳಂಬರು ಕೆರೆ–ಕಟ್ಟೆಗಳ ನಿರ್ಮಾಣಕ್ಕೆ ಬಹುಮುಖ್ಯ ಗಮನ ನೀಡಿ ಗಣನೀಯ ಪ್ರಮಾಣದ ಕೆರೆ–ಕಟ್ಟೆಗಳನ್ನು ನಿರ್ಮಿಸಿ ಮಾನವ, ಪ್ರಾಣಿ, ಸಸ್ಯ ಸಂಕುಲಕ್ಕೆ ಶ್ರೀರಕ್ಷೆ ನೀಡಿದ್ದಾರೆ.

ಈ ಸತ್ಕಾರ್ಯದಲ್ಲಿ ನೊಳಂಬ ರಾಜರುಗಳು, ಅಧಿಕಾರಿಗಳ ಪಾತ್ರ ಎಷ್ಟಿರುವುದೋ ಅಷ್ಟೆ. ಮುಖ್ಯವಾಗಿ ಧರ್ಮದ ಮಹನೀಯರು, ಮಠಾಧೀಶರು, ಸಮಾಜದ ಗುರುಗಳ ಕೊಡುಗೆ, ಆಶೀರ್ವಾದ, ಮಾರ್ಗದರ್ಶನ ಮುಖ್ಯವಾಗಿ ಪರಿಣಾಮಕಾರಿಯಾಗಿ ಸಫಲತೆಯನ್ನು ನೀಡಿದೆ. ಲಾಕುಳ ಶೈವ ಮೂಲಕ್ಕೆ ಸೇರಿದ ಪಲ್ಲವ ನೊಳಂಬರು ಕ್ರಿ.ಶ. 2ನೇ ಶತಮಾನದಿಂದಲೂ ಕಾಲಕಾಲಕ್ಕನುಸಾರವಾಗಿ ರಾಜ್ಯಾಡಳಿತ ನಡೆಸಿರುವ ಪ್ರಮುಖ ಆಡಳಿತಗಾರರು. ಪ್ರಕೃತಿ ಪ್ರಿಯರಾದ ಇವರು ನಿರ್ಮಿಸಿರುವ ಕೆರೆ–ಕಟ್ಟೆ ದೇವಾಲಯಗಳು ಇಂದು ಉಪಯುಕ್ತವಾಗಿವೆ. ಕ್ರಿ.ಶ. 961ರಲ್ಲಿ ಅವನಿಯಲ್ಲಿ ಎರಡು ಬೃಹತ್ ಕೆರೆಗಳನ್ನು ಹಲವಾರು ದೇವಾಲಯವನ್ನು ಕಟ್ಟಿಸಿರುವುದು ಇತಿಹಾಸದಲ್ಲಿ ತಿಳಿಯುತ್ತದೆ.

ಚಿಕ್ಕಮಗಳೂರು ಜಿಲ್ಲೆ ಬಾಳೆಹಳ್ಳಿ (ಬಾಳೆಹೊನ್ನೂರು) ಕ್ಷೇತ್ರದಲ್ಲಿ ಅಂದಿನ ನೊಳಂಬ ಗುರುಗಳೊಂದಿಗೆ ಭಕ್ತಿ–ನಿಷ್ಠೆಯನಿಟ್ಟು ಕೊಂಡು ಶ್ರೀಗಳವರ ಆದೇಶವನ್ನು ತಪ್ಪದೇ ಪಾಲಿಸುತ್ತಿದ್ದ ಅರಸು ವೆಂಕಟಪ್ಪ ನಾಯಕರು ಶ್ರೀಗಳವರ ಆದೇಶದಂತೆ ಲೋಕಹಿತಾರ್ಥವಾಗಿ ಸುಂದರ ಮನಮೋಹಕವಾದ ಕೆರೆಯನ್ನು ಹಾಗೂ ಹೂತೋಟವನ್ನು ನಿರ್ಮಿಸಿ ವೀರಭದ್ರದೇವರ ದೀಪಾರಾಧನೆಗಾಗಿ ಅರ್ಪಿಸಿರುವರು. ಇದೇ ರೀತಿ ಹಲವಾರು ಕೆರೆ–ಕಟ್ಟೆಗಳು ಹಾಗೂ ಗುಂಡುತೋಪುಗಳನ್ನು ಕಟ್ಟಿ ಬೆಳೆಸಿ ಲೋಕ ಕಲ್ಯಾಣ ಕಾರ್ಯ ಮಾಡಿರುವುದು ನೊಳಂಬ ಶ್ರೀಗಳವರಿಗೆ ಸಿಕ್ಕ ಗೌರವವೇ ಆಗಿದೆ. ತುಮಕೂರು ಜಿಲ್ಲೆ ಮಧುಗಿರಿಗೆ 7 ಕಿ.ಮೀ. ಹತ್ತಿರವಿರುವ ಸಿದ್ಧಾಪುರದಲ್ಲಿ ನೊಳಂಬರು ನಿರ್ಮಿಸಿದ ಕೆರೆಯು ವಿಶೇಷತೆಯನ್ನು ಹೊಂದಿದೆ. ಬಿಜಾಪುರದ ಸೈನ್ಯ, ಮಹಾನಾಡನ್ನು ಕೈವಶ ಮಾಡಿಕೊಳ್ಳಲು ದಂಡೆತ್ತಿ ಬರುತ್ತದೆ. ರಾತ್ರಿಯಾದ ಕಾರಣ ಮಹಾನಾಡಿನ ಸಿದ್ಧಾಪುರ ಕೆರೆಯ ಬಳಿ ನೆಲೆಯಾಗುತ್ತಾರೆ. ಚಾಣಚಕ್ಯತೆಯ ಮಹಾನಾಡ ಪ್ರಭು ನಾಡಿನ ಎಲ್ಲ ರಾಸುಗಳನ್ನು ಸಿದ್ಧಾಪುರ ಕೆರೆ ಅಂಗಳಕ್ಕೆ ತರುವಂತೆ ತಿಳಿಸುತ್ತಾರೆ. ರಾಸುಗಳ ಕೊಂಬುಗಳಿಗೆ ಬಟ್ಟೆ ಸುತ್ತಿ ಎಣ್ಣೆಯನ್ನು ಹಾಕಿ, ಬೆಂಕಿ ಹಚ್ಚಿ, ಶತ್ರು ಸೈನ್ಯದ ಶಿಬಿರದತ್ತ ನುಗ್ಗಿಸುವರು. ಒಮ್ಮೆಲೆ ರಾತ್ರಿಯಲ್ಲಿ ನುಗ್ಗಿ ಬರುತ್ತಿರುವ ಜ್ವಾಲೆಯ ರಾಸುಗಳನ್ನು ಕಂಡು ಶತ್ರು ಸೈನ್ಯೆ ಭಯಭೀತರಾಗಿ ಅಲ್ಲಿಂದ ಓಡಿ ಹೋಗುತ್ತಾರೆ. ಮಹಾನಾಡು ಶತ್ರು ದಾಳಿಯಿಂದ ಪಾರಾಗುತ್ತಾರೆ. ಇಂತಹ ಹಲವಾರು ಘಟನೆಗಳಿಗೆ ಕೆರೆಯು ಆಶ್ರಯವಾಗಿದೆ.

ಇಮ್ಮಡಿ ಚಿಕ್ಕಪ್ಪಗೌಡ ಅಧಿಕಾರ ನಡೆಸುತ್ತಿರುವಾಗ ಇಂತಹುದೇ ಘಟನೆ ನಡೆಯುತ್ತದೆ. ಚಿಕ್ಕಪ್ಪಗೌಡನ ಮೇಲೆ ಕುಪಿತನಾದ ವೆಂಕಟಪತಿರಾಯ ಅಪಾರ ಸೈನ್ಯದೊಂದಿಗೆ ಪಟ್ಟಣವನ್ನು ಮುತ್ತಲು ಬಂದು ರಾತ್ರಿಯಾದ ಕಾರಣ ಇದೇ ಸಿದ್ಧಾಪುರ ಕೆರೆಯ ಬಳಿ ಬೀಡು ಬಿಡುತ್ತಾರೆ. ತಮ್ಮ ಸೈನಿಕರ ದಂಡಿನ ನಡುವೆ ರಾತ್ರಿ ಮಂಚದ ಮೇಲೆ ಮಲಗಿದ್ದ ರಾಯರನ್ನು ಮಂಚದ ಸಮೇತ ನೊಳಂಬ ವೀರ ಗುಪ್ತದಳ ಸೈನಿಕರು ಎಲ್ಲರ ಕಣ್ಣುಗಳನ್ನು ತಪ್ಪಿಸಿ ರಾಯರಿಗೆ ಎಚ್ಚರವಾಗದಂತೆ ಮಧುಗಿರಿ ಬೆಟ್ಟದ ಮೇಲಿನ ಕೋಟೆಗೆ ಹೊತ್ತು ತರುತ್ತಾರೆ. ಈ ವೀರಪರಾಕ್ರಮವನ್ನು ಹಾಗೂ ಇಮ್ಮಡಿ ಚಿಕ್ಕಪ್ಪಗೌಡರ ಚಾಣಕ್ಯ ನಡೆಗೆ ಮನಸೋತು ವೆಂಕಟಪತಿರಾಯರು ರಾಜಿ ಮಾಡಿಕೊಂಡು ನಡೆಯಬೇಕಿದ್ದ



**ಶಿವಕುಮಾರ್ .ಎಸ್**
ಈಡೇನಹಳ್ಳಿ,
ತಿಪಟೂರು ತಾ. ತುಮಕೂರು ಜಿಲ್ಲೆ.

ಯುದ್ಧವನ್ನು ನಿಲ್ಲಿಸುತ್ತಾರೆ. ಇಂತಹ ಹಲವಾರು ಶಾಂತಿ ನಿರ್ಮಾಣ ಕಾರ್ಯಗಳಿಗೆ ಕಾರಣವಾಗಿರುವ ನೊಳಂಬರ ಸಿದ್ಧಾಪುರ ಕೆರೆ ಮಧುಗಿರಿಗೆ ಸನಿಹದಲ್ಲೇ ಇದೆ. ಕೆರೆಯ ಸಿರಾ- ಮಧುಗಿರಿ ರಸ್ತೆಯಲ್ಲಿ ಕಂಬದ ರಂಗನಾಥಸ್ವಾಮಿ ಹಾಗೂ ಗೋಪಾಲಕೃಷ್ಣಸ್ವಾಮಿ ದೇವಾಲಯಗಳಿವೆ ಹಾಗೂ ಶರಣೆ ಜಿರಲೆ ಮಲ್ಲಮ್ಮ ಕಟ್ಟಿಸಿರುವ ಚಿಕ್ಕ ಕಲ್ಯಾಣಿಯೂ ಇದೆ. ನೊಳಂಬರು ಲೋಕಕಲ್ಯಾಣಕ್ಕಾಗಿ ಕೆರೆ-ಕಟ್ಟೆ ಕಟ್ಟುವುದನ್ನು ಕಂಡ ಮಲ್ಲಮ್ಮ ತಾನು ಮನೆಯಲ್ಲಿ ಸಂಗ್ರಹಿಸುತ್ತಿದ್ದ ಹಸುಗಳ ಹಾಲಿನ ಬೆಣ್ಣೆಯನ್ನು ಮಾರಿ ಬರುವ ಹಣವನ್ನು ಕೂಡಿಟ್ಟು ಲೋಕಕ್ಕೆ ಒಳಿತಾಗಲೆಂದು ಕಲ್ಯಾಣಿ ಕಟ್ಟಿಸುತ್ತಾಳೆ. ನೊಳಂಬರ ಈ ಲೋಕ ಕಲ್ಯಾಣ ಕಾರ್ಯ ಸಾಮಾನ್ಯ ಪ್ರಜೆಗಳ ಮೇಲೆ ಎಷ್ಟು ಪರಿಣಾಮಕಾರಿ ಪ್ರಭಾವ ಬೀರಿದ್ದಿತೆಂದು ತಿಳಿಯಬಹುದು. ಶಿವಶರಣೆ ಮಲ್ಲಮ್ಮ ವಿವಿಧ ಲೋಕಕಲ್ಯಾಣ ಕಾರ್ಯಗಳಿಗೆ 2039 ವರಹಗಳನ್ನು ಮಹಾನಾಡ ಪ್ರಭುಗಳಿಗೆ ನೀಡಿರುವವಳು. ಈ ಬಗ್ಗೆ ಶಾಸನ ಇರುವುದನ್ನು ಕಾಣಬಹುದು. ಕೆರೆಯ ಸುತ್ತ ಪ್ರಮುಖವಾಗಿ ಅಡಿಕೆ ತೋಟಗಳು ಹಾಗೂ ತೆಂಗಿನ ತೋಟ ಕಂಗೊಳಿಸುತ್ತಿದ್ದರೆ ಭತ್ತ ಬೆಳೆಯುವ ಗದ್ದೆ ಬಯಲು ರೈತರ ಬಾಳಿಗೆ ಬಂಗಾರವಾಗಿದೆ.

**ಕೆರೆಯ ನೀರಿನ ಪವಾಡ**

ಸಿದ್ಧಾಪುರದಲ್ಲಿ ಶರಣ ಗುರು ಪುಟ್ಟಪ್ಪಯ್ಯ ಇವರ ಶಿಷ್ಯರಾದ ಬಾಳಪ್ಪಯ್ಯ ತಮ್ಮ ಮಠದಲ್ಲಿ ಇರುತ್ತಾರೆ. ಊರಿನ ಗಾಣಿಗ ಸಮುದಾಯದ ಶರಣ ಭಕ್ತರೊಬ್ಬರು ಪ್ರತಿದಿನ ದೀಪಕ್ಕೆ ಎಣ್ಣೆಯನ್ನು ನೀಡುತ್ತಿರುತ್ತಾರೆ. ಶಿಷ್ಯ ಬಾಳಪ್ಪಯ್ಯ ಪ್ರತಿದಿನದಂತೆ ಎಣ್ಣೆಯನ್ನು ಪಡೆಯಲು ಬಂದಾಗ ಊರಿನಲ್ಲಿ ದೊಂಬರ ಆಟ ಪ್ರದರ್ಶನ ನಡೆಯುತ್ತಿರುತ್ತದೆ. ಅದನ್ನು ವೀಕ್ಷಿಸುತ್ತ ನಿಂತಾಗ ಸಮಯ ಮೀರಿ ಗಾಣದ ಬಾಗಿಲು ಮುಚ್ಚುವುದು, ಎಣ್ಣೆ ಸಿಗದಾಗ ಶಿಷ್ಯ ದಾರಿ ತೋರದೆ ಕೆರೆಯ ನೀರನ್ನೇ ತುಂಬಿ ತಂದು ದೀಪಕ್ಕೆ ಆಕುವನು, ಮಠದ ದೀಪವು ನೀರಿನಿಂದಲೇ ಪ್ರತಿನಿತ್ಯದಂತೆ ಪ್ರಜ್ವಲವಾಗಿ ಉರಿಯುವುದು. ಮರುದಿನ ಗಾಣಿಗ ಭಕ್ತರು ಬಂದು ನೆನ್ನೆ ಎಣ್ಣೆ ಪಡೆಯದ ವಿಷಯ ತಿಳಿಸಿದಾಗ ದೀಪವು ನೀರಿನಿಂದಲೇ ಉರಿದದ್ದು ತಿಳಿದು ಭಕ್ತನ ನಿಷ್ಠೆ ಅವನ ಭಕ್ತಿ ದೈವಕೃಪೆಯ ಬಗ್ಗೆ ತಿಳಿದು ಗುರುಗಳು ಭಕ್ತನನ್ನು ಶಿಷ್ಯನನ್ನು ಕೊಂಡಾಡಿ ನಡೆದ ಪವಾಡದ ಬಗ್ಗೆ ತಿಳಿಸುತ್ತಾರೆ.

ಈಗಲೂ ಸಿದ್ಧಾಪುರದಲ್ಲಿ ಮಠವಿದ್ದು, ನಿತ್ಯ ಪೂಜೆ ನಡೆಯುತ್ತಿದೆ. ಗ್ರಾಮದ ಹಿರಿಯರಿಂದ ಪೂರ್ವದಿಂದಲೂ ಜನರಿಂದ ಜನರಿಗೆ ತಿಳಿದು ಬಂದಿರುವ ಸಂಗತಿಗಳ ಬಗ್ಗೆ ತಿಳಿಯಬಹುದು ಹಾಗೂ ಕೆಲವು ಶಿಲ್ಪ ಶಾಸನಗಳನ್ನು ಕಾಣಬಹುದು.

ಇಂತಹ ಮಹತ್ವಗಳನ್ನುಳ್ಳ ಕೆರೆಯು ನಿರ್ಮಾಣವಾಗಿರುವುದು ಕ್ರಿ.ಶ. 1598 ರಲ್ಲಿ ಕಾರ್ತಿಕ ಮಾಸದ ಗುರುವಾರದಂದು. ಅಂದಿನ ಮಹಾನಾಡ ಪ್ರಭು ಇಮ್ಮಡಿ ಚಿಕ್ಕಪ್ಪಗೌಡರು ಬಿಜ್ಜಾವರಕ್ಕೆ 3 ಕಿ.ಮೀ. ದೂರದಲ್ಲಿ ಇರುವ ಈ ಸ್ಥಳದಲ್ಲಿ ಬೆಳಗ್ಗೆ ಪೂಜೆ ಸಲ್ಲಿಸಿ 5 ದೇವಾಲಯ ಹಾಗೂ ಕೋಟೆಯನ್ನು ನಿರ್ಮಾಣ ಮಾಡುತ್ತಾರೆ. ಇದಕ್ಕೆ ಸಿದ್ಧಾಪುರವೆಂದು ಹೆಸರಿಟ್ಟು ಈ ಪವಿತ್ರ ಕೆರೆಯನ್ನು ಕಟ್ಟಿಸಿರುವರು. ಸಿದ್ಧಾಪುರದ ಊರ ಮುಂದಿನ ಶಾಸನದಿಂದ ತಿಳಿಯುವುದೆಂದು ಸಾಹಿತಿಗಳು, ಸಂಶೋಧಕರು ಆಗಿ ಹಲವಾರು ಅಮೂಲ್ಯ ಕೃತಿಗಳನ್ನು ನೀಡಿರುವ ದಿ॥ ಹೀಚಿ ಶಾಂತವೀರಯ್ಯನವರು ತಮ್ಮ "ನೊಳಂಬರ ಶಾಸನಗಳು" ಕೃತಿಯಲ್ಲಿ ತಿಳಿಸಿರುವುದು.

ನೊಳಂಬರು ಬೃಹತ್ ಕೆರೆಗಳಂತೆಯೇ ಅಲ್ಲಿನ ಭೂಪರಿಸರ ವ್ಯಾಪ್ತಿಗನುಗುಣವಾಗಿ ಕಟ್ಟೆಗಳು, ಕಲ್ಯಾಣಿ ಬಾವಿಗಳನ್ನು ನಿರ್ಮಿಸಿರುವರು ಹಾಗೆಯೇ ಶರಣರು ತಪಗೈದ ಸ್ಥಳಗಳಲ್ಲಿ ಪವಾಡ ಎನ್ನುವಂತೆ ಜಲೋದ್ಭವಕ್ಕೆ ಕಾರಣವಾಗಿರುವ ಪುಣ್ಯಕ್ಷೇತ್ರಗಳು ಹಲವಾರಿವೆ. ಉದಾಹರಣೆಗೆ ಸಿದ್ಧಗಂಗೆ, ಬೆಳಗುಂಬ, ಕಾರೆಕುರ್ಚಿ ಇನ್ನು ಮುಂತಾದ ಸ್ಥಳಗಳನ್ನು ಕಾಣಬಹುದು. ಇದೇ ರೀತಿ ಹಲವಾರು ಕೆರೆ, ಕಟ್ಟೆ ಬಾವಿಗಳ ನೀರಿನ ಪ್ರಭಾವದಿಂದ ಇಂತಹ ಪವಾಡ ಘಟನೆಗಳಾಗಿರುವುದನ್ನು ತಿಳಿಯಬಹುದು. ತುಮಕೂರು ಬಳಿಯ ಬೆಳಗುಂಬ ಕ್ಷೇತ್ರದ ಗುರುಸಿದ್ಧರಾಮರ ದೇವಾಲಯದ ಬಳಿ ಬೆಟ್ಟದ ಸನಿಹದಲ್ಲಿರುವ ಗಂಗೋದ್ಭವ ದೋಣಿಯಿಂದ ತೀರ್ಥನ್ನು ಸ್ವೀಕರಿಸಿ ಹಲವಾರು ಸಂಕಷ್ಟಗಳಿಂದ ಅನಾರೋಗ್ಯದಿಂದ ಪಾರಾಗಿರುವುದು. ಪುತ್ರ ಸಂತಾನಭಾಗ್ಯ ಪಡೆದಿರುವ ಸತ್ಯಘಟನೆಗಳನ್ನು ಕಂಡು ಕೇಳಿ ತಿಳಿಯಬಹುದು. ದೈವಬಲದ ಮುಂದೆ ಎಲ್ಲಾ ಬಲಗಳು ನಿಷ್ಫಲ ಎಂದು "ಕೆರೆ ತೊರೆ ದೇಗುಲಗಳ ಕಡೆಯಿಂದ ನಿಮ್ಮ ಕಂಟೆ ಅನುದಾನಿಯಲ್ಲವಯ್ಯ ನೀ ಹೇಳಿದಂತೆ ನಾ ಮಾಡಿದೆನು". ತನ್ನ ಆರಾಧ್ಯದೈವ ಶ್ರೀಶೈಲದ ಮಲ್ಲಿಕಾರ್ಜುನರ ಪ್ರೇರಣೆಯಿಂದಲೇ ನಾನು ಲೋಕಹಿತ ಕಾರ್ಯಗಳಲ್ಲಿ ತೊಡಗಿಕೊಂಡೆನೆಂದು ಹೇಳುವ ಸಿದ್ಧರಾಮರು ತಮ್ಮ ಮೊದಲ ಘಟ್ಟದಲ್ಲಿ ಕಾಯಕಯೋಗಿಯಾಗಿ 2ನೇ ಘಟ್ಟದಲ್ಲಿ ಶರಣ ಸಮೂಹದೊಡಗೂಡಿ ಶಿವಯೋಗಿಯಾಗಿರುವುದನ್ನು ತಿಳಿಯಬಹುದು.

# ಪ್ರೊ. ಡಿ.ಹೆಚ್.ಪ್ಯಾಟಿ : ವ್ಯಕ್ತಿ ಪರಿಚಯ



**"ವರ್ಣಮಾತ್ರಂ ಕಲಿಸಿದಾತಂ ಗುರು ಮಹಾಸದ್ ವಿದ್ಯೆಯೇ ಪುಣ್ಯದಂ ಸುತನೆ ಸದ್ಗತಿದಾತನಯ್ಯ ಹರದಿರಾ ಶ್ರೀ ಚೆನ್ನಸೋಮೇಶ್ವರ"**

ಶ್ರೀಯುತ ಡಿ.ಹೆಚ್.ಪ್ಯಾಟಿ, ನಿ.ಪ್ರಾಂಶುಪಾಲರು, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. ಪ್ರಸ್ತುತ ಲೇಖನದಲ್ಲಿ ಇವರ ಪರಿಚಯವನ್ನು ಮಾಡಿಕೊಡಲಾಗಿದೆ. ತಾವು ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘವಾಗಿ ಸೇವೆ ಸಲ್ಲಿಸಿದ್ದು ತಮ್ಮ ಪೂರ್ಣ ಹೆಸರು ದೊಡ್ಡಬಸನಗೌಡ ಹನುಮಗೌಡ ಪ್ಯಾಟಿ ಎಂಬುದು ನಿಜಕ್ಕೂ ಹೆಸರಿಗೆ ತಕ್ಕಂತೆ ಸಾತ್ವಿಕತೆಯ ಗುಣದಲ್ಲಿ ತಾವು ದೊಡ್ಡಗೌಡರು ಹೌದು. ನಿಮ್ಮ ಸಹನೆ, ಮೃದುತ್ವ, ಬದ್ಧತೆಗಳೇ ನಿಮ್ಮನ್ನು ಸಾರ್ಥಕತೆಯೆಡೆಗೆ ಸಾಗಲು ಪ್ರೇರೇಪಿಸಿದ ಅಂಶಗಳಾಗಿವೆ ಎಂದು ಭಾವಿಸಿದ್ದೇವೆ. ಮನೆತನದ ಹೆಸರು ಪ್ಯಾಟಿಯಾದರೂ ನೀವು ಶುದ್ಧ ಗ್ರಾಮ್ಯ ಸಂಸ್ಕೃತಿಯ ಬಹುದೊಡ್ಡ ಮಾದರಿ.

ಶ್ರೀಯುತರು ಹಿರೇಕೆರೂರು ತಾಲೂಕಿನ ದೂದಿಹಳ್ಳಿಯ ನೊಳಂಬ ಲಿಂಗಾಯತ ಮನೆತನಕ್ಕೆ ಸೇರಿದ ಶರಣ ದಂಪತಿಗಳಾದ ದಿ॥ ಶ್ರೀಮತಿ ನಾಗಮ್ಮ ಹನುಮಗೌಡ ದಂಪತಿಗಳ ಆರನೇ ಪುತ್ರರಾಗಿ 1963 ಜನವರಿ 5ರಂದು ಜನಿಸಿದ್ದೀರಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಮುಗಿಸಿ ಹಿರೇಕೆರೂರಿನಲ್ಲಿ ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಪೂರೈಸಿದ್ದೀರಿ. ನಂತರ ವಿದ್ಯಾಕಾಶಿಯೆಂದೇ ಪ್ರಸಿದ್ಧಿ ಪಡೆದ ಸಾಹಿತ್ಯ ಸಂಸ್ಕೃತಿಯ ನೆಲೆವೀಡಾದ ಧಾರವಾಡದಲ್ಲಿ ಬಿ.ಎ. ಪದವಿ, ಕರ್ನಾಟಕ ವಿಶ್ವವಿದ್ಯಾಲಯ ದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ತಮ್ಮ ಮನೆತನ ಹಾಗೂ ಗ್ರಾಮಕ್ಕೆ ಹೆಸರು ತಂದು ಕೊಟ್ಟಿದ್ದೀರಿ. ಅದು ಆಗಿನ ಕಾಲಘಟಕ್ಕೆ ಅದೊಂದು ಸಾಧನೆಯ ಇತಿಹಾಸವೇ ಸರಿ.

1991-92ರಲ್ಲಿ ದಾವಣಗೆರೆ ನಗರದ ಶ್ರೀ ದೇವರಾಜ್ ಅರಸ್ ವಿದ್ಯಾಸಂಸ್ಥೆಯ ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜನಲ್ಲಿ ಬೋಧನಾ ವೃತ್ತಿಗೆ ತಮ್ಮನ್ನು ತೊಡಗಿಸಿಕೊಂಡು 2023ರವರೆಗೂ ಪ್ರಾಚಾರ್ಯರಾಗಿ ಸೇವೆಸಲ್ಲಿಸಿ ಉತ್ತಮ ಆಡಳಿತ ನೀಡಿದ್ದೀರಿ.

ತಾವು 1994ರಲ್ಲಿ ವೈವಾಹಿಕ ಬಂಧನಕ್ಕೊಳಗಾಗಿ ಶ್ರೀಮತಿ ಸುಜಾತರವರನ್ನು ಕೈಹಿಡಿದು ಜೊತೆಯಲ್ಲಿ ಸಾಗಿ ಮಾಗುವ ಬದುಕೆಂಬುದನ್ನು ನಿರೂಪಿಸಿದ್ದೀರಿ. ನಿಮ್ಮ ಪುತ್ರರಾದ ಕಿರಣ್ ಪ್ಯಾಟಿರವರು ನೀವು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವುದು ಸಂತಸದ ವಿಷಯ ಮತ್ತು ಇಂಜಿನಿಯರ್ ವೃತ್ತಿಯಲ್ಲಿ ಯಶ ಕಂಡಿದ್ದಾರೆ.

ತಾವು ತಮ್ಮ ವೃತ್ತಿ ಜೀವನದಲ್ಲಿ ಮಹತ್ವದ ಹೊಣೆಗಾರಿಕೆಗಳಾದ ಕುವೆಂಪು ಮತ್ತು ದಾವಣಗೆರೆ ವಿಶ್ವವಿದ್ಯಾನಿಯಲದ ಸಿಂಡಿಕೇಟ್ ಸದಸ್ಯರು, ಅಧ್ಯಯನ ಮಂಡಳಿಯ ಸದಸ್ಯರಾಗಿ, ಪರೀಕ್ಷಾ ಮಂಡಳಿ ಮತ್ತು ಪಠ್ಯರಚನಾ ಸಮಿತಿಯ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದೀರಿ. ಶಾಶ್ವತ ಅನುದಾನ ರಹಿತವೆಂಬ ಹಣೆಪಟ್ಟಿ ಕಟ್ಟಿಕೊಂಡ ಸಂದರ್ಭದಲ್ಲಿ ಹಲವರ ಜೊತೆ ಸೇರಿ ಅನುದಾನಕ್ಕಾಗಿ ಅವಿರತ ಹೋರಾಟ ಮಾಡಿ ಅನುದಾನ ಪಡೆಯುವಲ್ಲಿ ಬಹಳಷ್ಟು ಶ್ರಮಪಟ್ಟಿದ್ದೀರಿ.

ವೃತ್ತಿಯಿಂದ ನಿವೃತ್ತರಾಗಿದ್ದು ಕೇವಲ ಔಪಚಾರಿಕವಷ್ಟೆ. ಆದರೆ ನಿಮ್ಮ ಉತ್ಸಾಹ, ಕ್ರಿಯಾಶೀಲತೆ, ಪ್ರವೃತಿಗಳಿಂದ ಆದು ಸದಾ ನಿರಂತರ ಸೌಮ್ಯವಾಗಿ ಹರಿಯುತ್ತಿರುವ ನದಿಯಂತೆ. ತಮ್ಮ ಆಡಳಿತದ ಅವಧಿಯಲ್ಲಿ ಅನೇಕ ಶೈಕ್ಷಣಿಕ ಉಪನ್ಯಾಸಗಳು, ಕಾರ್ಯಾಗಾರ, ವಿಚಾರ ಸಂಕಿರಣಗಳನ್ನು ಆಯೋಜಿಸಿದ್ದೀರಿ. ಭೋಧನೆಗೆ ವೇದನೆ, ಸಂವೇದನೆ, ಆಲೋಚನಾಕ್ರಮ, ವಿಸ್ತರಿಸುವ ಪರಿ ಇವೆಲ್ಲ ನಿಮ್ಮಲ್ಲಿರುವುದು ವಿಶೇಷತೆ. ತಮ್ಮ ಸಾರ್ಥಕ ಸೇವೆಗೆ ಶ್ರೀ ದೇವರಾಜ ಅರಸು ವಿದ್ಯಾಸಂಸ್ಥೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ಆಡಳಿತ ಮಂಡಳಿ, ಬೋಧಕ ಬೋಧಕೇತರ ವರ್ಗ ಹಾಗೂ ಅಪಾರ ವಿದ್ಯಾರ್ಥಿ ವೃಂದ ನಿಮ್ಮ ಸೇವೆಯನ್ನು ಸ್ಮರಣೆಯಲ್ಲಿಟ್ಟುಕೊಂಡಿದ್ದಾರೆ. ನಿಮ್ಮ ಕಾಯಕ ನಿಷ್ಠೆ, ಸರಳತೆ, ಸಮಯ ಪ್ರಜ್ಞೆ ಎಲ್ಲರಿಗೂ ಮಾದರಿಯಾಗಿದೆ.

ನಿಮ್ಮ ಮುಂದಿನ ನಿವೃತ್ತ ಜೀವನ ಸುಖ, ಶಾಂತಿ, ನೆಮ್ಮದಿಯಿಂದ ಕೂಡಿರಲಿ, ಆ ದೇವರು ನಿಮಗೆ ಆಯುರಾರೋಗ್ಯ ನೀಡಲೆಂದು ನೊಳಂಬವಾಣಿ ಪತ್ರಿಕಾ ಬಳಗ ಮತ್ತು ನೊಳಂಬ ಲಿಂಗಾಯತ ಸಂಘ, ಬೆಂಗಳೂರು ಶುಭ ಕೋರುತ್ತದೆ.

**- ಸಂಪಾದಕರು**

# ಶ್ರೀ ಬಸವೇಶ್ವರ ಪುತ್ಥಳಿ ಪ್ರತಿಷ್ಠಾಪನೆ

ವಿಶ್ವದ ಮಹಾನ್ ದಾರ್ಶನಿಕರಲ್ಲಿ ಪ್ರಮುಖರಾದ ಬಸವಣ್ಣನವರ ನೇತೃತ್ವದಲ್ಲಿ 12ನೇ ಶತಮಾನದಲ್ಲಿ, ಕರ್ನಾಟಕದಲ್ಲಿ ಸಾಮಾಜಿಕ, ಧಾರ್ಮಿಕ, ನೈತಿಕ, ಸಾಹಿತ್ಯಿಕ ನೆಲೆಯಲ್ಲಿ ನಡೆದ ಸಮಗ್ರ ಕ್ರಾಂತಿ ವಿಶ್ವದಲ್ಲಿಯೇ ಐತಿಹಾಸಿಕವಾದದ್ದು. ಜಾತ್ಯಾತೀತ ಪ್ರಜ್ಞೆ, ಕಾಯಕ ದಾಸೋಹ ಸಿದ್ಧಾಂತ, ವೈಚಾರಿಕ ಪ್ರಜ್ಞೆ, ಸ್ತ್ರೀ ಸಮಾನತೆಯಂತಹ ಆದರ್ಶ ವಿಚಾರ ಧಾರೆಯನ್ನು ಪ್ರತಿಪಾದಿಸಿದರು. ಅವರ ಸಾರಥ್ಯದಲ್ಲಿ ಸ್ಥಾಪಿತವಾದ ಅನುಭವಮಂಟಪವು 'ವಿಶ್ವದ ಮೊದಲ ಸಂಸತ್ತು' ಎಂದು ವ್ಯಾಖ್ಯಾನಿಸಲಾಗಿದೆ. 'ಆತ್ಮಕಲ್ಯಾಣ' ಹಾಗೂ 'ಲೋಕಕಲ್ಯಾಣ'ದ ಮಹಾನ್ ಮಣಿಹವನ್ನು ಸಾಕಾರಗೊಳಿಸಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ 'ವಿಶ್ವಧರ್ಮ'ದ ಸಂದೇಶವನ್ನು ಜಗತ್ತಿಗೆ ಸಾರಿದ ಬಸವಣ್ಣನವರ 'ಪುತ್ಥಳಿ' ಪ್ರತಿಷ್ಠಾಪಿಸುವುದು ಹಾಗು ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರದ್ದು.

ಬೆಂಗಳೂರಿನ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬಸವೇಶ್ವರನಗರ ಬಡಾವಣೆ 1970ರಲ್ಲಿ ನಿರ್ಮಾಣವಾಯಿತು. ಸುಮಾರು 55 ವರ್ಷಗಳಾದರೂ ಬಸವೇಶ್ವರ ನಗರದಲ್ಲಿ ಬಸವೇಶ್ವರರ ಪ್ರತಿಮೆ ಪ್ರತಿಷ್ಠಾಪಿಸುವ ಆಶಯ ಬಸವ ಭಕ್ತರ ಅಭಿಲಾಷೆ ಕನಸಾಗಿಯೇ ಉಳಿದಿತ್ತು. ಸುಮಾರು 5 ವರ್ಷಗಳ ಹಿಂದೆ ಬಸವೇಶ್ವರ ಪುತ್ಥಳಿ ಪ್ರತಿಷ್ಠಾನ ಸಮಿತಿ ರೂಪಿಸಿ, ಬಸವೇಶ್ವರ ನಗರದ ಬಸವ ಭಕ್ತಾದಿಗಳು, ಹೇಗಾದರೂ ಬಸವೇಶ್ವರ ಪುತ್ಥಳಿ ಪ್ರತಿಸ್ಥಾಪಿಸುವ ಛಲದಿಂದ ನೊಳಂಬ ಲಿಂಗಾಯತ ಸಂಘದ ಬಸವ ವೇದಿಕೆ, ಬಸವ ಪುತ್ಥಳಿ ಪ್ರತಿಷ್ಠಾನ ಸಮಿತಿಯ ಮುಖಂಡರು ಅಂದಿನ ಮೇಯರ್ ಆಗಿದ್ದ ಶರಣೆ ಗಂಗಾಂಬಿಕಾ ಮಲ್ಲಿಕಾರ್ಜುನ ಅವರನ್ನು ಭೇಟಿ ಮಾಡಿದಾಗ ತುಂಬು ಹೃದಯದಿಂದ ಒಪ್ಪಿಗೆ ಕೊಟ್ಟು, ಅದಕ್ಕೆ ಬೇಕಾದ ಅನುದಾನವನ್ನು ಬಿಡುಗಡೆಗೊಳಿಸಿದರು.

ಅದನ್ನು ಪ್ರತಿಷ್ಠಾಪಿಸುವ ಸಲುವಾಗಿ ಜಾಗವನ್ನು ನಿರ್ಧರಿಸಲು ಹುಡುಕಾಟ ನಡೆಸಿ, ಅದನ್ನು ಮೋದಿ ರಸ್ತೆ ಮತ್ತು ವೆಸ್ಟ್ ಆಫ್ ಕಾರ್ಡ್‌ರೋಡ್ ಸಂದಿಸುವ ಜಂಕ್ಷನ್‌ನಲ್ಲಿ ನಿರ್ಮಾಣ ಮಾಡುವ ಬಗ್ಗೆ ಶಾಸಕರಾದ ಶ್ರೀ ಎಸ್.ಸುರೇಶ್ ಕುಮಾರ್‌ರವರನ್ನು ಕೇಳಿದಾಗ, ಅವರು ಸಂತೋಷದಿಂದ ಮಾಡುತ್ತಿದ್ದೀರಿ ಎಂದರು. ಬಿಬಿಎಂಪಿಯ ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಲು ಅನುಮತಿ ನೀಡಿದರು. ನಮ್ಮ ಸಂಘದ ಕಾಮಗಾರಿ ಸಮಿತಿಯಲ್ಲಿರುವ ಆಗ ಶ್ರೀ ಎಂ.ಎನ್.ಪ್ರಸಾದ್ (ಅಭಿಯಂತರರು) ಅವರು ಮೆಟ್ರೋ ಪಿಲ್ಲರ್ ಮಾದರಿಯಲ್ಲಿ ನಿರ್ಮಾಣ ಮಾಡಬಹುದು ಎಂದು ನೀಲನಕ್ಷೆಯನ್ನು ಸಿದ್ಧಪಡಿಸಿ ಅವರಿಗೆ ವಿವರಿಸಿದಾಗ ಸಾಧ್ಯವೇ ಎಂಬಲ್ಲಿಂದ ಅದನ್ನು ಪೂರ್ತಿ ವಿನ್ಯಾಸ ಮಾಡಿ ಅದಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಟ್ಟರು. ಬಸವಪುತ್ಥಳಿ ಪ್ರತಿಷ್ಠಾಪನೆಯಾಯಿತು, ಕಾರ್ಯ ಸುಗಮವಾಯಿತು. ಬಸವ ಪುತ್ಥಳಿಯನ್ನು ಸುಮಾರು 14 ಅಡಿ ಎತ್ತರವಿದ್ದು, 3 ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಿದೆ. ಅದರ ಸುತ್ತಲೂ ಸುಮಾರು 24 ವಚನಗಳನ್ನು ಆಯ್ದು ಅಳವಡಿಸಲಾಗಿದೆ. ಪುತ್ಥಳಿಯ ಹಿಂಭಾಗದಲ್ಲಿ 'ಅನುಭವ ಮಂಟಪ'ದ ಉಬ್ಬುಶಿಲ್ಪವಿದೆ. ಎಡಬಲಗಳಲ್ಲಿ ವಿದ್ಯುದ್ದೀಪಗಳನ್ನು ಅಳವಡಿಸಲಾಗಿದೆ. ಸುಂದರವಾದ, ಪ್ರಶಾಂತವಾದ ಪರಿಸರವು ನಿರ್ಮಾಣವಾಗಿದೆ.

ಸೆಪ್ಟಂಬರ್ 6ರಂದು ಬಸವ ಪುತ್ಥಳಿ ಪ್ರತಿಷ್ಠಾಪನೆಯು ವಿಜೃಂಭಣೆಯಿಂದ ನೆರವೇರಿತು. ದಿವ್ಯಸಾನ್ನಿಧ್ಯವನ್ನು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಸುತ್ತೂರು ಮಠ. ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠ, ತುಮಕೂರು. ಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಶ್ರೀ ಆದಿಚುಂಚನ ಗಿರಿ ಮಹಾಸಂಸ್ಥಾನ ಮಠ. ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ಮಾತೆ ಗಂಗಾದೇವಿಯವರು ವಹಿಸಿದ್ದರು. ಬಸವ ಪುತ್ಥಳಿ ಅನಾವರಣವನ್ನು ಸನ್ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್‌ರವರು, ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್.ಸುರೇಶ್‌ಕುಮಾರ್, ಶಾಸಕರು ಹಾಗೂ ಮಾಜಿ ಸಚಿವರು, ವಹಿಸಿದ್ದರು.

ಸಮಾರಂಭದ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು, ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ. ಶಿಲಾನ್ಯಾಸ ಅನಾವರಣವನ್ನು ಸನ್ಮಾನ್ಯ ಶೋಭಾ ಕರಂದ್ಲಾಜೆಯವರು, ರಾಜ್ಯ ಸಚಿವರು, ಭಾರತ ಸರ್ಕಾರ, ಅನುಭವಮಂಟಪ ಉಬ್ಬುಶಿಲ್ಪವನ್ನು ಸನ್ಮಾನ್ಯ ಶ್ರೀ ಎಂ.ಬಿ.ಪಾಟೀಲ್, ಸಚಿವರು, ಕರ್ನಾಟಕ ಸರ್ಕಾರ. ವಚನ ಶಿಲಾ ಅನಾವರಣವನ್ನು ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆಯವರು, ಸಚಿವರು, ಕರ್ನಾಟಕ ಸರ್ಕಾರ ನೆರವೇರಿಸಿದರು. ತುಂಬಾ ಸಹಕಾರ ನೀಡಿ ಬೆಂಬಲವಾಗಿ ನಿಂತ ಸನ್ಮಾನ್ಯ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನಯ್ಯ,

**52ನೇ ಪುಟಕ್ಕೆ.....**

# 'ಕಪ್ಪು ಬಂಗಾರ'ದ ಔಷಧಿಯ ಗುಣಗಳು

ಸಸ್ಯಶಾಸ್ತ್ರೀಯ ಹೆಸರು : Piper Nigrum L.
ಸಸ್ಯದಕುಟುಂಬ : PIPERACEAE
ಕನ್ನಡದ ಇತರ ಹೆಸರುಗಳು : ಕಾಳುಮೆಣಸು, ಕರಿಮೆಣಸು, ಮೆಣಸಿನಕಾಳು, ಒಳ್ಳೆಮೆಣಸು
ಇತರ ಭಾಷೆಯ ಹೆಸರುಗಳು : ಸಂ.ಕಫವಿರೋಧಿ, ಮಾರಿಚಾ, ಹಿಂ. ಗೋಲ್‌ಮಿರ್ಚಿ,ಕಾಳಿಮಿರ್ಚಿ, ತೆ. ಮಾರಿಚಮು, ಮಿರಿಯಲು, ತ.ಇರಂಬಿವಮ್, ಕಲ್ಲಿನ್ನೈ



ನಾವು ಅಡಿಗೆಯಲ್ಲಿ ಬಳಸುವ ಅಜವಾನ, ಅರಿಶಿಣ, ಇಂಗು, ಏಲಕ್ಕಿ, ಕರಿಬೇವು, ಕಾಳುಮೆಣಸು, ಕೆಂಪುಮೆಣಸು, ಕೇಸರಿ, ಕೊತ್ತಂಬರಿಕಾಳು, ಜಾಯಿಕಾಯಿ, ಜಾಯಿಪತ್ರೆ, ಜೀರಿಗೆ, ಚಕ್ಕೆ (ದಾಲ್ಚಿನ್ನಿ), ಮೆಂತ್ಯ, ಬೆಳ್ಳುಳ್ಳಿ, ಲವಂಗ, ಲವಂಗಮೆಣಸು (ಜೀರಿಗೆ ಮೆಣಸು), ಶುಂಠಿ, ಸಾಸಿವೆ ಈ ಮೊದಲಾದವೆಲ್ಲ ರುಚಿಯನ್ನುಂಟು ಮಾಡುವ ಸಂಬಾರಪದಾರ್ಥಗಳು ಮಾತ್ರವಲ್ಲಔಷಧಿಯ ಗುಣಗಳ ಆಗರಗಳಾಗಿವೆ. ಇಂತಹಪದಾರ್ಥಗಳಲ್ಲಿ ಕರಿಮೆಣಸು/ ಕಪ್ಪುಮೆಣಸು / ಕಾಳುಮೆಣಸು ಎಂಬ ಹೆಸರುಗಳಿಂದ ಕರೆಯಲ್ಪಡುವ ಇದು ಪ್ರಾಚೀನ ಕಾಲದಿಂದಲೂ ಸಂಬಾರಪದಾರ್ಥವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಹಿಂದಿನ ಕಾಲದಿಂದಲೂ ಭಾರತದಲ್ಲಿ ಇದರ ಬಳಕೆ ಇದೆ. ಕ್ರಿ.ಶ. 13ನೇ ಶತಮಾನದಲ್ಲಿ ಯುರೋಪಿನಿಂದ 'ಮಾರ್ಕೊ ಪೋಲೋ' ಎಂಬ ಇಟಲಿಯ ಪ್ರವಾಸಿ ಭಾರತದ ಮಲಬಾರ್ ಪ್ರಾಂತ್ಯಕ್ಕೆ ಭೇಟಿಯಿತ್ತಾಗ ಅಲ್ಲಿ ಕಾಳುಮೆಣಸು, ಶುಂಠಿ, ದಾಲ್ಚಿನ್ನಿ ಮತ್ತು ತೆಂಗಿನಕಾಯಿಗಳು ಹೇರಳವಾಗಿ ದೊರೆಯುತ್ತವೆಂದು ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾನೆ. ಈ ಕರಿಮೆಣಸು ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಿಯಾ ಭಾಗದಲ್ಲಿ ಮೊದಲಿಗೆ ಕಂಡುಬಂದಿದೆ ಎನ್ನಲಾಗುತ್ತದೆ. ಹೀಗಿದ್ದರೂ ಕ್ರಿ.ಶ. 15ನೇ ಶತಮಾನದಲ್ಲಿ 'ವಾಸ್ಕೊ-ಡಿ-ಗಾಮಾ' ನೌಕಾಯಾನದ ಮೂಲಕ ಆಫ್ರಿಕಾವನ್ನು ಸುತ್ತಿ ಭಾರತಕ್ಕೆ ಬಂದಾಗ ಕ್ಯಾಲಿಕಟ್‌ನಲ್ಲಿ "ನೀವು ಏಕೆ ಬಂದಿದ್ದೀರಿ?" ಎಂದು ಅವರನ್ನು ಪ್ರಶ್ನಿಸಿದಾಗ "ನಾವು ಮಸಾಲೆಗಳನ್ನು ಹುಡುಕುತ್ತ ಬಂದಿದ್ದೇವೆ"ಎಂದು ಸ್ಥಳೀಯರಿಗೆ ಉತ್ತರಿಸುತ್ತಾನೆ. ಅಂದರೆ ಕಾಳುಮೆಣಸು ಕೇರಳ ಸೇರಿದಂತೆ ಭಾರತದ ಉಷ್ಣವಲಯದ ಪ್ರದೇಶಗಳಲ್ಲಿ ಆ ಕಾಲದಿಂದಲೂ ವ್ಯಾಪಕವಾಗಿ ಬೆಳೆಯಲಾಗುತ್ತಿತ್ತು ಎನ್ನುವುದು ಇತಿಹಾಸದ ಪುರಾವೆಗಳಿಂದ ತಿಳಿದುಬರುತ್ತದೆ. ಹೀಗಾಗಿ ಭಾರತದ ಪಶ್ಚಿಮಘಟ್ಟದ ಕಾಡುಗಳು ಕಾಳುಮೆಣಸಿಗೆ ಮೂಲ ನೆಲೆಯಾಗಿರಬಹುದೆ ಎಂಬ ಊಹೆಗೆ ಅವಕಾಶವಿದೆ.

ಈ ಕಪ್ಪುಮೆಣಸು ಯುರೋಪಿನ ಮಧ್ಯಯುಗದ ಆರಂಭದಲ್ಲಿ ದುಬಾರಿ ವಸ್ತುವಾಗಿದ್ದು ಕೇವಲ ಶ್ರೀಮಂತರು ಮಾತ್ರ ಖರೀದಿಸಬಹುದಾಗಿತ್ತಂತೆ. ದೈನಂದಿನ ಮಸಾಲೆಗೆ ಇಷ್ಟೊಂದು ಬೇಡಿಕೆ ಉಂಟಾದಾಗ ಅಲ್ಲಿಯ ಸಾಹಸಿಗಳು ಭಾರತದತ್ತ ಪ್ರಯಾಣ ಹೊರಟು ಅಂದು ನಮ್ಮ ದೇಶದಲ್ಲಿ ಅಗ್ಗವಾಗಿ ಸಿಗುವ ಕಾಳುಮೆಣಸನ್ನು ಕೊಂಡೊಯ್ಯಲು ಪ್ರಾರಂಭಿಸಿದ್ದು ಸಹಜವಾಗಿಯೆ ಇದೆ. ಯುರೋಪ್ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ 'ಕಪ್ಪು ಬಂಗಾರ' ಎಂದು ಗುರುತಿಸಿಕೊಂಡಿದ್ದ ಇದನ್ನು ಕೆಲವೊಮ್ಮೆ ಹಣದ ಬದಲಿಗೆ ಸರಕುಗಳನ್ನು ಖರೀದಿಸಲು ಬಳಸುತ್ತಿದ್ದರಂತೆ. ಅಂದರೆ ಕಾಳುಮೆಣಸು ಹಣದಂತೆ ಚಲಾವಣೆಗೊಳ್ಳುವ ಮೌಲ್ಯವನ್ನು ಗಳಿಸಿತ್ತೆಂದು ಹೇಳಲಾಗುತ್ತದೆ. ಆಗ ಕಾಳುಮೆಣಸಿನ ಬಗ್ಗೆ ಕೆಲವು ಗಾದೆಗಳು ಪ್ರಚಲಿತದಲ್ಲಿ ಇದ್ದವು. ಉದಾ: 'ನಾನು ಹೊರ ಭಾಗದಲ್ಲಿ ಕಪ್ಪಾಗಿದ್ದೇನೆ, ಸುಕ್ಕುಗಟ್ಟಿದ ಹೊದಿಕೆಯನ್ನು ಧರಿಸಿದ್ದೇನೆ, ರಾಜರ ಔತಣಕೂಟಗಳಲ್ಲಿ ಮೇಜಿನ ರುಚಿಕರವಾದ ಐಷರಾಮಿ ಭಕ್ಷ್ಯಗಳೊಂದಿಗೆ ಪರಿಮಳವಾಗಿದ್ದೇನೆ' ಎನ್ನುವ ಜಂಬ ಕಾಳುಮೆಣಸಿನದಾಗಿತ್ತೆಂದು ದಾಖಲೆಗಳಿಂದ ತಿಳಿಯುತ್ತದೆ. ಹಾಗೆ ನೋಡಿದರೆ ಸಾಂಬಾರು ಪದಾರ್ಥಗಳೆಲ್ಲ ಸುವಾಸನೆ, ರುಚಿ ಮತ್ತು ಔಷಧಿಯ ಗುಣಗಳನ್ನು ಹೊಂದಿರುವವುಗಳೆ ಆಗಿವೆ. ಇಷ್ಟಾದರೂ



**ಡಾ॥ ಹಾಲಪ್ಪ ಹೆಚ್.ಕೆ.ಕುಂಟೆ**
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ-577432
ಮೊ-9731190236

ಕರಿಮೆಣಸು ಪ್ರಾಚೀನ ಯುರೋಪ್ ದೇಶಗಳಲ್ಲಿ ಮಸಾಲೆಗಳ ರಾಜನಾಗಿ ಸ್ಥಾನ ಪಡೆದಿತ್ತು. ಕರಿಮೆಣಸಿನ ಉಷ್ಣ ಮತ್ತು ಕಟುವಾದ ಖಾರಗುಣ, ಅದರ ಸುವಾಸನೆ ಅಲ್ಲಿಯವರಿಗೆ ಹೆಚ್ಚು ಪ್ರಿಯವಾಗಿರಬಹುದು. ಇಂದಿಗೂ ಕರಿಮೆಣಸಿನ ಬೆಲೆ ದುಪ್ಪಟ್ಟಾಗಿಯೆ ಇದ್ದು ವಿಶ್ವದ ಅತ್ಯಂತ ಹೆಚ್ಚು ವ್ಯಾಪಾರ ಮಾಡುವ ಮಸಾಲೆಯಾಗಿದೆ. ಪ್ರಸ್ತುತದಲ್ಲಿ ಇಥಿಯೋಪಿಯಾ, ವಿಯಟ್ನಾಂ, ಬ್ರೆಜಿಲ್, ಇಂಡೋನೇಷಿಯಾ ಮತ್ತು ಭಾರತ ಈ ಮೊದಲಾದ ದೇಶಗಳು ಪ್ರಮುಖವಾಗಿ ಕಾಳುಮೆಣಸನ್ನು ಉತ್ಪಾದಿಸುತ್ತವೆ. ವಿವಿಧ ರಾಷ್ಟ್ರಗಳ ಉತ್ಪಾದನೆ ಈ ಕೆಳಗಿನಂತಿದೆ.

**ಕಾಳುಮೆಣಸು ಉತ್ಪಾದನೆ, ವರ್ಷ–2019**

| ದೇಶ | ಉತ್ಪಾದನೆ (ಟನ್) |
|---|---|
| ಇಥಿಯೋಪಿಯ | 374,413 |
| ವಿಯಾಟ್ನಾಂ | 264,413 |
| ಬ್ರೆಜಿಲ್ | 109,401 |
| ಇಂಡೋನೇಷಿಯಾ | 88,949 |
| ಭಾರತ | 66,000 |
| ಚೀನಾ | 37,423 |
| ಮಲೇಷ್ಯಾ | 33,940 |
| ವಿಶ್ವದ ಒಟ್ಟು | 1,103,024 |

2019ರಲ್ಲಿ ಇಥಿಯೋಪಿಯಾ ಕಾಳುಮೆಣಸಿನ ಅತಿದೊಡ್ಡ ಉತ್ಪಾದಕ ಮತ್ತು ರಫ್ತುದಾರ ರಾಷ್ಟ್ರವಾಗಿದೆ. ಜಾಗತಿಕ ಕಾಳುಮೆಣಸಿನ ಉತ್ಪಾದನೆಯು ಆ ಬೆಳೆಯ ನಿರ್ವಹಣೆ, ರೋಗ ಮತ್ತು ಹವಾಮಾನಕ್ಕೆ ಅನುಗುಣವಾಗಿ ಅದರ ವಾರ್ಷಿಕ ಉತ್ಪಾದನೆಯಲ್ಲಿ ಬದಲಾವಣೆ ಉಂಟಾಗುತಿರುತ್ತದೆ.

ಕಾಳುಮೆಣಸಿನ ಬಳಕೆಯನ್ನು ಕಂಡುಕೊಳ್ಳುವ ಮೊದಲು ಅದು ಕಾಡಿನಲ್ಲಿ ಸಹಜವಾಗಿ ಬೆಳೆದು ಪ್ರಾಣಿ ಪಕ್ಷಿಕೀಟಗಳ ಆಹಾರವೊ, ಔಷಧವೊ ಆಗಿರಬಹುದು. ಅವುಗಳ ಸೇವನೆಯನ್ನು ಗಮನಿಸಿದ ಮನುಷ್ಯನು ಕಾಳುಮೆಣಸಿನ ಉಪಯೋಗವನ್ನು ಅರಿತಿದ್ದಾನೆ. ಕಾಲಾನಂತರ ಕಾಳುಮೆಣಸು ಇಂದು ಕೃಷಿಯಲ್ಲಿ ಪ್ರಮುಖ ವಾಣಿಜ್ಯ ಬೆಳೆಯಾಗಿ ಗುರುತಿಸಿಕೊಂಡಿದೆ. ಇದೊಂದು ಬಳ್ಳಿಯಾಗಿದ್ದು ಯಾವುದಾದರೊಂದು ಮರಕ್ಕೆ ಹಬ್ಬಿಕೊಂಡು ಬೆಳೆಯುತ್ತದೆ. ಅಪ್ಪು ಸಸ್ಯವಾಗಿರುವ ಇದರ ಕಾಂಡದ ಗೆಣ್ಣುಗಳಲ್ಲಿ ಬೇರು ಮೂಡಿ ಆಶ್ರಿತ ಮರಕ್ಕೆ ಅಂಟಿಕೊಳ್ಳುತ್ತವೆ. ಬಳ್ಳಿಯ ಕಾಂಡದ ಗಾತ್ರ ಹಿರಿದಾದಂತೆ ಬೇರೊಂದು ಮರವನ್ನು ಅಪ್ಪಿಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡು ನೆಲಕ್ಕೆ ಜಾರುತ್ತದೆ. ನೆಲಕ್ಕೆ ಬೀಳದಿರಲೆಂದು ಕಟ್ಟುಗಳೊಂದಿಗೆ ಅಡಿಕೆ ಅಥವ ತೆಂಗಿನ ಮರಗಳಿಗೆ ಬಳ್ಳಿಯ ಕಾಂಡವನ್ನು ಕಟ್ಟುತ್ತಾರೆ. ನೋಡಲು ವೀಳೆದೆಲೆಯ ಬಳ್ಳಿಯಂತೆಯೆ ಕಾಣುವ ಇದು ಕರಾವಳಿ ಮತ್ತು ಮಲೆನಾಡಿನ ಕಾಡುಗಳಲ್ಲಿ ಸಹಜವಾಗಿ ಬೆಳೆದಿರುವುದನ್ನು ಈಗಲೂ ಕಾಣಬಹುದು.

ಅರಣ್ಯವಾಸಿಗಳಾದ ಬುಡಕಟ್ಟು ಜನರು ಸೇರಿದಂತೆ ಇತರ ಬಡರೈತರು ಕಾಡಿನಲ್ಲಿ ಬೆಳೆದಿರುವ ಬಳ್ಳಿಗಳಿಂದ ಕಾಳುಮೆಣಸನ್ನು ಕಿತ್ತು ತಂದು ಮನೆ ಬಳಕೆಗೆ ಉಪಯೋಗಿಸುತ್ತಾರೆ. ಈಗ ಇದನ್ನು ಕೃಷಿಯಲ್ಲಿ ಅಡಿಕೆ, ತೆಂಗಿನ ಮರಗಳಿಗೆ ಹಬ್ಬಿಸಿ ಮಿಶ್ರಬೆಳೆಯಾಗಿ ಬೆಳೆಯಲಾಗುತ್ತದೆ. ಇದನ್ನು ಬೆಳೆಯಲು ನೀರು ಮತ್ತು ನೆರಳಿನ ಸೌಲಭ್ಯ ಅವಶ್ಯಕವಾಗಿ ಇರಬೇಕು. ನಾಟಿ ಮಾಡಿದ ಮೂರು ಅಥವ ನಾಲ್ಕು ವರ್ಷಗಳಲ್ಲಿ ಫಸಲು ಬರಲು ಶುರುವಾಗುತ್ತದೆ. ಹದಿಮೂರು ಅಡಿಗಳಷ್ಟು ಎತ್ತರಕ್ಕೆ ಬಳ್ಳಿ ಬೆಳದ ಮೇಲೆ ಬಳ್ಳಿಯ ತುದಿಯನ್ನು ಕತ್ತರಿಸುತ್ತಾರೆ. ಇದರಿಂದ ಬಳ್ಳಿಯ ಕವಲುಗಳು ಅಧಿಕವಾಗಿ ಟಿಸಿಲೊಡೆದು ಕಾಳುಮೆಣಸಿನ ಇಳುವರಿ ಹೆಚ್ಚಾಗುತ್ತದೆ. ಇದರ ಕಾಂಡದಿಂದಲೇ ಹೊಸ ಸಸ್ಯಗಳ ಸಂತಾನೋತ್ಪತ್ತಿಯನ್ನು ಮಾಡಲಾಗುತ್ತದೆ. ಅಂದರೆ, ಬಳ್ಳಿಯನ್ನು ಕತ್ತರಿಸಿ ನಾಟಿ ಮಾಡಿಸಸಿಗಳಾಗಿ ಬೆಳಸಲಾಗುತ್ತದೆ. ಈ ಕಾಳುಮೆಣಸಿನ ಕೃಷಿ ಮೊದಲು ಮಲೆನಾಡಿಗಷ್ಟೆ ಸೀಮಿತವಾಗಿತ್ತು. ಈಗ ಅರೆಮಲೆನಾಡು ಮತ್ತು ಬಯಲು ಜಿಲ್ಲೆಗಳ ರೈತರು ಬೆಳೆಯಲು ಪ್ರಾರಂಭಿಸಿದ್ದಾರೆ. ಇದರ ಪ್ರತಿಯೊಂದು ಕಾಳಿನಲ್ಲಿ ಒಂದೇ ಬೀಜ ಇರುತ್ತದೆ. ಕಾಳುಗಳು ಮೊದಲಿಗೆ ಹಸಿರಾಗಿದ್ದು ಹಣ್ಣಾಗುತ್ತಿದ್ದಂತೆ ಕೆಂಪುಬಣ್ಣಕ್ಕೆ ತಿರುಗುತ್ತವೆ. ಕಾಳುಮೆಣಸಿನ ಪ್ರತಿ ಗೊಂಚಲಿನಲ್ಲಿ 100ರಿಂದ 150ರವರೆಗೆ ಕಾಳುಗಳಿರುತ್ತವೆ. ಇದನ್ನು ಬೆಳೆಯಲು ಯಾವುದೇ ಕೀಟನಾಶಕವನ್ನು ಬಳಸುವುದು ಕಡಿಮೆ. ಇದರಲ್ಲಿ ಇತ್ತೀಚೆಗೆ ಪಣಿಯೂರು, ಗಿರಿಮುಂಡ, ಪನ್ನೂರ್, ಮಲಬಾರ್‌ಎಕ್ಸಲ್, ಅರ್ಕಾಕೂರ್ಗ್, ಸಿಗಂದಿನಿ ಈ ಮೊದಲಾದ ತಳಿಗಳನ್ನು ಗುರುತಿಸಲಾಗಿದೆ. ನಮ್ಮ ದೇಶದಲ್ಲಿ ಹೆಚ್ಚು ಮೆಣಸು ಬೆಳೆಯುವ ರಾಜ್ಯಗಳಲ್ಲಿ ಮೊದಲ ಸ್ಥಾನದಲ್ಲಿ ಕರ್ನಾಟಕ, ನಂತರ ಕೇರಳ ಹಾಗೂ ತಮಿಳುನಾಡು ರಾಜ್ಯಗಳಿವೆ. ಪ್ರಸ್ತುತ ಕಾಳುಮೆಣಸು ಪ್ರತಿ ಕೆ.ಜಿ.ಗೆ ರೂ. 500ರಿಂದ 800ವರೆಗೆ ಬೆಲೆಯನ್ನು ಹೊಂದಿದೆ. ಆದರೆ ದಲ್ಲಾಳಿಗಳ ಕಾರುಬಾರಿನಲ್ಲಿ ಕೃಷಿಕರಿಗೆ ಇದೇ ಬೆಲೆ ಸಿಗುತ್ತದೆ ಎನ್ನುವುದು ಖಾತರಿ ಇಲ್ಲ. ಇದರಲ್ಲಿ ಬಿಳಿಕಾಳು ಮೆಣಸು ಮತ್ತು ಕರಿಕಾಳುಮೆಣಸು ಎಂಬ ಎರಡು ವಿಧಗಳಿವೆ.

**ಬಿಳಿಕಾಳು ಮೆಣಸು**

ಹಣ್ಣಾದ ಕಾಳುಮೆಣಸುಗಳನ್ನು ಮೂರು ದಿನಗಳವರೆಗೆ ನೀರಿನಲ್ಲಿ ನೆನೆಯಿಸಿದರೆ ಮೇಲ್ಭಾಗದ ಸಿಪ್ಪೆ ಕೊಳೆತಂತಾಗಿ ಉದುರಿ ಹೋಗುತ್ತದೆ. ಸಿಪ್ಪೆ ಕಳೆದುಕೊಂಡ ಕಾಳು ಬಿಳಿಯದಾಗಿ ಕಾಣುತ್ತದೆ. ಇದನ್ನೆ ಬಿಳಿಕಾಳುಮೆಣಸು ಎನ್ನುತ್ತಾರೆ. ಸಿಪ್ಪೆ ತೆಗೆದ ಮೇಲೆ ಕಹಿ ಅಂಶವನ್ನು ಕಳೆದುಕೊಂಡು ಖಾರದರುಚಿ ಮಾತ್ರಇರುತ್ತದೆ.

**ಕರಿಕಾಳುಮೆಣಸು**

ಹಣ್ಣಾದ ಕಾಳುಮೆಣಸುಗಳನ್ನು ಕೊಯ್ಲೆ ಮಾಡಿದ ಮೇಲೆ ಬಿಸಿಲಿನಲ್ಲಿ ಒಣಗಿಸುತ್ತಾರೆ, ನಂತರ ಮಾರಾಟಕ್ಕೆ ಕೊಂಡೊಯ್ಯುತ್ತಾರೆ. ಇದು ನೋಡಲು ಕಪ್ಪಾಗಿರಲು ಕಾರಣ ಮೇಲಿನ ಸಿಪ್ಪೆಯನ್ನು ಹಾಗೆ ಉಳಿಸಿಕೊಂಡಿರುವುದು. ಸಿಪ್ಪೆ ಸಹಿತವಾಗಿರುವುದರಿಂದ ಖಾರದ ಜೊತೆ ಸ್ವಲ್ಪ ಕಹಿ ಅಂಶವನ್ನೂ ಒಳಗೊಂಡಿರುತ್ತದೆ.

ಕೇರಳ ಸೇರಿದಂತೆ ಕರ್ನಾಟಕದ ಮಲೆನಾಡಿನ ಭಾಗದಲ್ಲಿ ಕಾಳುಮೆಣಸನ್ನು ಖಾರದ ಸಾಂಬಾರ ಪದಾರ್ಥವಾಗಿ ಮತ್ತು ಮನೆಯಲ್ಲೇ ತಯಾರಿಸುವ ಔಷಧಿಗಳಲ್ಲಿ ಹೆಚ್ಚು ಬಳಕೆ ಮಾಡುವ ರೂಢಿ ಇದೆ. ದೇಹಕ್ಕೆ ಬೇಕಾದ ವಿಟಮಿನ್ 'ಸಿ' ಹಸಿಕಾಳುಮೆಣಸಿನಲ್ಲಿ ಇದೆ. ಹೀಗಾಗಿ ಸಸ್ಯಾಹಾರ ಮತ್ತು ನಾನ್‌ವೆಜ್‌ಗಳೆರಡರಲ್ಲೂ ಇದರ ಉಪಯೋಗವಿದೆ. ಅಂಗಡಿಗಳಲ್ಲೂ ಈಗ ಪೆಪ್ಪರ್‌ಪೌಡರ್ ಲಭ್ಯವಿದೆ. ಅಡಿಗೆಯಲ್ಲಿ ಇದನ್ನು ಬಳಸುವುದರಿಂದ ರುಚಿಯನ್ನು ಹೆಚ್ಚಿಸಬಹುದು. ಇದರಲ್ಲಿ ಆಂಟಿಆಕ್ಸಿಡೆಂಟ್‌ಗಳು ಇರುವ ಕಾರಣ ರೋಗ ನಿರೋಧಕವನ್ನು ಹೆಚ್ಚಿಸಬಲ್ಲದು. ಅತಿಯಾದ ಸೇವನೆಯಿಂದ ಹೊಟ್ಟೆ ಹಾಳಾಗುವ ಸಾಧ್ಯತೆಯೂ ಇದೆ. ಶೀತ ಪ್ರಕೃತಿ ಯವರಿಗೆ ಇದರ ಬಳಕೆಯಿಂದ ಅನುಕೂಲವಿದೆ. ಇನ್ನೂ ಜನಪದ ಔಷಧಿಯಲ್ಲಿ ಕಾಳುಮೆಣಸನ್ನು ವಿವಿಧ ರೂಪಗಳಲ್ಲಿ ಬಳಸಲಾಗುತ್ತದೆ.

1. **ವಿವಿಧ ನೋವುಗಳಿಗೆ :** ಮಂಡಿ ನೋವು, ಭುಜದ ನೋವು, ಕಾಲು, ಕೈ ನೋವಿದ್ದಲ್ಲಿ ಕಾಳುಮೆಣಸನ್ನು ನೀರಲ್ಲಿ ಅರೆದು ತೆಳ್ಳಗೆ ಹೊರ ಲೇಪನವಾಗಿ ಹಚ್ಚಿದರೆ ನೋವು ತಾತ್ಕಾಲಿಕ ಉಪಶಮನವಾಗುತ್ತದೆ.

2. **ಮಕ್ಕಳ ಜೀರ್ಣಶಕ್ತಿ ಮತ್ತು ತೊದಲು ನಿವಾರಣೆಗೆ :** ಕಾಳುಮೆಣಸು, ಬಜೆ, ಜಾಕಾಯಿ ಈ ಮೂರನ್ನು ಎದೆಹಾಲಿನಲ್ಲಿ ತೇಯ್ದು ಒಂದು ತಿಂಗಳ ನಂತರದ ಕೂಸುಗಳಿಗೆ ನೆಕ್ಕಿಸುತ್ತಾರೆ. ಇದರಿಂದ ಮಂದಬುದ್ಧಿ, ತೊದಲು ಮತ್ತು ಅಜೀರ್ಣತೆ ಪರಿಹಾರವಾಗುತ್ತದೆ.

3. **ಬಾಣಂತಿಯರ ಶೀತ :** ಮಲೆನಾಡಿನಲ್ಲಿ ಹೆಚ್ಚಿನ ಮಳೆಯಿಂದಲೊ, ವಾತಾವರಣ ಅಥವ ದೇಹ ಪ್ರಕೃತಿಯಿಂದಲೊ ಬಾಣಂತಿಯರಿಗೆ ಶೀತವಾದರೆ ಕಾಳುಮೆಣಸಿನ ಪುಡಿಯನ್ನು ಜೇನುತುಪ್ಪದೊಡನೆ ಸೇವಿಸಲು ಕೊಡುತ್ತಾರೆ. ಕಾಳುಮೆಣಸು ಉಷ್ಣಗುಣವುಳ್ಳದ್ದರಿಂದ ದೇಹದ ಶೀತವನ್ನು ಪರಿಹರಿಸುತ್ತದೆ.

4. **ಬಾಣಂತಿಯರ ಮೈ ಕೈ ಗಟ್ಟಿಯಾಗಲು :** ಕಾಳುಮೆಣಸಿನ ಪುಡಿ, ಬೆಳ್ಳುಳ್ಳಿ, ಸ್ವಲ್ಪ ಹುಣಿಸೆಹುಳಿ, ಸ್ವಲ್ಪ ಜೀರಿಗೆ ಪುಡಿ, ಸ್ವಲ್ಪ ಸಂಬಾರು ಪುಡಿ, ಕೊತ್ತಂಬರಿ ಸೊಪ್ಪು, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ತಿಳಿಸಾರನ್ನು ಮಾಡಿ ಅನ್ನದೊಂದಿಗೆ ಕೆಲವು ದಿವಸ ಊಟ ಮಾಡಿದರೆ ಬಾಣಂತಿಯರ ಮೈ ಕೈ ಗಟ್ಟಿಯಾಗುತ್ತದೆ. ಮೈ ಕೈ ನೋವೂ ದೂರವಾಗುತ್ತದೆ.

5. **ದೇಹದ ಶೀತವನ್ನು ಹೋಗಲಾಡಿಸಲು :** ಕಾಳುಮೆಣಸನ್ನು ಹುರಿದು ಪುಡಿಮಾಡಿ ಬೆಲ್ಲದ ಜೊತೆ ಉಂಡೆಕಟ್ಟಿ ಮಳೆಗಾಲ ಮತ್ತು ಚಳಿಗಾಲಗಳಲ್ಲಿ ಎಲ್ಲಾ ವಯಸ್ಸಿನವರು ಆಗಾಗ ಸೇವನೆ ಮಾಡುತ್ತಾರೆ. ದೇಹದ ಶೀತವನ್ನು ನಿಯಂತ್ರಿಸಲು ಇದನ್ನು ಸೇವಿಸಲಾಗುತ್ತದೆ.

6. **ಕಫ ನಿವಾರಣೆಗೆ :** ಕಾಳುಮೆಣಸು ಮತ್ತು ಶುಂಠಿಗಳನ್ನು ಅರೆದು ಈರುಳ್ಳಿಯೊಡನೆ ಸೇವಿಸಿದರೆ ಕಫ ಪರಿಹಾರವಾಗುವುದು.

7. **ಶೀತದ ಕೆಮ್ಮಿಗೆ :** ಕಾಳುಮೆಣಸು ಮತ್ತು ಶುಂಠಿಗಳನ್ನು ಅರೆದು ಮಜ್ಜಿಗೆಯೊಡನೆ ಕಲಸಿಕೊಂಡು ರಾತ್ರಿ ಮಲಗುವ ಮುಂಚೆ ಕೆಲವು ದಿನ ಸೇವನೆ ಮಾಡಿದರೆ ಗುಣವಾಗುವುದು.

8. **ತಲೆನೋವು ನಿವಾರಣೆಗೆ :** ಕಾಳುಮೆಣಸು, ಬೆಳ್ಳುಳ್ಳಿ, ಬೆಲ್ಲ ಇವುಗಳನ್ನು ಹಾಲಿನೊಡನೆ ಕುದಿಸಿ ಕಷಾಯ ಮಾಡಿ ವಾರಕ್ಕೊಮ್ಮೆ ಕುಡಿದರೆ ತಲೆನೋವು ಪರಿಹಾರವಾಗುತ್ತದೆ.

9. **ಜಾನುವಾರುಗಳ ತಂಡಿ ಕಾಯಿಲೆ :** ಅತಿಯಾದ ಮಳೆಯಿಂದ ದನಗಳಿಗೆ ತಂಡಿಯಾದರೆ ಕಾಳುಮೆಣಸಿನ ಪುಡಿಯನ್ನು ಬೆಲ್ಲದೊಂದಿಗೆ ಬೆರೆಸಿ ತಿನ್ನಲು ಕೊಡುತ್ತಾರೆ.

10. **ಜಾನುವಾರುಗಳ ನಂಜುಗಾಯ :** ಕಾಳುಮೆಣಸಿನ

ಪುಡಿಯನ್ನು ಕೊಬ್ಬರಿ ಎಣ್ಣೆಯೊಡನೆ ಕಲಸಿ ಬಿಸಿ ಮಾಡಿ ಗಾಯಗಳಿಗೆ ಲೇಪನೆ ಮಾಡಿದರೆ ಗುಣವಾಗುತ್ತದೆ. ಮನುಷ್ಯರಿಗೂ ಇದನ್ನೆ ಬಳಸುತ್ತಾರೆ.

ಮೇಲಿನ ಔಷಧಿಯ ವಿವರಣೆಗಳೆಲ್ಲವೂ ತೀರ್ಥಹಳ್ಳಿ ಪ್ರದೇಶದಲ್ಲಿ ಬಳಕೆಯಲ್ಲಿರುವ ಜನಪದ ಔಷಧಿಯ ವಿವರಗಳು. ಇನ್ನು ಆಯರ್ವೇದ ಔಷಧಿಯಲ್ಲಿ ಕಾಳುಮೆಣಸನ್ನು ಜೀರ್ಣಕ್ರಿಯೆಗೆ ಸಹಾಯ ಮಾಡಲು, ಹಸಿವನ್ನು ಸುಧಾರಿಸಲು, ನೆಗಡಿ, ಕೆಮ್ಮು, ಉಸಿರಾಟ, ಹೃದಯ ಸಮಸ್ಯೆಗಳು, ಉದರ ಶೂಲೆ, ಮಧುಮೇಹ ನಿಯಂತ್ರಣ, ರಕ್ತಹೀನತೆ, ಋತುಸ್ರಾವದ ಸಮಸ್ಯೆಗಳು, ನಿದ್ರಾಹೀನತೆ, ಬಾಯಿಹುಣ್ಣು, ಹುಳುಕು ಹಲ್ಲು, ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಣದಲ್ಲಿ ಇಡಲು, ಫೈಲ್ಸ್‌ನಂತಹ ಚಿಕಿತ್ಸೆಗಳಲ್ಲಿ ಇತರ ಮೂಲಿಕೆಗಳೊಂದಿಗೆ ಬಳಸಲ್ಪಡುತ್ತದೆ ಎಂದು ಉಲ್ಲೇಖಿಸಲಾಗಿದೆ. ಚೂರ್ಣವಾಗಿ ಹಾಗೂ ಕಷಾಯರೂಪಗಳಲ್ಲಿ ಉಪಯೋಗಿಸುವ ಕ್ರಮವಿದೆ. ಬಾಹ್ಯ ಲೇಪನವಾಗಿ ಕೂದಲು ಉದುರುವುದನ್ನು ನಿಯಂತ್ರಿಸಲು ಮತ್ತು ಚರ್ಮದ ಕಾಯಿಲೆಗಳನ್ನು ಗುಣಪಡಿಸಲು ಉಪಯೋಗಿಸಲಾಗುತ್ತದೆ. ಕಾಳುಮೆಣಸಿನ ಎಣ್ಣೆಯು ತುರಿಕೆಯನ್ನು ನಿವಾರಿಸುತ್ತದೆ ಎಂದು ಹೇಳಲಾಗಿದೆ.

ಯುರೋಪ್ ರಾಷ್ಟ್ರಗಳಲ್ಲಿ ಕಾಳುಮೆಣಸನ್ನು ಔಷಧಿಗಿಂತ ಅಡಿಗೆಯಲ್ಲಿ ಹೆಚ್ಚು ಬಳಸುವುದನ್ನು ಕಾಣಬಹುದು. ಇದಕ್ಕೆ ಕಾರಣ ಅಲ್ಲಿಯ ಶೀತ ಹವಾಮಾನ. ನಮ್ಮ ದೇಶದಲ್ಲೂ ಪಶ್ಚಿಮ ಘಟ್ಟಗಳ ಭಾಗದಲ್ಲಿ ಅತಿಯಾದ ಮಳೆ ಮತ್ತು ಶೀತ ವಾತಾವರಣದಲ್ಲಿರುವ ಜನರು ಕಾಳುಮೆಣಸನ್ನು ಅಡಿಗೆಯಲ್ಲಿ ಅಧಿಕವಾಗಿಯೆ ಉಪಯೋಗಿಸುತ್ತಾರೆ. ಬಯಲು ಪ್ರದೇಶದಲ್ಲಿ ಶೀತ ವಾತಾವರಣ ಇಲ್ಲದ ಕಾರಣ ಇದನ್ನು ಬಳಸುವ ಅನಿವಾರ್ಯ ಕಡಿಮೆ ಎನ್ನಬಹುದು. ಅಲ್ಲದೆ ಬಯಲು ಭಾಗದವರಿಗೆ ಹಸಿಮೆಣಸಿಕಾಯಿ ಬೆಳೆಯುವ ವಿಫುಲ ಅವಕಾಶ ಇರುವುದರಿಂದ ಅಡಿಗೆಯಲ್ಲಿ ಕಾಳುಮೆಣಸಿನ ಬಳಕೆಗೆ ಮಹತ್ವವನ್ನು ನೀಡಲಿಲ್ಲ. ಆದರೆ ಸಾಂಪ್ರದಾಯಿಕ ಔಷಧಿಯಲ್ಲಿ ಕಾಳುಮೆಣಸನ್ನು ಎಲ್ಲಾ ಭಾಗದ ಹಳ್ಳಿವೈದ್ಯರು ಉಪಯೋಗಿಸುತ್ತಾರೆ. ಬಯಲು ಪ್ರದೇಶದ ಜನರು ತಮ್ಮ ಮನೆಯಲ್ಲೇ ತಯಾರಿಸುವ ಔಷಧಿಯಲ್ಲಿ ಕಾಳುಮೆಣಸಿನ ಬಳಕೆ ವಿರಳ. ಉದಾ: ಮಕ್ಕಳ ಜೀರ್ಣಶಕ್ತಿ ಮತ್ತು ತೊದಲು ನಿವಾರಣೆಗೆ ಪಶ್ಚಿಮಘಟ್ಟಗಳ ಜನರು ಬಜೆ, ಜಾಯಿಕಾಯಿಗಳ ಜೊತೆ ಕಾಳುಮೆಣಸನ್ನು ಉಪಯೋಗಿಸುತ್ತಾರೆ. ಇದೇ ಸಮಸ್ಯೆಗೆ ಬಯಲು ಸೀಮೆಯ ಜನರು ಬಜೆ, ಹಿಪ್ಪಲಿ ಮತ್ತು ಜಾಯಿಕಾಯಿಗಳನ್ನಷ್ಟೆ ಬಳಸುತ್ತಾರೆ. ಇತ್ತೀಚೆಗೆ ಎಲ್ಲಾ ಭಾಗದ ಹೋಟೆಲ್ ಹಾಗೂ ಡಾಬಾಗಳಲ್ಲಿ ಬೇಯಿಸಿದ ಮೊಟ್ಟೆ ಹಾಗೂ ಮಸಾಲೆ ತಿನಿಸುಗಳಲ್ಲಿ ಕಾಳುಮೆಣಸಿನ ಪುಡಿಯನ್ನು(ಪೆಪ್ಪರ್ ಪೌಡರ್) ಬಳಸುವುದು ಮಾಮೂಲಿ ಆಗಿದೆ. ಅಡಿಗೆ ಮತ್ತು ಔಷಧಿಗಳಲ್ಲಿ ಬಳಸಿದರೆ ರುಚಿ ಹಾಗೂ ಆರೋಗ್ಯ ರಕ್ಷಕವಾಗಿ ಕಾರ್ಯನಿರ್ವಹಿಸುವ ಗುಣ ಈ ಕಾಳುಮೆಣಸಿಗೆ ಇದೆ. ಹೀಗಾಗಿ ಇದೊಂದು ಬಹುಪಯೋಗಿ ಔಷಧಿಯ ಬಳ್ಳಿಯಾಗಿದೆ.

---

**48ನೇ ಪುಟದಿಂದ....**

ವಾಜಿ ಮಹಾಪೌರರು, ಬಿಬಿಎಂಪಿ. ಅವರಿಗೆ ಸನ್ಮಾನಿಸಲಾಯಿತು. ಬಸವ ಪುತ್ಥಳಿ ಪ್ರತಿಷ್ಠಾನ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಎಸ್.ಸುರೇಶ್‌ಕುಮಾರ್, ಶಾಸಕರು, ರಾಜಾಜಿನಗರ ಕ್ಷೇತ್ರ, ಶ್ರೀ ಸಿ.ಸೋಮಶೇಖರ್ ನಿವೃತ್ತ ಐ.ಎ.ಎಸ್. ಅಧ್ಯಕ್ಷರು, ಶ್ರೀ ಹೆಚ್.ಆರ್.ಮಲ್ಲಿಕಾರ್ಜುನಯ್ಯ, ಪ್ರಧಾನ ಸಂಚಾಲಕರು, ಶ್ರೀ ಎಂ.ಎನ್.ಪ್ರಸಾದ, ಅಭಿಯಂತ್ರಿಕ್ಸ್ ವಿನ್ಯಾಸಕರಾದ ಶ್ರೀ ರಾಮಲಿಂಗಪ್ಪ, ಉಪಾಧ್ಯಕ್ಷರು, ನೊಳಂಬ ಲಿಂಗಾಯತ ಸಂಘ ಹಾಗೂ ಅನೇಕ ಶರಣರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಈ ಕಾರ್ಯಕ್ಕೆ ಶ್ರಮಿಸಿದ್ದಾರೆ. ಎಲ್ಲರಿಗೂ ಶ್ರೀ ಬಸವೇಶ್ವರರು ಅನುಗ್ರಹಿಸಲಿ ಎಂದು ಹಾರೈಸುತ್ತೇನೆ.

**– ಬಿ.ಪಲ್ಲವಿ ಪ್ರಸಾದ್**
751, 10ನೇ ಮೈನ್, 3ನೇ ಬ್ಲಾಕ್,
3ನೇ ಹಂತ, ಬೆಂಗಳೂರು.
ಮೊ : 9845985767

**ನಮ್ಮ ಬ್ಯಾಂಕ್ : ತುಮಕೂರು ವೀರಶೈವ ಕೋ–ಆಪರೇಟೀವ್ ಬ್ಯಾಂಕ್ (ಲಿ)**

**ನೊಳಂಬವಾಣಿ**

**ಖಾತೆ ಸಂಖ್ಯೆ : 00063090000189**

**ಶಾಖೆ : ಬಸವೇಶ್ವರನಗರ, ಬೆಂಗಳೂರು.**

**ಐ.ಎಫ್.ಎಸ್.ಸಿ. : BKL0362TVC**

**ಬ್ಯಾಂಕ್ : IDBI BANK LTD**

# ನೊಳಂಬ ಲಿಂಗಾಯತ ಸಂಘದ
# ವಿವಿಧ ಕಾರ್ಯಕ್ರಮಗಳು

















# ನೊಳಂಬ ಲಿಂಗಾಯತ ಸಂಘದ ವಿವಿಧ ಕಾರ್ಯಕ್ರಮಗಳು

















# ಹೊಳಲ್ಕೆರೆಯಲ್ಲಿ ನಡೆಯಲಿರುವ 853ನೇ ಶ್ರೀಗುರುಸಿದ್ಧರಾಮೇಶ್ವರ ಜಯಂತಿ ಮಹೋತ್ಸವಕ್ಕೆ ವಿವಿಧ ರಾಜಕಾರಣಿಗಳಿಗೆ ಹಾಗೂ ಗಣ್ಯರಿಗೆ ಆಹ್ವಾನ ನೀಡಲಾಯಿತು










**Vol-15 Issue No. : 3** **Periodical**

**RNI No. KARKAN-2012/53684/Dtd. 19-12-2013, Nolamba Vani - Kannada Quarterly**
**July, August, September 2025, Number of Pages 56**







**ಬಾಗಳಿಯ ಕಲ್ಲೇಶ್ವರ ದೇವಸ್ಥಾನದಲ್ಲಿರುವ ನೊಳಂಬರ ಕಾಲದ ನಂದಿ ವಿಗ್ರಹ**

ಗೆ,

Published, Printer and Owner : B.K.Chandrashekar, NOLAMBA ADHYAYANA KENDRA
Owned by on behalf of Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Published from : Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Printed at : Kala Offset Printers, # 1203, 1st Main, 1st Cross, M.C.Layout, Vijayanagar, Bengaluru - 560 040.
Editor : Dr. Rakesh B.C.